ಸಂಪುಟ: 14 Volume ಸಂಚಿಕೆ: 35 Issue ಪುಟಗಳು 08 Pages ಭಾನುವಾರ 10 ಮೇ 2026 ₹4 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಜೀವನದಲ್ಲಿ ಬುದ್ಧಿವಂತಿಕೆಯೊಂದೇ ಸಾಲದು. ತಾಳ್ಮೆ ಮತ್ತು ವಿವೇಚನೆ ಕೂಡ ಮುಖ್ಯ.
–ವಿನೋಬಾ ಭಾವೆ

# ಸಹನೆ ಮತ್ತು ಭಕ್ತಿಯ ಸಾಕಾರಮೂರ್ತಿ; ಹೇಮರೆಡ್ಡಿ ಮಲ್ಲಮ್ಮ



● ವೀರಣ್ಣ ಕಲಕೇರಿ
ಪತ್ರಕರ್ತ ಸಾಹಿತಿ, ಕೆಂಭಾವಿ

**ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ: ಜೀವನ ಮತ್ತು ತತ್ವ ಸಂದೇಶ – ಕೆಂಭಾವಿ ರಥೋತ್ಸವದ ವಿಶೇಷ ಲೇಖನ'**

"ಕರ್ನಾಟಕದ ಶರಣ ಪರಂಪರೆಯಲ್ಲಿ ಕೇವಲ ಪುರುಷರಿಗಷ್ಟೇ ಅಲ್ಲದೆ, ಮಹಿಳೆಯರಿಗೂ ಸಮಾನವಾದ ಆಧ್ಯಾತ್ಮಿಕ ಗೌರವವಿದೆ ಎಂಬುದಕ್ಕೆ ಅನೇಕ ಶಿವಶರಣೆಯರಂತೆ ಹೇಮರೆಡ್ಡಿ ಮಲ್ಲಮ್ಮನವರು ಒಂದು ಜ್ವಲಂತ ಉದಾಹರಣೆ ಎಂದೆ ಹೇಳಬಹುದು. ಶರಣ ಕಾಯಕ ನಿಷ್ಠೆ, ಸ್ತ್ರೀಯ ಸಹಜವಾದ ತಾಳ್ಮೆ, ಸತಿಪತಿಗಳ ಪವಿತ್ರ ಸಂಬಂಧ ಮತ್ತು ಶಿವನ ಮೇಲಿನ ಅಚಲ ಭಕ್ತಿಯ ಮೂಲಕ ಸಂಸಾರವನ್ನೇ ಕೈಲಾಸವನ್ನಾಗಿ ಮಾಡಿಕೊಂಡ ಶಿವ ಭಕ್ತೆ ಮಲ್ಲಮ್ಮಳ ಜೀವನ ಕಥೆ ಸಮಾಜಕ್ಕೆ ದಾರಿ ದೀಪ.

ಮಹಾ ತಪಸ್ವಿನಿ ಹೇಮರೆಡ್ಡಿ ಮಲ್ಲಮ್ಮಳು, ಭಕ್ತಿ ಭಂಡಾರ ಬಸವಣ್ಣನವರ ತತ್ವಗಳನ್ನು ಅಳವಡಿಸಿಕೊಂಡು ಬೆಳೆದವರು. ಆಂಧ್ರ ಮತ್ತು ಕರ್ನಾಟಕದ ಗಡಿಭಾಗಗಳಲ್ಲಿ ಇಂದಿಗೂ ಮನೆಮಾತಾಗಿರುವ ಇವರ ಹೆಸರು ಭಕ್ತಿ ಮತ್ತು ಪತಿವ್ರತಾ ಧರ್ಮಕ್ಕೆ ಪರ್ಯಾಯ ಪದವಾಗಿದೆ. ತನ್ನ ಜೀವನದಲ್ಲಿ ಎದುರಾದ ಅಗ್ನಿಪರೀಕ್ಷೆಗಳನ್ನೆಲ್ಲ ತನ್ನ ಆರಾಧ್ಯ ದೈವ ಶ್ರೀಶೈಲ ಮಲ್ಲಿಕಾರ್ಜುನನ ಭಕ್ತಿಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡ ಈ ಮಹಾಮಾತೆಯ ಬಾಲ್ಯ ಮತ್ತು ದಾಂಪತ್ಯದ ಸನ್ನಿವೇಶಗಳು ನಿಜಕ್ಕೂ ಅತ್ಯಂತ ಹೃದಸ್ಪರ್ಶಿಯಾಗಿವೆ. "ಸಹನೆ ಎನ್ನುವುದು ಹೆಣ್ಣಿನ ದೊಡ್ಡ ಶಕ್ತಿ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ಹೇಮರೆಡ್ಡಿ ಮಲ್ಲಮ್ಮ. ಬರಮರಡ್ಡಿಯ ಮದುವೆಯಾಗಿ ಗಂಡನ ಮನೆಗೆ ಬಂದಾಗ ಅತ್ತೆಯ, ನಾದಿನಿ, ನೆಗೆಣ್ಣಿಯವರ ಕಿರುಕುಳ, ಪತಿಯ ಸಂಶಯದ ನಡುವೆಯೂ ಶಿವನ ಧ್ಯಾನದಿಂದಲೇ ಎಲ್ಲವನ್ನೂ ಗೆದ್ದ ಮಲ್ಲಮ್ಮನವರ ಬದುಕು ಕೇವಲ ಒಂದು ಕಥೆಯಾಗದೆ; ಅದು ಪ್ರತಿ ಹೆಣ್ಣುಮಗಳು ಕಲಿಯಬೇಕಾದ ಆತ್ಮವಿಶ್ವಾಸದ ಪಾಠ. ಅಂತಹ ಮಹಾನ್ ಚೇತನದ ಬದುಕು–ಬರಹದ ಮೇಲೊಂದು ಕಿರು ನೋಟ ಇಲ್ಲಿದೆ."

ಮಲ್ಲಮ್ಮನವರು ಆಂಧ್ರಪ್ರದೇಶದ ಶ್ರೀಶೈಲದ ಹತ್ತಿರವಿರುವ ಸಿದ್ದಾಪುರ ಎಂಬ ಗ್ರಾಮದಲ್ಲಿ ಶ್ರೀಮಂತ ಮನೆತನದ ನಾಗರೆಡ್ಡಿ ಮತ್ತು ಗೌರಮ್ಮ ದಂಪತಿಗಳ ಮಗಳಾಗಿ ಜನಿಸಿದರು. ಮನೆಯ ಸಂಸ್ಕಾರದ ಪ್ರಭಾವದಂತೆ ಬಾಲ್ಯದಿಂದಲೇ ಮಲ್ಲಮ್ಮನವರಿಗೆ ಶ್ರೀಶೈಲ ಮಲ್ಲಿಕಾರ್ಜುನನ ಮೇಲೆ ಅಪಾರ ಭಕ್ತಿ. ಆಟವಾಡಬೇಕಾದ ವಯಸ್ಸಿನಲ್ಲಿಯೇ ಲಿಂಗಪೂಜೆ ಮತ್ತು ಶಿವಧ್ಯಾನದಲ್ಲಿ ಮಗ್ನರಾಗುತ್ತಿದ್ದರು. ಕಾಯಕದ ಜೊತೆಗೆ ಆಧ್ಯಾತ್ಮಿಕ ಸಂಸ್ಕಾರವನ್ನೂ ಮೈಗೂಡಿಸಿಕೊಂಡಿದ್ದರು.




## ವೈವಾಹಿಕ ಜೀವನದ ಭಕ್ತಿಯ ಪರೀಕ್ಷೆ

ಮಲ್ಲಮ್ಮನವರ ವಿವಾಹವು ಶ್ರೀಶೈಲದ ಸಮೀಪವಿರುವ ಸಿದ್ದಾಪುರದ ಹೇಮರೆಡ್ಡಿಯವರ ಮಗನಾದ ಬರಮರೆಡ್ಡಿ ಎಂಬುವವರ ಜೊತೆ ವೈಭವದಿಂದ ನಡೆಯಿತು. ಮಲ್ಲಮ್ಮನವರ ಸಂಸಾರಿಕ ಜೀವನ ಅಷ್ಟು ಸುಲಭವಾಗಿರಲಿಲ್ಲ. ಗಂಡನ ಮನೆಯಲ್ಲಿ ಮಲ್ಲಮ್ಮನವರಿಗೆ ಅವರ ಅತ್ತೆ ಮತ್ತು ನಾದಿನಿಯರಿಂದ ನಿರಂತರವಾಗಿ ತೊಂದರೆಗಳು ಎದುರಾದವು. ವಿಶೇಷವಾಗಿ ಮಲ್ಲಮ್ಮನವರು ಸದಾ ಶಿವನ ಧ್ಯಾನದಲ್ಲಿ ತೊಡಗಿರುವುದು ಮತ್ತು ಅವರ ಅತೀವ ಶಿವಭಕ್ತಿಯು ಮನೆಯವರಿಗೆ ಇಷ್ಟವಿರಲಿಲ್ಲ. ಅವರು ಮಲ್ಲಮ್ಮನವರನ್ನು ಕೇವಲ ಕೆಲಸದಾಕೆಯಂತೆ ನಡೆಸಿಕೊಳ್ಳುತ್ತಿದ್ದರು. ಮಲ್ಲಮ್ಮಳ ಅತ್ತೆ ಆಕೆಗೆ ಉಣ್ಣುವುದಕ್ಕೆ, ಉಡುವುದಕ್ಕೆ ಸರಿಯಾಗಿ ಕೊಡದೆ, ಅವಳನ್ನು ಅಡವಿಗೆ ನೂಕಿ ಸಂಕಷ್ಟಗಳ ಸಂಕೋಲೆಗೆ ಸಿಗಿಸುವಳು. ಆದರೂ ಮಲ್ಲಮ್ಮ ನೊಂದುಕೊಳ್ಳದೆ ಕಾಡಿನಲ್ಲಿ ದನಗಳನ್ನು ಕಾಯುತ್ತಾ ಮಲ್ಲಿಕಾರ್ಜುನನ ಉಪಾಸನೆಯಲ್ಲಿ ಮಗ್ನಳಾಗಿರುತ್ತಿದ್ದಳು.

ದಾನಚಿಂತಾಮಣಿಯಾದ ಮಲ್ಲಮ್ಮನಿಗೆ ಬುದ್ಧಿ ಕಲಿಸಲು ಅವಳ ಅತ್ತೆ ಮನೆಯ ಮುಂದೆ ಭಿಕ್ಷುಕ ಬಂದಾಗ ಸಿಟ್ಟುಗೊಂಡು ಒಲೆಯಲ್ಲಿನ ನಿಗಿನಿಗಿ ಕೆಂಡವನ್ನು ಅವಳ ಬೊಗಸೆಗೆ ಹಾಕಿ, ಬಾಗಿಲಲ್ಲಿ ನಿಂತಿದ್ದ ಭಿಕ್ಷುಕನಿಗೆ ನೀಡಲು ಹೇಳಿದಾಗ, ಮಲ್ಲಮ್ಮ ಅತ್ತೆ ಕೊಟ್ಟ ಕೆಂಡವನ್ನು ಸ್ವೀಕರಿಸಿ ಮನದಲ್ಲಿ ಮಲ್ಲಿಕಾರ್ಜುನನನ್ನು ನೆನೆದು ಭಿಕ್ಷಾರ್ಥಿಯ ಜೋಳಿಗೆಗೆ ಅದನ್ನೇ ನೀಡಿದಾಗ ಅದು ಧಾನ್ಯವಾಗಿ ಮಾರ್ಪಡುತ್ತದೆ. ಹೀಗೆ ಎಲ್ಲಾ ಕಷ್ಟಗಳನ್ನು ತಾಳ್ಮೆ ಮತ್ತು ಕರ್ತವ್ಯ ನಿಷ್ಠೆಯಿಂದ ಸ್ವೀಕರಿಸುತ್ತಿದ್ದ ಮಲ್ಲಮ್ಮ, ಎಂದಿಗೂ ಮರುಮಾತನಾಡದೆ, ಮನೆಯ ಎಲ್ಲಾ ಕಠಿಣ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಾ, ನಿಂದನೆಗಳನ್ನು ಪ್ರಸಾದದಂತೆ ಸ್ವೀಕರಿಸಿದರು. "ಕಾಯಕವೇ ಕೈಲಾಸ" ಎಂಬಂತೆ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಪಾಲಿಸುತ್ತಾ ಮಲ್ಲಮ್ಮ ಕೇವಲ ಒಬ್ಬ ಭಕ್ತೆಯಲ್ಲ, ಬದಲಾಗಿ ತಾಳ್ಮೆ, ಸೌಜನ್ಯ ಮತ್ತು ಅಚಲ ನಂಬಿಕೆಯ ಪ್ರತೀಕವಾಗಿ, ಪತಿಗೆ ತಕ್ಕ ಪತ್ನಿಯಾಗಿ ಬಾಳಿದರು.

**ಬದಲಾದ ಪತಿಯ ಮನಸ್ಸು:** ಆರಂಭದಲ್ಲಿ ಪತಿ ಬರಮರೆಡ್ಡಿ ತನ್ನ ತಾಯಿ ಮತ್ತು ತಂಗಿಯರ ಚಾಡಿ ಮಾತುಗಳನ್ನು ನಂಬಿ, ಮಲ್ಲಮ್ಮನವರ ನಡತೆಯ ಬಗ್ಗೆ ಸಂಶಯ ಪಟ್ಟಿದ್ದನು. ಆದರೆ, ಕಾಲಕ್ರಮೇಣ ಮಲ್ಲಮ್ಮನವರ ಅಚಲವಾದ ಪತಿವ್ರತಾ ಧರ್ಮ, ಅವರ ಪವಿತ್ರವಾದ ಭಕ್ತಿ ಮತ್ತು ಯಾವುದೇ ಕಷ್ಟ ಬಂದರೂ ಅಲುಗಾಡದ ಅವರ ವ್ಯಕ್ತಿತ್ವವನ್ನು ಕಂಡು ಬರಮರೆಡ್ಡಿಗೆ ಸತ್ಯದ ಅರಿವಾಯಿತು. ಮಲ್ಲಮ್ಮನವರ ಆಧ್ಯಾತ್ಮಿಕ ಶಕ್ತಿಗೆ ಮಾರುಹೋದ ಆತ, ತನ್ನ ತಪ್ಪನ್ನು ತಿದ್ದಿಕೊಂಡು ಅವರನ್ನು ಗೌರವದಿಂದ ಕಾಣಲು ಪ್ರಾರಂಭಿಸಿದನು.



**ಮಲ್ಲಮ್ಮಳ ಪವಾಡಗಳು:** ಮಲ್ಲಮ್ಮನವರ ದಾಂಪತ್ಯ ಜೀವನದಲ್ಲಿ ಅನೇಕ ಪವಾಡಗಳು ನಡೆದವು ಎನ್ನಲಾಗುತ್ತದೆ. ಮಲ್ಲಮ್ಮನ ಭಕ್ತಿಯನ್ನು ಪರೀಕ್ಷಿಸಲು ಮನೆಯವರು ಕಲ್ಲಿನ ನಂದಿ ವಿಗ್ರಹಕ್ಕೆ ಹುಲ್ಲು ತಿನಿಸುವಂತೆ ಸವಾಲು ಹಾಕಿದರು. ಮಲ್ಲಮ್ಮನ ನಿಷ್ಕಲ್ಮಶ ಭಕ್ತಿಗೆ ಮೆಚ್ಚಿ ಕಲ್ಲಿನ ಬಸವಣ್ಣ ಜೀವತಳೆದು ಹುಲ್ಲು ಮೇಯುವ ಮೂಲಕ ಆಕೆಯ ಸತ್ಯವನ್ನು ಜಗತ್ತಿಗೆ ಸಾರಿದನು ಎಂಬ ಪ್ರತೀತಿ. ಹಸುವಿನ ಹಾಲನ್ನು ಕರೆಯುವಾಗ ಕರು ಇಲ್ಲದಿದ್ದರೂ ಹಾಲು ಬರುವುದು, ಒಣಗಿದ ಕಟ್ಟಿಗೆಗಳು ಚಿಗುರುವುದು ಮುಂತಾದವುಗಳ ಮೂಲಕ ಅವರ ಪವಿತ್ರತೆ ಸಾಬೀತು ಪಡಿಸಿದಳು. ಶ್ರೀಶೈಲದಲ್ಲಿ ಮಲ್ಲಮ್ಮ ತಪಸ್ಸು ಮಾಡಿದ ಜಾಗದಲ್ಲಿ ಇಂದಿಗೂ ಒಂದು ನೀರಿನ ಸೆಲೆ ಹರಿಯುತ್ತಿದೆ. ಇದನ್ನು ಭಕ್ತರು ಆಕೆಯ ಭಕ್ತಿಯ ಕಣ್ಣೀರು ಎಂದು ಕರೆಯುತ್ತಾರೆ.

**ಸಹನೆ ಮತ್ತು ಕ್ಷಮಾಗುಣದ ಸಾಕಾರಮೂರ್ತಿ ಮಲ್ಲಮ್ಮ:** ಶಿವಶರಣೆ ಮಲ್ಲಮ್ಮನವರ ಜೀವನವು ಕೇವಲ ಒಂದು ಐತಿಹಾಸಿಕ ಕಥೆಯಲ್ಲ, ಅದು ಸಹನೆ, ಸಮರ್ಪಣೆ ಮತ್ತು ಮನುಕುಲಕ್ಕೆ ಮಾದರಿಯಾದ ಶ್ರೇಷ್ಠ ಜೀವನಪಾಠ. "ಕಾಯಕವೇ ಕೈಲಾಸ" ಎಂಬ ಬಸವತತ್ವವನ್ನು ತಮ್ಮ ಸಂಸಾರದಲ್ಲಿ ಅನ್ವಯಿಸಿ ತೋರಿಸಿದ ಮಲ್ಲಮ್ಮನವರು, ಗಂಡನ ಮನೆಯಲ್ಲಿ ಅನುಭವಿಸಿದ ಕಠಿಣ ಕಿರುಕುಳ, ನೀಡಿದ ಕೆಲಸಗಳು ಎಂದಿಗೂ ಹೊರೆಯೆಂದು ಭಾವಿಸಲಿಲ್ಲ. ಬದಲಾಗಿ, ಪ್ರತಿಯೊಂದು ಕೆಲಸವನ್ನೂ 'ಶಿವನ ಸೇವೆ' ಎಂದು ಭಾವಿಸುವ ಮೂಲಕ ಕಾಯಕವನ್ನು ಭಕ್ತಿಯನ್ನಾಗಿ ಪರಿವರ್ತಿಸಿದರು.

ಬಾಹ್ಯ ಪ್ರಪಂಚದ ಟೀಕೆಗಳು ಅಥವಾ ದೌರ್ಜನ್ಯಗಳು ಅವರ ಅಂತರಂಗದ ಶಾಂತಿಯನ್ನು ಎಂದಿಗೂ ಕೆಡಿಸಲಿಲ್ಲ. ಸುಖ ಮತ್ತು ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಅದ್ಭುತ ಸ್ಥಿತಪ್ರಜ್ಞೆ ಅವರಲ್ಲಿತ್ತು. ದ್ವೇಷಕ್ಕೆ ಪ್ರೀತಿಯೇ ಮದ್ದು ಎಂಬ ತತ್ವದಂತೆ ಬದುಕಿದ ಅವರು, ತನಗೆ ಕೆಟ್ಟದ್ದನ್ನು ಮಾಡಿದವರಿಗೂ ಒಳ್ಳೆಯದನ್ನೇ ಹಾರೈಸುವ ಮೂಲಕ ಶರಣ ಸಂಸ್ಕೃತಿಯ ಹಿರಿಮೆಯನ್ನು ಎತ್ತಿಹಿಡಿದರು. ತನ್ನನ್ನು ನಿರಂತರವಾಗಿ ಪೀಡಿಸಿದ ಅತ್ತೆ–ಮಾವಂದಿರು ಮುಂದೆ ಅವರ ದೈವಿಕ ಶಕ್ತಿಯನ್ನು ಅರಿತು ಭಯದಿಂದ ಕ್ಷಮೆ ಕೇಳಿದಾಗ, ಅಹಂಕಾರ ತೋರದೆ ಅವರ ಪಾದಕ್ಕೆ ನಮಸ್ಕರಿಸಿ "ನನ್ನ ಭಕ್ತಿ ಪಕ್ವವಾಗಲು ನೀವೇ ಕಾರಣ, ನೀವು ನನ್ನ ಗುರುಗಳು" ಎಂದು ಹೇಳುವ ಮೂಲಕ ಕ್ಷಮಾಗುಣದ ಉತ್ತುಂಗವನ್ನು ಜಗತ್ತಿಗೆ ತೋರಿಸಿಕೊಟ್ಟರು. ಹೀಗೆ ಶಿವಶರಣೆ ಮಲ್ಲಮ್ಮನವರ ಜೀವನವು ನಮಗೆ ಕಲಿಸುವ ಮುಖ್ಯ ಪಾಠವೇನೆಂದರೆ, "ಸಹನೆಯೇ ಸಕಲ ಸಿದ್ಧಿಗಳಿಗೆ ಮೂಲ." ಅವರ ಸಂದೇಶವು ಯಾವುದೇ ಒಂದು ಸಮುದಾಯಕ್ಕೆ ಸೀಮಿತವಾಗದೆ, ಇಡೀ ಮಾನವಕುಲಕ್ಕೆ ಶಾಂತಿ ಮತ್ತು ಸಹಬಾಳ್ವೆಯ ದಾರಿದೀಪವಾಗಿದೆ.

## ಕೆಂಭಾವಿ ಪಟ್ಟಣದ ಶ್ರೀ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ರಥೋತ್ಸವಕ್ಕೆ ಸರ್ವ ಸದ್ಭಕ್ತರಿಗೆ ಭಕ್ತಿಯ ಸ್ವಾಗತ



ದಿನಾಂಕ: 10–05–2026 ರವಿವಾರ

ಶ್ರೀ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಸಕಲ ಸದ್ಭಕ್ತರು ಹಾಗೂ ದೇವಸ್ಥಾನ ಸಮಿತಿ ಕೆಂಭಾವಿ



ಲಿಂಗಾಂಗ ಸಾಮರಸ್ಯದ ಮಹಾಸಾಧ್ವಿ, ಸತಿ ಶಿರೋಮಣಿ ಹಾಗೂ ಜಾತಿಯತೆಯನ್ನು ಮೀರಿದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ದೇವಸ್ಥಾನವನ್ನು ನಿರ್ಮಾಣ ಮಾಡಬೇಕೆಂಬ ಸುತ್ತಮುತ್ತಲಿನ ಗ್ರಾಮಗಳ ಗುರು–ಹಿರಿಯರ ಸಂಕಲ್ಪದಂತೆ ಹಾಗೂ ಸದ್ಭಕ್ತರ ಆಶಯ ಮತ್ತು ಒತ್ತಾಸೆಯ ಫಲಶೃತಿಯಾಗಿ ಕೆಂಭಾವಿ ಪಟ್ಟಣದ ಹೃದಯಭಾಗದಲ್ಲಿ ಸುಂದರವಾದ ಹೇಮರೆಡ್ಡಿ ಮಲ್ಲಮ್ಮನ ದೇವಾಲಯ ನಿರ್ಮಾಣವಾಗಿದೆ. ಪ್ರತಿ ವರ್ಷ ಏಪ್ರಿಲ್ 30 ರಿಂದ ಹನ್ನೊಂದು ದಿನಗಳವರೆಗೆ ಮಲ್ಲಮ್ಮನ ಬದುಕು, ಬರಹ ಹಾಗೂ ತತ್ವ ಚಿಂತನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಸದುದ್ದೇಶದಿಂದ ಶಿವಶರಣೆಯ ಚರಿತ್ರೆಯ ಪ್ರವಚನ ಆಚರಿಸಲಾಗುತ್ತಿದೆ. 11 ನೇ ವರ್ಷದ ಜಾತ್ರಾಮಹೋತ್ಸವದ ಅಂಗವಾಗಿ ಮೇ 10–2026 ರವಿವಾರ ನಡೆಯುವ ರಥೋತ್ಸವ, ಹೊಸತನಕ್ಕೆ ನಾಂದಿಯಾಗಿದೆ.

–ಡಾ. ಯಂಕನಗೌಡ ಪಾಟೀಲ್, ಉಪನ್ಯಾಸಕರು ಕೆಂಭಾವಿ






## ಬೇಸಿಗೆ ಶಿಬಿರದ ಮಕ್ಕಳಿಂದ ಪೊಲೀಸ್ ಠಾಣೆ ಭೇಟಿ





**ಭಾಲ್ಕಿ:** ಸದ್ಗುರು ವಿದ್ಯಾಲಯ ವತಿಯಿಂದ ನಡೆಯುತ್ತಿರುವ ಬೇಸಿಗೆ ಶಿಬಿರದ ಅಂಗವಾಗಿ ಶಾಲೆಯ ಮಕ್ಕಳು ಶನಿವಾರ ಭಾಲ್ಕಿ ನಗರದ ಪೊಲೀಸ್ ಠಾಣೆಗೆ ಭೇಟಿ ನೀಡಿ ಪೊಲೀಸ್ ಇಲಾಖೆಯ ಕಾರ್ಯವೈಖರಿಯನ್ನು ಸಮೀಪದಿಂದ ಅರಿತುಕೊಂಡರು.

ಪೊಲೀಸ್ ಠಾಣೆಯ ಸಿಬ್ಬಂದಿಗಳು ಮಕ್ಕಳನ್ನು ಆತ್ಮೀಯವಾಗಿ ಸ್ವಾಗತಿಸಿ, ಪೊಲೀಸ್ ಇಲಾಖೆಯ ಕರ್ತವ್ಯಗಳು, ಸಮಾಜದಲ್ಲಿ ಪೊಲೀಸರ ಪಾತ್ರ ಹಾಗೂ ಸಾರ್ವಜನಿಕರ ಸುರಕ್ಷತೆಗಾಗಿ ಕೈಗೊಳ್ಳುವ ಕಾರ್ಯಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು. ಮಕ್ಕಳಿಗೆ ವಿವಿಧ ಪೊಲೀಸ್ ಹುದ್ದೆಗಳ ಬಗ್ಗೆ ತಿಳಿಸಿ, ಕೈಬೇಡಿ, ಬಂದೂಕು ಸೇರಿದಂತೆ ಪೊಲೀಸ್ ಉಪಕರಣಗಳ ಪರಿಚಯ ಮಾಡಿಕೊಡಲಾಯಿತು.

ಪೊಲೀಸ್ ಠಾಣೆಯ ವಿವಿಧ ವಿಭಾಗಗಳನ್ನು ಮಕ್ಕಳಿಗೆ ತೋರಿಸಿ, ಪ್ರತಿಯೊಂದು ವಿಭಾಗದ ಕಾರ್ಯಪದ್ಧತಿಯ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ಇದೇ ಸಂದರ್ಭದಲ್ಲಿ ತುರ್ತು ಸಹಾಯವಾಣಿ ಸಂಖ್ಯೆ 112 ಹಾಗೂ ಪೊಲೀಸ್ ಮೊಬೈಲ್ ಅಪ್ಲಿಕೇಶನ್ ಬಳಕೆ ಕುರಿತು ಮಕ್ಕಳಿಗೆ ಅರಿವು ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಪೊಲೀಸ್ ಪೇದೆ ಶಿವಶರಣು ಅವರು, "ಪೊಲೀಸ್ ಎಂದರೆ ಭಯಪಡುವ ಅಗತ್ಯವಿಲ್ಲ. ನಾವು ಸಾರ್ವಜನಿಕರ ರಕ್ಷಣೆಗಾಗಿ ಇದ್ದೇವೆ" ಎಂದು ಮಕ್ಕಳಿಗೆ ಧೈರ್ಯ ತುಂಬಿದರು.

ಕಾರ್ಯಕ್ರಮದ ಅಂಗವಾಗಿ ಶಾಲೆಯ ಅಧ್ಯಕ್ಷರಾದ ಅಕ್ಷಯ ಮುದ್ದಾ ಅವರು ಎಎಸ್ಐ ಹಾವಗಿರಾವ್ ಅವರನ್ನು ಶಾಲೆಯ ಪರವಾಗಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ಅರ್ಚನಾ, ಕೀರ್ತಿ, ಸಂಜುಕುಮಾರ, ಮಹಾದೇವ ಹಾಗೂ ಶಾಲೆಯ ಸಿಬ್ಬಂದಿ ಸಿದ್ರಾಮ ಶಿವಶಟ್ಟಿ ಉಪಸ್ಥಿತರಿದ್ದರು.

## ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಕೈಗಾರಿಕಾ ವಸಾಹತು



**ಕಲಬುರ್ಗಿ:** ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆ-ಕೆಆರ್‌ಡಿಬಿ) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೈಗಾರಿಕಾ ಚಟುವಟಿಕೆಗಳಿಗೆ ವೇಗ ನೀಡಲು ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷ ಹಾಗೂ ಜೇವರ್ಗಿ ಕ್ಷೇತ್ರದ ಶಾಸಕ ಡಾ. ಅಜಯಸಿಂಗ್ ಅವರು ತಿಳಿಸಿದ್ದಾರೆ.

ಎರಡು ಜಿಲ್ಲೆಗಳಲ್ಲಿ ಒಟ್ಟು 210. 58 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಒಟ್ಟು 200.07 ಕೋಟಿ ರೂ. ಗಳ ವೆಚ್ಚದ ಕ್ರಿಯಾಯೋಜನೆಯನ್ನು ಸಿದ್ಧಪಡಿಸಲಾಗಿದ್ದು ಸಚಿವ ಸಂಪುಟ ಸಭೆ ಅನುಮೋದಿಸಿದೆ. ಕಲಬುರ್ಗಿ ಜಿಲ್ಲೆಯ ನಂದೂರು-ಕೆ ಬಳಿ ಸುಮಾರು 62.58 ಎಕರೆ ವಿಸ್ತೀರ್ಣದಲ್ಲಿ ಹೊಸ ಕೈಗಾರಿಕಾ ವಸಾಹತು ನಿರ್ಮಾಣವಾಗಲಿದೆ. ಇದರ ಒಟ್ಟು ಅಭಿವೃದ್ಧಿ ವೆಚ್ಚ 61.26 ಕೋಟಿ ರೂ.ಗಳಾಗಿದ್ದು, ಇದರಲ್ಲಿ ಕೆಕೆಆರ್‌ಡಿಬಿ ಮತ್ತು ಕೆಎಸ್‌ಎಸ್‌ಐಡಿಸಿ ತಲಾ ಶೇಕಡಾ 50ರಷ್ಟು ಅನುದಾನವನ್ನು ಹಂಚಿಕೊಳ್ಳಲಿವೆ ಎಂದು ಅವರು ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಎರಡು ಪ್ರಮುಖ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಯಾದಗಿರಿ ತಾಲ್ಲೂಕಿನಲ್ಲಿ 100 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಲಾಗುತ್ತಿದ್ದು, ಇದಕ್ಕೆ 96.25 ಕೋಟಿ ರೂ,ಗಳು ವೆಚ್ಚವಾಗಲಿದೆ. ಶಹಾಪುರ ತಾಲ್ಲೂಕಿನ ಹಳಿಸಾಗರ ಗ್ರಾಮದ ಬಳಿ 48 ಎಕರೆ ಪ್ರದೇಶದಲ್ಲಿ 42.56 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೊಳ್ಳಲಿದೆ. ಈ ಯೋಜನೆಗಳಿಗೆ ಬೇಕಾಗುವ ಅಭಿವೃದ್ಧಿ ವೆಚ್ಚದಲ್ಲಿ 100 ಕೋಟಿ ರೂ.ಗಳನ್ನು ಕೆ-ಕೆಆರ್‌ಡಿಬಿ ಭರಿಸಲಿದ್ದು, ಉಳಿದ 100.07 ಕೋಟಿ ರೂ, ಗಳನ್ನು ಕೆಎಸ್‌ಎಸ್‌ಐಡಿಸಿ ಭರಿಸಲಿದೆ. 2025-26ನೇ ಸಾಲಿನ ಅಭಿವೃದ್ಧಿ ಕೆಲಸಗಳಿಗಾಗಿ ಈ ಅನುದಾನ ಮೀಸಲಿಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕೈಗಾರಿಕಾ ನಿವೇಶನಗಳ ಹಂಚಿಕೆಯಲ್ಲಿ ಸರ್ಕಾರದ ನಿಯಮದಂತೆ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕವಾಗಿ ಭೂಮಿ ಮತ್ತು ಅನುದಾನವನ್ನು ಹಂಚಿಕೆ ಮಾಡಲಾಗಿದೆ. ನಿವೇಶನಗಳ ಹಂಚಿಕೆಯ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ (ಸಿಐ 76, 2019 ದಿನಾಂಕ 22-11-2023) ರನ್ವಯ ಪಾರದರ್ಶಕ ನಿಯಮಗಳನ್ನು ಪಾಲಿಸಲಾಗುವುದು. ಈ ಯೋಜನೆಯಿಂದಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಸಿಗಲಿದ್ದು, ಸ್ಥಳೀಯರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ ಎಂದು ಅವರು ಹೇಳಿದ್ದಾರೆ.

# BYSರನ್ನು ಸಿಎಂ ಕುರ್ಚಿಯಿಂದ ಇಳಿಸಿದವರೇ ಗೌರವ ಸಮಾರಂಭ ನಡೆಸುತ್ತಿದ್ದಾರೆ; ಇದು ಅಭಿಮಾನೋತ್ಸವವಲ್ಲ-ರಾಜಕೀಯ ಗಿಮಿಕ್



• ಮಲ್ಲಮ್ಮ ನುಡಿ ವಾರ್ತೆ ಬೆಳಗಾವಿ

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷದ ರಾಜಕೀಯ ಪಯಣವನ್ನು ಸ್ಮರಿಸಲು ಬಿಜೆಪಿ ಆಯೋಜಿಸಿರುವ 'ಅಭಿಮಾನೋತ್ಸವ' ಕಾರ್ಯಕ್ರಮವನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತೀವ್ರವಾಗಿ ಟೀಕಿಸಿದ್ದಾರೆ.

ಇದು ನಿಜವಾದ ಗೌರವ ಸಮಾರಂಭವಲ್ಲ, ರಾಜಕೀಯ ಲಾಭಕ್ಕಾಗಿ ಮಾಡುತ್ತಿರುವ "ರಾಜಕೀಯ ಗಿಮಿಕ್" ಎಂದು ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪರನ್ನು ಬಿಜೆಪಿ ಒಳಗೇ ಮೂಲೆಗುಂಪು ಮಾಡಿದ ನಾಯಕರು ಈಗ ಅವರ ಹೆಸರಿನಲ್ಲಿ ದೊಡ್ಡ ಸಮಾರಂಭಗಳನ್ನು ನಡೆಸುತ್ತಿರುವುದು ರಾಜಕೀಯ ವ್ಯಂಗ್ಯ ಎಂದು ಹೇಳಿದರು.

"ಯಡಿಯೂರಪ್ಪರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದವರು, ಪಕ್ಷದೊಳಗೆ ಅವರಿಗೆ ಅವಮಾನ ಮಾಡಿದವರೇ ಇಂದು ಅವರ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಇದು ನಿಜವಾದ ಗೌರವವಲ್ಲ ಎಂದು ಟೀಕಿಸಿದರು.

ಯಡಿಯೂರಪ್ಪ ಅವರ ರಾಜಕೀಯ ಕೊಡುಗೆಯನ್ನು ಗೌರವಿಸುವ ಉದ್ದೇಶಕ್ಕಿಂತ ಚುನಾವಣಾ ಲಾಭ ಪಡೆಯುವ ರಾಜಕೀಯ ಲೆಕ್ಕಾಚಾರವೇ ಈ ಕಾರ್ಯಕ್ರಮದ ಹಿಂದಿದೆ.

"ಅವರನ್ನು ರಾಜಕೀಯವಾಗಿ ದುರ್ಬಲಗೊಳಿಸಿದವರೇ ಈಗ ಅಭಿಮಾನಿಗಳಂತೆ ವರ್ತಿಸುತ್ತಿದ್ದಾರೆ. ಇದು ಕೇವಲ ಚುನಾವಣಾ ಗಿಮಿಕ್ ಮಾತ್ರ. ರಾಜ್ಯದ ರಾಜಕೀಯದಲ್ಲಿ ಯಡಿಯೂರಪ್ಪ ಅವರಿಗೆ ವಿಶಿಷ್ಟ ಸ್ಥಾನವಿದೆ. ಆದರೆ, ಅವರ ಹೆಸರನ್ನು ಬಳಸಿಕೊಂಡು ಕೆಲವು ನಾಯಕರು ತಮ್ಮ ರಾಜಕೀಯ ಬಲ ಹೆಚ್ಚಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ತಿಳಿಸಲಿದರು.

**ನಾಯಕತ್ವ ವಿಚಾರದಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ:** ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಐದು ವರ್ಷ ಪೂರ್ಣಾವಧಿಗೆ ಅಧಿಕಾರದಲ್ಲಿರುತ್ತಾರೆ ಎಂಬ ಹೇಳಿಕೆಗೆ ಜಾರಿಕಿಹೊಳಿಯವರು ಬೆಂಬಲ ವ್ಯಕ್ತಪಡಿಸಿದರು.

ಸಿದ್ದರಾಮಯ್ಯರನ್ನು ಐದು ವರ್ಷಗಳ ಅವಧಿಗೆ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಗಿದೆ. ಈ ವಿಚಾರದಲ್ಲಿ ಅನಗತ್ಯ ಚರ್ಚೆಗಳ ಅವಶ್ಯಕತೆ ಇಲ್ಲ ಎಂದು ಹೇಳಿದರು.

ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನವೇ ಅಂತಿಮ. ನಾವು ಎಲ್ಲರೂ ಅದನ್ನು ಪಾಲಿಸಲು ಬದ್ಧರಾಗಿದ್ದೇವೆ," ಎಂದು ತಿಳಿಸಿದರು.

## ಪ್ರತಿಭಾ ಪುರಸ್ಕಾರ: ನೌಕರರ ಮಕ್ಕಳಿಂದ ಅರ್ಜಿ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು 2026ನೇ ಸಾಲಿನ ಎಸ್. ಎಸ್. ಎಲ್. ಸಿ. ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕೂ ಅಧಿಕ ಅಂಕಗಳಿಸಿ ಸಾಧನೆಗೈದ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿದೆ. 2026ರ ಎಸ್. -ಎಸ್. ಎಲ್. ಸಿ. , ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲೇ ತೇರ್ಗಡೆಯಾದ ರಾಜ್ಯ ಸರ್ಕಾರಿ ಕಾಯಂ ನೌಕರರ ಮಕ್ಕಳು https://powermedia.info ಲಿಂಕ್ ಬಳಸಿ ಅರ್ಜಿ ಸಲ್ಲಿಸಬಹುದು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಹುಲಸೂರ ತಾಲ್ಲೂಕು ಅಧ್ಯಕ್ಷರಾದ ನಾಗರಾಜ ಹಾವಣ್ಣಾ ತಿಳಿಸಿದ್ದಾರೆ. ಸಂಘದ ನಿಗದಿತ ನಮೂನೆಯಲ್ಲಿ ವಿದ್ಯಾರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಶಾಲಾ, ಕಾಲೇಜಿನ ದೃಢೀಕೃತ ಅಂಕಪಟ್ಟಿ, ಸಂಘದ ಜಿಲ್ಲಾ, ತಾಲ್ಲೂಕು, ಯೋಜನಾ ಶಾಖೆ ಅಧ್ಯಕ್ಷರ ದೃಢೀಕರಣದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಅಪ್ಲೋಡ್ ಮಾಡಬೇಕು ಎಂದು ಹೇಳಿದ್ದಾರೆ.

ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾ ಸಂಸ್ಥೆಯ ನೌಕರರ ಮಕ್ಕಳು ಅರ್ಜಿ ಸಲ್ಲಿಸುವಂತಿಲ್ಲ. ಅರ್ಜಿ ಸಲ್ಲಿಕೆಗೆ ಮೇ 25 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗೆ ರಾಜ್ಯ ಸಂಘದ ದೂರವಾಣಿ ಸಂಖ್ಯೆ 080-22354783/84 ಗೆ ಸಂಪರ್ಕಿಸಬಹುದು. ಹುಲಸೂರ ತಾಲ್ಲೂಕಿನ ಎಸ್. ಎಸ್. ಎಲ್. ಸಿ. ಹಾಗೂ ದ್ವಿತೀಯ ಪಿಯುಸಿಯಲ್ಲಿ ಸಾಧನೆಗೈದ ನೌಕರರ ಮಕ್ಕಳು ತಪ್ಪದೆ ಹೆಸರು ನೋಂದಾಯಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೃಷಿ ವಿಶ್ವವಿದ್ಯಾನಿಲಯ 60ನೇ ಘಟಿಕೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

60 ವರ್ಷಗಳ ಸಂಭ್ರಮಾಚರಣೆಯಲ್ಲಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 60ನೇ ಘಟಿಕೋತ್ಸವ-2026 ವನ್ನು 12ನೇ ಮೇ, 2026 ಮಂಗಳವಾರ ಬೆಳಿಗ್ಗೆ 11.30 ಘಂಟೆಗೆ ಜಿ.ಕೆ.ವಿ.ಕೆ. ಆವರಣದ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರಾಷ್ಟ್ರೀಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು ಈ ಘಟಿಕೋತ್ಸವದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರು ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಕುಲಾಧಿಪತಿಗಳಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಸನ್ಮಾನ್ಯ ಕೃಷಿ ಸಚಿವರು ಹಾಗೂ ಕೃಷಿ ವಿ.ವಿ.ಯ ಸಹಕುಲಾಧಿಪತಿಗಳಾದ ಶ್ರೀ ಎನ್. ಚಲುವರಾಯಸ್ವಾಮಿರವರು ಉಪಸ್ಥಿತರಿರುತ್ತಾರೆ. ಡಾ. ಎಂ.ಜಗದೀಶ್‌ಕುಮಾರ್, ಮಾಜಿ ಅಧ್ಯಕ್ಷರು, ವಿಶ್ವವಿದ್ಯಾನಿಲಯ ಅನುದಾನ ಆಯೋಗ, ನವದೆಹಲಿರವರು ಮುಖ್ಯ ಅತಿಥಿಗಳಾಗಿ ಘಟಿಕೋತ್ಸವದ ಭಾಷಣ ಮಾಡಲಿದ್ದಾರೆ. ಕೃಷಿ ವಿಶ್ವವಿದ್ಯಾನಿಲಯ ಕುಲಪತಿಗಳಾದ ಡಾ.ಎಸ್.ವಿ. ಸುರೇಶ ಪ್ರಸ್ತುತ ಸಾಲಿನ ವಿ.ವಿ. ಸಾಧನೆಗಳನ್ನು ಸಭೆಗೆ ಪರಿಚಯಿಸಲಿದ್ದಾರೆ ಎಂದು ಹಿರಿಯ ವಾರ್ತಾತಜ್ಞರು ಮತ್ತು ಮುಖ್ಯಸ್ಥರಾದ ಡಾ: ಕೆ.ಪಿ.ರಘುಪ್ರಸಾದ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ 60ನೇ ಘಟಿಕೋತ್ಸವ ಕುರಿತು ಜಿಕೆವಿಕೆ, ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಶೈಕ್ಷಣಿಕ ವರ್ಷ 2024-25ರಲ್ಲಿ ತೇರ್ಗಡೆಯಾದ ಒಟ್ಟು 1115 ವಿದ್ಯಾರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಗುತ್ತಿದೆ. ಅದರಲ್ಲಿ 747 ವಿದ್ಯಾರ್ಥಿಗಳು ಸ್ನಾತಕ ಪದವಿಗಳನ್ನು, 260 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಹಾಗೂ 108 ವಿದ್ಯಾರ್ಥಿಗಳು ಡಾಕ್ಟೊರಲ್ ಪದವಿಗಳನ್ನು ಪಡೆಯಲಿದ್ದಾರೆ.

# ಕೃತಕ ಬುದ್ಧಿಮತ್ತೆಯನ್ನು ಹಂಸಕ್ಷೀರ ನ್ಯಾಯದಂತೆ ಬಳಸಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ




ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದ ಐಕ್ಯೂಎಸಿ ಸಹಯೋಗದೊಂದಿಗೆ ಶನಿವಾರ ರಂದು ಹಮ್ಮಿಕೊಂಡಿದ್ದ "ಭೌತಿಕ ಮತ್ತು ಜೀವ ವಿಜ್ಞಾನಗಳಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಅದರ ಅನ್ವಯಗಳು" ವಿಷಯದ ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿಯ ಗಣಕಯಂತ್ರ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಶಿವಾನಂದ ಎಸ್. ರುಮ್ಮ ಅವರು ಮಾತನಾಡುತ್ತಾ ಕೃತಕ ಬುದ್ಧಿಮತ್ತೆಯು ಇಂದಿನ ಅಗತ್ಯತೆಗಳನ್ನು ಪೂರೈಸುವ ಸಾಧನವಾಗಿದೆ. ಇದನ್ನು ಬಹು ಜಾಗರೂಕತೆಯಿಂದ ಹಾಗೂ ಎಚ್ಚರಿಕೆಯಿಂದ ಬಳಸಬೇಕು ಎಂದು ಸಲಹೆ ನೀಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ನೂತನ ವಿದ್ಯಾಲಯ ಸಂಸ್ಥೆಯ ಶೈಕ್ಷಣಿಕ ಮಂಡಳಿಯ ಅಧ್ಯಕ್ಷೆ ಡಾ. ಮೀನಾ ಪತ್ಕಿ ದೇಶಪಾಂಡೆಯವರು ಮಾತನಾಡುತ್ತಾ ಕೃತಕ ಬುದ್ಧಿಮತ್ತೆಯ ಕುರಿತು ಸಮಾಜದಲ್ಲಿ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಅದು ಮನುಕುಲಕ್ಕೆ ಬಹುಪಯೋಗಿಯಾಗಿದೆ ಎಂದು ಹೇಳಿದರು. ವಿಚಾರ ಸಂಕಿರಣದ ಮೊದಲ ಅಧಿವೇಶನದಲ್ಲಿ "ಭೌತಿಕ ವಿಜ್ಞಾನಗಳಲ್ಲಿ ಕೃತಕ ಬುದ್ಧಿಮತ್ತೆ" ವಿಷಯದ ಕುರಿತು ಕರ್ನಾಟಕ ಕಾಲೇಜು, ಬೀದರಿನ ನಿವೃತ್ತ ಪ್ರಾಚಾರ್ಯರದ ಡಾ. ಮಲ್ಲಿಕಾರ್ಜುನ ಹಂಗಾರ್ಗೆಯವರು ಉಪನ್ಯಾಸ ನೀಡುತ್ತ ಕೃತಕ ಬುದ್ಧಿಮತ್ತೆಯ ತಯಾರಕರಾದ ನಾವು ಅದನ್ನು ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ಅದರ ಉಪಯೋಗ ಅವಲಂಬಿಸಿದೆ. ಮುಂದಿನ ದಿನಗಳಲ್ಲಿ ಇದು ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು. ಎರಡನೆಯ ಗೋಷ್ಠಿಯಲ್ಲಿ "ಜೀವ ವಿಜ್ಞಾನಗಳಲ್ಲಿ ಕೃತಕ ಬುದ್ಧಿಮತ್ತೆ" ವಿಷಯದ ಕುರಿತು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯ ಡಾ. ಶಿವಾನಂದ ಎಸ್. ಗೋರ್ನಾಳೆ ಅವರು ವಿಚಾರ ಮಂಡನೆ ಮಾಡುತ್ತಾ ಕೃತಕ ಬುದ್ಧಿಮತ್ತೆಯನ್ನು ಜೀವಶಾಸ್ತ್ರ ಶಿಕ್ಷಣದಲ್ಲಿ ಹೇಗೆ ಬಳಸಬೇಕು ಎಂಬುದರ ಕುರಿತು ಅಗತ್ಯ ಮಾಹಿತಿಯನ್ನು ನೀಡಿದರು.

ರಾಜ್ಯದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು, ಅಧ್ಯಾಪಕರು, ಸಂಶೋಧಕರು ಹಾಗೂ ವಿಜ್ಞಾನಾಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕೃತಕ ಬುದ್ಧಿಮತ್ತೆಯ ಇತ್ತೀಚಿನ ಬೆಳವಣಿಗೆಗಳು ಮತ್ತು ಅದರ ವೈಜ್ಞಾನಿಕ ಅನ್ವಯಗಳ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿದರು. ಮಹಾವಿದ್ಯಾಲಯದ ಸಂಗೀತ ವಿಭಾಗದವರು ಪ್ರಾರ್ಥನಾಗೀತೆಯನ್ನು ಹಾಡಿದರು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ದಯಾನಂದ ಎಂ. ಶಾಸ್ತ್ರಿಯವರು ಸ್ವಾಗತಿಸಿದರು, ಮಹಾವಿದ್ಯಾಲಯದ ನಿರ್ದೇಶಕ ಪ್ರೊ. ಗೋವಿಂದ ಪೂಜಾರ್ ರವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಡಾ. ವಿಷ್ಣು ಗುಂಡಗುರ್ತಿಯವರು ನಿರೂಪಿಸಿದರು.

# ಶ್ರೀ ಹುಲಿಗೆಮ್ಮ ಜಾತ್ರ ಮಹೋತ್ಸವಕ್ಕೆ ಬಸ್ಸುಗಳ ಕೊರತೆ ನೀಗಿಸಿ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ



ಶ್ರೀ ಹುಲಿಗೆಮ್ಮ ದೇವಸ್ಥಾನದ ಜಾತ್ರೆ ಅಂಗವಾಗಿ ನಾನಾ ಕಡೆಯಿಂದ ಗಂಗಾವತಿಗೆ ಬಂದು ಅಲ್ಲಿಂದ ಹುಲಿಗಿಗೆ ಹೋಗಬೇಕಾಗುತ್ತದೆ. ಭಕ್ತಾದಿಗಳು ಶ್ರೀ ಹುಲಿಗೆಮ್ಮ ದೇವಸ್ಥಾನದಲ್ಲಿ ಬೆಳಗಿನ ಜಾವ ಬಾಳೆ ದಿಂಡಿಗೆ ಅಕ್ಕಿ ಪಡಿ ಮತ್ತು ಮಾರನೆಯ ದಿನ ಜಾತ್ರಾ ಮಹೋತ್ಸವದಂದು ಪೂಜ ಆರಂಭವಾಗುತ್ತದೆ ಆ ಸಮಯಕ್ಕೆ ಸರಿಯಾಗಿ ಭಕ್ತಾದಿಗಳು ಇದ್ದರೆ ಅವರಿಗೆ ಪೂಜಾ ಫಲ ಸಿಗುತ್ತದೆ ಎಂದು ನಂಬಿಕೆ ಕಾರಣ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಸಮಯಕ್ಕೆ ಅಂದರೆ ಬೆಳಿಗ್ಗೆ 8:00 ಗಂಟೆಗೆ ವಿಶೇಷ ಬಸ್ಸುಗಳು ಬಿಟ್ಟರೆ ಬಸ್ ನಿಲ್ದಾಣದಲ್ಲಿ ಯಾವ ತರಹದ ಅವಘಡ ಕಳ್ಳತನ ಗಲಾಟೆಗಳಿಗೆ ಕಡಿವಾಡ ಹಾಕಿದಂತಿರುತ್ತದೆ ಹಾಗೂ ಗಂಗಾವತಿ ತಾಲೂಕಿನ ಸುತ್ತು ಗ್ರಾಮದಿಂದ ಗಂಗಾವತಿ ಬಸ್ ನಿಲ್ದಾಣದಿಂದನೇ ಹುಲಿಗಿಗೆ ಹೋಗಬೇಕು ಕಾರಣ ಅಧಿಕಾರಿಗಳು ಬೆಳಿಗ್ಗೆ ಎಂಟು ಗಂಟೆಗೆ ಬಸ್ಸುಗಳನ್ನು ಬಿಟ್ಟರೆ ತುಂಬಾ ಅನುಕೂಲವಾಗುತ್ತದೆ ಹಾಗೂ ಯಾವುದೇ ಘಟನೆ ನಡೆಯಲು ಆಸ್ಪದ ಸಿಗುವುದಿಲ್ಲ

ಇದರಿಂದಾಗಿ ಪ್ರಯಾಣಿಕರು ಸರಳ ಸುರಕ್ಷತವಾಗಿ ದೇವಿಯ ದರ್ಶನ ಪಡೆಯುತ್ತಾರೆ.ಈ ಒಂದು ಮನವಿ ಮೂಲಕ ತಿಳಿಸುತ್ತಿದ್ದೇವೆ ಗಂಗಾವತಿ ಬಸ್ ನಿಲ್ದಾಣದಲ್ಲಿ ಗಂಗಾವತಿಯಿಂದ ಹುಲಿಗಿಗೆ ಹೋಗುವ ಬಸ್ಸುಗಳು ಕಡಿಮೆ ಪ್ರಮಾಣ ಬಿಟ್ಟದ್ದು ಮತ್ತು ಅಗಳಕೇರಿ ಊರಿಗೆ ಹೋಗುವ ಬಸ್ಸುಗಳು ಶಿವಪುರ ಮಾರ್ಗವಾಗಿ ಹುಲಿಗೆ ತಲುಪುವ ಬಸ್ಸುಗಳು ಅಡ್ಡ ದಾರಿಯಲ್ಲಿ ಇರುವ ಗಂಜ್ ನ ಹತ್ತಿರವೇ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿ ಹೋಗುತ್ತಾರೆ. ಆದರೆ ಗಂಜಿನಿಂದ ಸುಮಾರು ಮೂರು ಕಿಲೋಮೀಟರ್ ದೂರವಾಗಿರುವುದರ ಕಾರಣದಿಂದ ಭಕ್ತರಿಗೆ ನಡೆದುಕೊಂಡು ಶ್ರೀ ಹುಲಿಗೆಮ್ಮ ದೇವಸ್ಥಾನದ ಸನ್ನಿಧಾನಕ್ಕೆ ತಲುಪಲು ಭಕ್ತರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ.

ವೃದ್ಧರು ಅಂಗವಿಕಲರು ಮತ್ತು ಮಹಿಳೆಯರು ಪೂಜೆಗೆ ಬೇಕಾಗುವ ಸಾಮಗ್ರಿಗಳ ಪೆಟ್ಟಿಗೆಯನ್ನು ಹೊತ್ತುಕೊಂಡು ಮತ್ತು ತಮ್ಮ ಮಕ್ಕಳನ್ನು ಕ-ರೆದುಕೊಂಡು ಸುಮಾರು 3 ಕಿ.ಮೀ ವರೆಗೂ ನಡೆದುಕೊಂಡೆ ಹೋಗಬೇಕು ಕಾರಣ ಕನಿಷ್ಠ ರೈಲ್ವೆ ನಿಲ್ದಾಣದವರಿಗೂ ಬಸ್ಸುಗಳು ತಲುಪಿ ಪ್ರಯಾಣಿಕರನ್ನು ಇಳಿಸಿ ಹೋಗಬೇಕು ಎಂದು ಜಿ ಹುಲುಗಪ್ಪ ಮಾಸ್ಟರ್ ದಲಿತ ಸಂಘರ್ಷ ಸಮಿತಿ (ಸಂಯೋಜಕರು ) ಸಂಘಟನಾ ಸಂಚಾಲಕರು ಗಂಗಾವತಿ ಇವರು ಸಾರ್ವಜನಿಕರ ಪರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಾಯಿಸಿ ಮಾಧ್ಯಮದ ಮುಖಾಂತರ ಮನವಿ ಮಾಡಿದ್ದಾರೆ.

ಗಂಗಾವತಿಯಿಂದ ಶ್ರೀ ಹುಲಿಗೆಮ್ಮ ಜಾತ್ರಾ ಪ್ರಯುಕ್ತವಾಗಿ ಹೆಚ್ಚುವರಿ ಬಸ್ಸುಗಳು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಿಂದ ತೆರಳುವ ಬಸ್ಸುಗಳು ಹುಲಿಗಿ ಒಳಗಡೆ ಇರುವಂತಹ ರೈಲ್ವೆ ನಿಲ್ದಾಣದ ಹತ್ತಿರವಾದರೂ ಪ್ರಯಾಣಿಕರನ್ನು ಇಳಿಸಿ ಹೋಗಬೇಕೆಂದು ಬಸ್ ಡಿಪೋ ಮ್ಯಾನೇಜರ್ ಹಾಗೂ ವ್ಯವಸ್ಥಾಪಕ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಬಸ್ಸುಗಳಿಗೆ ಸೂಚನೆ ನೀಡಬೇಕೆಂದು ಒತ್ತಾಯ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಿಂದ ಹುಲಿಗಿಗೆ ತೆರಳುವ ಬಸ್ಸುಗಳ ಆದಾಯ ಯಾವ ತಾಲೂಕಿನಲ್ಲಿಯೂ ಕಂಡಿಲ್ಲ.

ಶ್ರೀ ಹುಲಿಗೆಮ್ಮ ಜಾತ್ರಾ ಪ್ರಯುಕ್ತ ವಿಶೇಷ ಬಸ್ಸುಗಳು ಬಿಟ್ಟುರುವಂತಹ ಹಿಂದೆ ಇರುವ ಆದಾಯಗಳ ದಾಖಲೆಗಳು ತಾವು ಸ್ಮರಿಸಬಹುದು.ಸಂಬಂಧಪಟ್ಟ ಗಂಗಾವತಿ ಬಸ್ ಡಿಪೋ ಮ್ಯಾನೇಜರ್, ವ್ಯವಸ್ಥಾಪಕರು ಸಂಬಂಧಪಟ್ಟ ಅಧಿಕಾರಿಗಳು ಪ್ರಯಾಣಿಕರ ಪರ ಈ ಸೌಲಭ್ಯ ಬೇಕೆಂದು ಜೀ ಹುಲುಗಪ್ಪ ಮಾಸ್ತರ್ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನೆ ಸಂಚಾಲಕರು ಹಾಗೂ ಪದಾಧಿಕಾರಿಗಳ ಸದಸ್ಯರು ಒತ್ತಾಯಿಸಿದ್ದಾರೆ. ಒಂದು ವೇಳೆ ಈ ಬಸ್ಸುಗಳ ಸೌಲಭ್ಯಗಳನ್ನು ದೊರಕದೆ ಹೋದಲ್ಲಿ ನಮ್ಮ ಸಂಘಟನೆ ವತಿಯಿಂದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.



ಹುಣಸೂರು:ಗ್ಯಾರೆಂಟಿ ನ್ಯೂಸ್ ವತಿಯಿಂದ ಗೇಮ್ ಚೇಂಜ್ ಅವಾರ್ಡ್ ಜೀರೋ ಟು ಹೀರೋ ಅವಾರ್ಡ್ ಸ್ವೀಕರಿಸಿದ ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾದ ತ್ರಿವೇಣಿ ಅವರಿಗೆ ಸಚಿವರದ ಲಕ್ಷ್ಮಿ ಹೆಬ್ಬಾಳ್ಕರ್ ನೀಡಿ ಸನ್ಮಾನಿಸಿ ಗೌರವಿಸಿದರು ಈ ಸಂದರ್ಭದಲ್ಲಿ ಹುಣಸೂರು ತಾಲೂಕಿನ ಸಂಗೊಳ್ಳಿ ರಾಯಣ್ಣ ತಾಲೂಕು ಅಧ್ಯಕ್ಷ ಅಶೋಕ್ ಕುಮಾರ್ ಹಾಗೂ ಇನ್ನಿತರ ಹಾಜರಿದ್ದರು

# ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶೇ.100ರಷ್ಟು ಫಲಿತಾಂಶ

- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಮೇ.9:ತಾಲೂಕಿನಕೋನಮೇಳಕುಂದಾ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100ರಷ್ಟುಫಲಿತಾಂಶ ಲಭಿಸಿದೆ ಎಂದು ಪ್ರಿನ್ಸಿಪಲ್ ರೇವಣಸಿದ್ದಪ್ಪ ಚಕ್ರಕರ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳಾದ ಆದಿತ್ಯ ಉಮೇಶ ಮತ್ತು ಸುಮಿತ್ ಶ್ಯಾಮ್ 625ಕ್ಕೆ ತಲಾ 602 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿನಿ ಭವಾನಿ ಗೋಪಾಲರೆಡ್ಡಿ 598 ಅಂಕ ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ.

ಪರೀಕ್ಷೆಗೆ ಹಾಜರಾದ ಒಟ್ಟು 35 ವಿದ್ಯಾರ್ಥಿಗಳು ಪಾಸಾಗಿದ್ದಾರೆ. 7 ಅಗ್ರಶ್ರೇಣಿ, 22 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿ ಶಾಲೆಗೆ ಕೀರ್ತಿ ತಂದು ಕೊಟ್ಟಿದ್ದಾರೆ. ಹರ್ಷ : ವಿದ್ಯಾರ್ಥಿಗಳ ಸಾಧನೆಗೆ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಯೋಗೇಶ್ ಎಸ್.ಬಿ, ಜಿಲ್ಲಾ ಸಮನ್ವಯಧಿಕಾರಿ ಶರಣಪ್ಪಬಿರಾದಾರ್,ಪ್ರಾಚಾರ್ಯ ರೇವಣಸಿದ್ದಪ್ಪ ಚಕ್ರಕರ್ ಸೇರಿದಂತೆ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತ ಪಡಿಸಿದ್ದಾರೆ.

# ವಿದ್ಯುತ್ ತಂತಿ ತಗುಲಿ ಲಾರಿ ಚಾಲಕ ದುರ್ಮರಣ



- ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಕಂಪ್ಲಿ ರಸ್ತೆಯಲ್ಲಿರುವ ಕೋಳಿ ಫಾರಂ ಸಮೀಪದ ಲೇಔಟ್‌ನಲ್ಲಿ ದುರ್ಘಟನೆಯೊಂದು ಸಂಭವಿಸಿ ಲಾರಿ ಚಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಡೆದಿದೆ.

ಗಂಗಾವತಿ ತಾಲೂಕಿನ ಬಂಕಾಪುರ ಗ್ರಾಮದ ನಿವಾಸಿ ಸೋಮ ಎನ್ನುವ ಯುವಕ ಟಿಪ್ಪರ್ ನಲ್ಲಿ ತರಲಾಗಿದ್ದ ಮರಮನ್ನು ಕಂಪ್ಲಿ ರಸ್ತೆಯಲ್ಲಿರುವ ಕೋಳಿ ಫಾರಂ ಪಕ್ಕದ ಲೇಔಟ್ ನಲ್ಲಿ ಅನ್ಲೋಡ್ ಮಾಡುವ ವೇಳೆ ಲಿಫ್ಟ್ ಮೇಲಕ್ಕೆ ಎತ್ತಿದ ಸಂದರ್ಭದಲ್ಲಿ ಲಾರಿಗೆ ಮೇಲ್ಭಾಗದಲ್ಲಿದ್ದ ವಿದ್ಯುತ್ ತಂತಿ ತಗುಲಿದ ಪರಿಣಾಮ ವಿದ್ಯುತ್ ಪ್ರವಹಿಸಿ ಚಾಲಕ ಗಂಭೀರವಾಗಿ ಗಾಯಗೊಂಡಿದ್ದಾನೆ. ಕೂಡಲೇ ಭಾರತೀಯ ಪ್ರಜಾ ಸೇನೆಯ ಅಲ್ಪಸಂಖ್ಯಾತ ಜಿಲ್ಲಾಧ್ಯಕ್ಷ ನಬಿರಸೂಲ್ ರಕ್ಷಣೆಗಾಗಿ ಮುಂದಾದರೂ, ಅಷ್ಟರಲ್ಲೇ ಚಾಲಕ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ.


ಘಟನಾ ನಡೆದ ತಕ್ಷಣ ಸ್ಥಳಕ್ಕೆ ಪೊಲೀಸರು ಹಾಗೂ ವಿದ್ಯುತ್ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತ ಚಾಲಕನ ಗುರುತು ಹಾಗೂ ಮೂಲ ಊರಿನ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಈ ಘಟನೆಗೆ ಸಂಬಂಧಿಸಿದಂತೆ ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದು, ಲೇಔಟ್ ಪ್ರದೇಶಗಳಲ್ಲಿ ಕಡಿಮೆ ಎತ್ತರದಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿಗಳೇ ಇಂತಹ ಅವಘಡಗಳಿಗೆ ಕಾರಣವಾಗುತ್ತಿವೆ ಎಂದು ಆರೋಪಿಸಿದ್ದಾರೆ.

ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಅಪಾಯಕಾರಿ ಪ್ರದೇಶಗಳಲ್ಲಿ ಎಚ್ಚರಿಕೆ ಫಲಕಗಳನ್ನು ಅಳವಡಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ವೀರಶೈವ ಲಿಂಗಾಯತ ರೆಡ್ಡಿ ಸಮಾಜದಿಂದ ನಾಳೆ ಆರು ಜನ ಗಣ್ಯರಿಗೆ ಗೌರವ ಸನ್ಮಾನ

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಮೇ.9: ನಾಳೆ ಸಂಜೆ ನಗರದ ಬಸವ ಭವನದಲ್ಲಿ ಜಿಲ್ಲಾ ಆಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗು ಮಹಾನಗರ ಪಾಲಿಕೆಯ ಸಹಯೋಗದಲ್ಲಿ ವೀರಶೈವ ಲಿಂಗಾಯತ ರೆಡ್ಡಿ ಸಮಾಜದ ಜಿಲ್ಲಾ ಘಟಕ ಹಮ್ಮಿಕೊಂಡಿರುವ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಮಾಜ ಸೇವೆ ಮಾಡಿರುವ ಆರು ಜನ ಗಣ್ಯರಿಗೆ ಗೌರವ ಸನ್ಮಾನ ಮಾಡಲಿದೆಂದು ಸಮಾಜದ ಅಧ್ಯಕ್ಷ ಡಾ.ಎಸ್.ಜೆ.ವಿ.ಮಹಿಪಾಲ್ ಹೇಳಿದ್ದಾರೆ.ಶೈಕ್ಷಣಿಕ ಕ್ಷೇತ್ರದ ಸೇವೆಗಾಗಿ ಕಿಷ್ಕಿಂದ ವಿಶ್ವ ವಿದ್ಯಾಲಯದ ಕಲಾಧಿಪತಿ ಡಾ.ಯಶವಂತ ಭೂಪಾಲ್. ಸಾಮಾಜಿಕ ಸೇವೆಗಾಗಿ ಸಂಗನಕಲ್ಲು ಬಸವರಾಜ್. ವೈದ್ಯಕೀಯ ಕ್ಷೇತ್ರದ ಸೇವೆಗಾಗಿ ಬಳ್ಳಾರಿ ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ. ಎನ್. ಮಂಜುನಾಥ. ನ್ಯಾಯಾಂಗ ಕ್ಷೇತ್ರದ ಸೇವೆಗಾಗಿ ಮಾಜಿ ಮೇಯರ್ ಪಾರ್ವತಿ ಇಂದುಶೇಖರ್.ಸಾವಯವ ಕೃಷಿಗಾಗಿ ಸಿಂದವಾಳ ಕೇಶವರಡ್ಡಿ ಮತ್ತುಮಾಧ್ಯಮ ಕ್ಷೇತ್ರದ ಸೇವೆಗಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ನಡವಿ ವೀರಭದ್ರಗೌಡ ಅವರನ್ನು ಸಮಾರಂಭದಲ್ಲಿ ಭಾಗವಹಿಸುವ ಗಣ್ಯರು ಸನ್ಮಾನಿಸಲಿದ್ದಾರೆಂದು ಹೇಳಿದ್ದಾರೆ.ನಾಳೆ ಸಂಜೆ 4.15 ರಿಂದ ನಗರದ ದುರ್ಗಮ್ಮ ದೇವಸ್ಥಾನದಿಂದ ಮಲ್ಲಮ್ಮ ಭಾವಚಿತ್ರದ ಮೆರವಣಿಗೆಯು ನಗರದ ಕನಕ ದುರ್ಗಮ್ಮ ದೇವಸ್ಥಾನದ ಆವರಣದಿಂದ ಆರಂಭಗೊಂಡು ವಾಲ್ಮೀಕಿ ವೃತ್ತ(ಎಸ್ಪಿ ವೃತ್ತ) ಮೂಲಕ ವಿವಿಧ ಜನಪದ ಕಲಾ ತಂಡಗಳ ಮೂಲಕ ಬಸವ ಭವನದ ಸಭಾಂಗಣದವರೆಗೆ ನಡೆಯಲಿದೆ.ನಂತರ ಬಸವ ಭವನದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದ್ದು. ಜನಪ್ರತಿದಿಗಳು, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್ ಮಂಜುನಾಥ ಸೇರಿದಂತೆ ಇತರರು ಉಪಸ್ಥಿತರಿರುವರು.ನಗರದ ಉಪನ್ಯಾಸಕ ಬಸವರಾಜ ಅಮಾತಿ ಜಯಂತಿ ಕುರಿತು ಉಪನ್ಯಾಸ ನೀಡುವರು. ಎನ್.ಬಸವರಾಜ್ ತಂಡ ಹೇಮರೆಡ್ಡಿ ಮಲ್ಲಮ್ಮ ಗೀತೆಗಳ ಗಾಯನ ನಡೆಯಲಿದೆ.

# ಕಲ್ಮಠ ಮಹಿಳಾ ಕಾಲೇಜಿನಲ್ಲಿ ಮಹಿಳಾ ಕಲೋತ್ಸವ

- ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ





ಗಂಗಾವತಿ ನಗರದ ಶ್ರೀ ಕೊಟ್ಟೂರೇಶ್ವರ ವಿದ್ಯಾವರ್ಧಕ ಸಂಘದ ಶ್ರೀ ಚನ್ನಬಸವಸ್ವಾಮಿ ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ವಾರ್ಷಿಕೋತ್ಸವದ ಅಂಗವಾಗಿ ವಿಶ್ವಚೇತನ ವಿದ್ಯಾರ್ಥಿನಿ ಒಕ್ಕೂಟದಿಂದ ವಿದ್ಯಾರ್ಥಿನಿಯರಿಗಾಗಿ ಮಹಿಳಾ ಕಲೋತ್ಸವ ಎಂಬ ಸೃಜನಶೀಲ ಅಭಿವ್ಯಕ್ತಿ ಕಾರ್ಯಕ್ರಮ ಹಮ್ಮಿಕೊಂಡಿತ್ತು, ಅದರ ನಿಮಿತ್ಯ ರಂಗೋಲಿ, ಮೆಹಂದಿ , ಕೇಶಾಲಂಕಾರ ಕಲಾ ಸ್ಪರ್ಧೆಗಳು ನಡೆದವು." ಭಾರತೀಯ ಪಾರಂಪರಿಕ ಶೈಲಿ ಮತ್ತು ವಿನ್ಯಾಸ" ಎನ್ನುವ ವಿಷಯ ನೀಡಲಾಗಿತ್ತು. ಹಲವಾರು ವಿದ್ಯಾರ್ಥಿನಿಯರು ಸುಂದರವಾದ ಮುಕ್ತ ರಂಗೋಲಿ ಮತ್ತು ಚುಕ್ಕಿರಂಗೋಲಿಗಳನ್ನು, ಭಾರತೀಯ ಶೈಲಿಯ ಮೆಹಂದಿಗಳನ್ನು ಮತ್ತು ವೈವಿಧ್ಯವಾದ ಕೇಶವಿನ್ಯಾಸಗಳನ್ನು ಪ್ರಸ್ತುತ ಪಡಿಸಿದರು.ಆ ಮೂಲಕ ತಮ್ಮಲ್ಲಿದ್ದ ಸೃಜನಶೀಲ ಕಲೆಯನ್ನು ಅಭಿವ್ಯಕ್ತಿಸಿದರು ಈ ರಂಗೋಲಿ, ಮೆಹಂದಿ ಮತ್ತು ಕೇಶವಿನ್ಯಾಸಗಳು ವೈವಿಧ್ಯತೆಯಿಂದ ಕೂಡಿದ್ದು ನೋಡುಗರ ಮನಸ್ಸನ್ನು ಸೆಳೆದವು. ಈ ಸ್ಪರ್ಧೆಯಲ್ಲಿ ಕುಮಾರಿ ದೀಪಿಕಾ ಮತ್ತು ಭೀಮಮ್ಮ ಪ್ರಥಮ ಸ್ಥಾನವನ್ನು ,ಸ್ವಾತಿ ಮತ್ತು ಸಂಗೀತ ದ್ವಿತೀಯ ಸ್ಥಾನವನ್ನು,ಚುಕ್ಕಿರಂಗೋಲಿಯಲ್ಲಿ ಉಮಾದೇವಿ ಸುಜಾತ ಪ್ರಥಮ ಸ್ಥಾನವನ್ನು, ಸುವರ್ಣ, ಶ್ರೀ ಲಕ್ಷ್ಮಿ ದ್ವಿತೀಯ ಸ್ಥಾನವನ್ನು ,ಗೀತಾ ,ನಂದಿನಿ ತೃತೀಯ ಸ್ಥಾನವನ್ನು ಪಡೆದರು. ಮೆಹಂದಿ ಸ್ಪರ್ಧೆಯಲ್ಲಿ ಪ್ರಥಮಸ್ಥಾನವನ್ನು ಫಲಕ್ ನಾಜ್ ಮತ್ತು ಎಸ್ ಲಕ್ಷ್ಮಿ ಹಾಗೂ ದ್ವಿತೀಯ ಸ್ಥಾನವನ್ನು ಆಲ್ಫಿಯಾ ಹಾಗೂ ಆಲಿಯಾ , ತೃತೀಯ ಸ್ಥಾನವನ್ನು ರೇಖಾ ಮತ್ತು ಆಫ್ರಿನ್ ಪಡೆದರು. ಕೇಶಾಲಂಕಾರ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ದುರ್ಗಮ್ಮ ಮತ್ತು ಜುಲೇಖ ಹಾಗು ದ್ವಿತೀಯ ಸ್ಥಾನವನ್ನು ಭಾಗ್ಯಲಕ್ಷ್ಮಿ ಮತ್ತು ವೀಣಾ ಪಡೆದರು. ಈ ಸ್ಪರ್ಧೆಗಳಿಗೆ ಮಹಾವಿದ್ಯಾಲಯದ ಮಹಿಳಾ ಉಪನ್ಯಾಸಕಿಯರಾದ ಡಾ. ಶಾರದಾ ಪಾಟೀಲ್, ಡಾ. ವಾಣಿಶ್ರೀ ಪಾಟೀಲ್, ಡಾ. ಜರಿನಾ , ಶಾಂತಮ್ಮ ದಿನ್ನಿ, ವಿಜಯಲಕ್ಷ್ಮಿ ,ರಶ್ಮಿ, ಶಿವಮ್ಮ ಹಂಪಮ್ಮ ನಿರ್ಣಾಯಕ ರಾಗಿದ್ದರು.ಪ್ರಾಚಾರ್ಯ ಡಾ. ಶರಣಬಸಪ್ಪ ಕೋಲ್ಕಾರ, ಉಪಪ್ರಾಚಾರ್ಯ ಡಾ. ಕೆ.ಎಂ. ಬಸವರಾಜ್, ಪ್ರೊ.ಜಿ.ಬಸವರಾಜ್, ಡಾ. ಸುರೇಶಗೌಡ, ಪ್ರೊ. ರುದ್ರಗೌಡ ಮುಂತಾದವರು ಉಪಸ್ಥಿತರಿದ್ದರು

# ಬಾಕಿ ವೇತನಕ್ಕಾಗಿ ಉಪಹಾರ ನೀಡದ ಬಳ್ಳಾರಿ ಇಂದಿರಾ ಕ್ಯಾಂಟೀನ್ ಸಿಬ್ಬಂದಿ

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಮೇ.9: ನಗರದಲ್ಲಿನ ಏಳು ಇಂದಿರಾ ಕ್ಯಾಂಟೀನ್ ಗಳಲ್ಲಿ ಇಂದು ಬೆಳಗಿನ ಉಪಹಾರ ವಿತರಣೆಯಾಗಲಿಲ್ಲ. ಕಾರಣ ಇಲ್ಲಿನ ಉದ್ಯೋಗಿಗಳಿಗೆ ವೇತನ ನೀಡದೇ ಇದ್ದುದಕ್ಕೆಂದು ತಿಳಿದು ಬಂದಿದೆ.

ನಗರದ ಮೋತಿ ಸರ್ಕಲ್, ಓಪಿಡಿ, ಟ್ರಾಮಾಕೇರ್ ಸೆಂಟರ್, ಬಾಪೂಜಿನಗರ, ಜಿಲ್ಲಾ ಆಸ್ಪತ್ರೆ, ಬೆಳಗಲ್ಲು ಕ್ರಾಸ್ ನಲ್ಲಿ ಇಂದಿರಾ ಕ್ಯಾಂಟೀನ್ ಗಳಿವೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಬಡ ಜನತೆ ಆರ್ಥಿಕ ಸಂಕಷ್ಟದಿಂದ ಊಟ ಉಪಹಾರ ಇಲ್ಲದೇ ಬದುಕಬಾರದೆಂಬ ಸಂಕಲ್ಪದೊಂದಿಗೆ ರಾಜ್ಯಾದ್ಯಂತ ಈ ಇಂದಿರಾ ಕ್ಯಾಂಟೀನ್ ಗಳನ್ನು ಆರಂಭಿಸಿದರು.

ಇಲ್ಲಿ ಬೆಳಿಗ್ಗೆ 5 ರೂ ಗೆ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ವೇಳೆ 10 ರೂ ಗೆ ಊಟವನ್ನು ನೀಡಲಾಗುತ್ತಿದೆ. ಇದರ ವ್ಯತ್ಯಾಸದ ಹಣವನ್ನು ಆಯಾ ಸ್ಥಳೀಯ ಸಂಸ್ಥೆಗಳಿಂದ ನೀಡುತ್ತಿದೆ.

ಬಳ್ಳಾರಿ ನಗರದ ಏಳು ಕ್ಯಾಂಟೀನ್ ಗಳಲ್ಲಿ ದಿನ ನಿತ್ಯ 3 ರಿಂದ ಸಾವಿರ ಜನ ಊಟ ಉಪಹಾರ ನೀಡಲಾಗುತ್ತದೆ. ಮಾಸಿಕ 13 ರಿಂದ 15 ಲಕ್ಷ ರೂಗಳನ್ನು ಪಾಲಿಕೆ ನೀಡುತ್ತದೆ.ಆದರೆ ಇವಗಳನ್ನು ನಿರ್ವಹಣೆ ಮಾಡಲು ಗುತ್ತಿಗೆ ದಸರ ಕಂಪನಿಗೆ ಕಳೆದ 9 ತಿಂಗಳಿಂದ ಪಾಲಿಕೆಯವರು ಹಣ ನೀಡದ ಕಾರಣ. ಕಂಪನಿಯವರು ಇಲ್ಲಿ ಕೆಲಸ ಮಾಡುತ್ತಿದ್ದ 50 ಕ್ಕೂ ಹೆಚ್ಚು ಸಿಬ್ಬಂದಿಗಳಿಗೆ ಕಳೆದ ಮೂರು ತಿಂಗಳಿಂದ ವೇತನ ನೀಡದ ಕಾರಣ ಅವರು ಇಂದಿನಿಂದ ಉಪಹಾರ ಊಟ ತಯಾರಿಸಿ ಸರಬರಾಜು ಮಾಡದಿರಲು ನಿರ್ಧರಿಸಿದ್ದರು.

ಹಾಗಾಗಿ ಇಂದು ಬೆಳಿಗ್ಗೆ ನಗರದ ಏಳು ಇಂದಿರಾ ಕ್ಯಾಂಟೀನ್ ಗಳಲ್ಲಿ ಉಪಹಾರದ ಸರಬರಾಜು ಆಗಲಿಲ್ಲ. ಕಳೆದ ಎರೆಡು ಮೂರು ದಿನಗಳ ಹಿಂದೆ ಪಾಲಿಕೆ ಬಾಕಿ ಪೈಕಿ ಮೂರು ತಿಂಗಳ ಬಾಕಿ ಹಣ ಬಿಡುಗಡೆ ಮಾಡಿದೆಯಂತೆ.

ಈ ವಿಷಯ ತಿಳಿದು ಕ್ಯಾಂಟೀನ್ ನಿರ್ವಹಣೆ ಮಾಡುವವರಿಗೆ ಕೇಳಿದ್ದರಿಂದ ಅವರು ತಕ್ಷಣ ಎಚ್ಚೆತ್ತು ಸಿಬ್ಬಂದಿಗೆ ಬಾಕಿ ವೇತನ ಕೊಡುವುದಾಗಿ ಹೇಳಿ. ಮಧ್ಯಾಹ್ನ ವೇಳೆಗೆ ಅಡುಗೆ ಸಿದ್ದಪಡಿಸಿ, ಮಧ್ಯಾಹ್ನಕ್ಕೆ ಊಟ ಸರಬರಾಜು ಮಾಡಲಾಯ್ತು. ಇನ್ನೂ ಪಾಲಿಕೆ ಐದು ತಿಂಗಳ ಬಾಕಿ ಹಣ ಬಿಡುಗಡೆ ಮಾಡಬೇಕಿದೆಯಂತೆ.

> ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಡ ಜನತೆ ಹಸಿವಿನಿಂದ ಬಳಲಬಾರದೆಂದು ಆರಂಭಿಸಿದ ಇಂದಿರಾ ಕ್ಯಾಂಟೀನ್ ಗಳು ಯಾವುದೇ ಕಾರಣಕ್ಕೂ ಬಂದ್ ಆಗಬಾರದು. ಸಕಾಲಕ್ಕೆ ಪಾಲಿಕೆ ಅನುದಾನ ನೀಡಬೇಕು
> ಶಿವರಾಜ್ ಹೆಗಡೆ, ಕಾಂಗ್ರೆಸ್ ಮುಖಂಡರು ಬಾಪೂಜಿ ನಗರ, ಬಳ್ಳಾರಿ.

# ಕಲಾ ಪ್ರಕಾರ ಯಾವುದೇ ಇರಲಿ ಸಂಪೂರ್ಣ ತೊಡಗಿಸಿಕೊಂಡು ಪ್ರಬುದ್ಧತೆ ಪಡೆಯಬೇಕು: ಅಮರೇಶ್ ನುಗಡೋಣಿ

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ಇಂದು ರಾಯಚೂರಿನ ಬೆಳಕು ಸಾಹಿತ್ಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ನಿಂದ ಗಡಿನಾಡು ಸಮ್ಮೇಳನ ನಡೆಯಿತು.

ಕೇಂದ್ರಸಾಹಿತ್ಯಅಕಾಡೆಮಿ ಪ್ರಶಸ್ತಿಪುರಸ್ಕೃತ ಡಾ.ಅಮರೇಶ ನುಗಡೋಣಿ ಅವರು ಸಮ್ಮೇಳನ ಉದ್ಘಾಟನೆ ಮಾಡಿ, ರಾಜ್ಯದ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ಈ ಕಾರ್ಯಕ್ರಮದ ಮೂಲಕ ಆಗುತ್ತಿರುವುದು ಸಂತಸದ ಸಂಗತಿ.

ಯಾವುದೇ ಕಲಾ ಪ್ರಕಾರ ಇರಲಿ. ಅದರಲ್ಲಿ ಸಂಪೂರ್ಣ ಮನಸ್ಸು ತೊಡಗಿಸಿಕೊಂಡು ಪ್ರಬುದ್ದತೆ ಪಡೆಯಬೇಕು ಎಂದರು. ಯಾಕೆ, ಯಾರಿಗಾಗಿ ಈ ಕಲೆ ಸಾಹಿತ್ಯ ಎಂಬ ಅರಿವು ಸಹ ಇರಬೇಕು. ಕೇವಲ ಫ್ಯಾಶನ್ ಆಗದೆ, ಕಲಾತ್ಮಕತೆಯನ್ನು ಮೈಗೂಡಿಸಿಕೊಳ್ಳಬೇಕು. ಎಷ್ಟು ಬರೆದೆ ಎಂಬುದು ಮುಖ್ಯ ಅಲ್ಲ. ಅವು ಎಷ್ಟು ಕಾಲ ಸಮಾಜಕ್ಕೆ ಪ್ರಸ್ತುತ ಎಂಬುದನ್ನು ಅರಿತು. ಲೋಕದ ಅನಿಷ್ಟತೆಯನ್ನು ಪ್ರಶ್ನಿಸುವಂತಿರಬೇಕು. ಅಂತಹುದನ್ನು ನಾವು ಶಿವ ಶರಣ ವಚನಗಳಲ್ಲಿ ಕಾಣುತ್ತೇವೆ ಎಂದರು.

ಸಮಾರಂಭಗಳಲ್ಲಿ ಸನ್ಮಾನ ಮಾಡುವುದು, ಮಾಡಿಸಿಕೊಳ್ಳುವುದೇ ಮುಖ್ಯ ಆಗದೆ.

ಸಮಾಜದಲ್ಲಿ ಸನ್ಮಾನ ಮಾಡಿಸಿಕೊಂಡವರು ಹತ್ತು ವರ್ಷಗಳ ನಂತರ ಹೇಗೆ ಗುರುತಿಸಿಕೊಳ್ಳುವಂತೆ ಆಗಿದ್ದಾರೆ ಎನ್ನುವಂತಾಗಬೇಕು.

ಕಲ್ಯಾಣ ಕರ್ನಾಟಕದಲ್ಲಿ ಪ್ರತಿಭೆಗಳು ಇಂತಹ ಸಂಸ್ಥೆ ಮೂಲಕ ಬೆಳಕಿಗೆ ಬರಲಿ ಎಂದು ಆಶಿಸಿದರು. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸರ್ಕಾರ, ಜನಪ್ರತಿನಿಧಿಗಳು, ಶಿಕ್ಷಕರಿಂದ ಮಾತ್ರ ಸಾಧ್ಯ ಇಲ್ಲ. ಎಲ್ಲರೂ ನಾವು ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿ ದುಡಿಯಬೇಕು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಚೋರನೂರು ಕೊಟ್ರಪ್ಪ ಮಾತನಾಡಿ, ಬಳ್ಳಾರಿಯಲ್ಲಿ ಬೆಳಕು ಸಂಸ್ಥೆಯಿಂದ ಇಂತಹ ಗಡಿ ಸಮ್ಮೇಳನ ನಡೆಸಿದ್ದು ಸ್ವಾಗತಾರ್ಹ, ಗಡಿ ಎಂಬುದು ಭೌಗೋಲಿಕವಾಗಿ ಇರುತ್ತೆ, ಆದರೆ ಕಲೆ, ಸಾಹಿತ್ಯ ಸಂಸ್ಕೃತಿಗೆ ಗಡಿ ಇರಲ್ಲ ಸರ್ವತ್ರ ಮಾನ್ಯವಾದುದು ಎಂದರು.

ಸಮ್ಮೇಳನದ ಅಧ್ಯಕ್ಷರಾಗಿ ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರಬಂಡೆ ಇದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ, ಸರ್ಕಾರದ ಅನುದಾನ ಪಡೆಯದೇ ಈ ಬೆಳಕು ಸಂಸ್ಥೆ ಕಲಾವಿದರ ಪ್ರೋತ್ಸಾಹಿಕವಾಗಿ ದಾನಿಗಳ ನೆರವಿನಿಂದಲೇ ನಡೆಸುತ್ತ ಬಂದಿರುವುದು ಹೆಮ್ಮೆಯ ಸಂಗತಿ. ನಮ್ಮಕಾರ್ಯಕ್ರಮಗಳ ಮೂಲಕ ಅನೇಕ ಕಲಾವಿದರನ್ನು ಬೆಳಕಿಗೆ ತಂದಿದೆ,ಆನಂತರ ಅಂತಹವರನ್ನು ಸಾಹಿತ್ಯ ಪರಿಷತ್, ಸರ್ಕಾರ ಗುರುತಿಸಿದೆಂದರು.

ಈ ವೇಳೆ ಬೆಳಕು ಸಂಸ್ಥೆಯ ಗೌರವ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಹಿರೇಮಠ ಅವರು ಗೀತಾ ವಿ.ಆರ್. ಅವರ "ಗೀತಾಮೃತ" ಕೃತಿಯನ್ನು ಲೋಕಾರ್ಪಣೆ ಮಾಡಿದರು.ನಾಡಿನ ಅನೇಕ ಗಣ್ಯರಿಗೆ ಸನ್ಮಾನ, ಪ್ರಶಸ್ತ ಪ್ರದಾನ, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಿತು.

ಸಮಾರಂಭದಲ್ಲಿ , ಜೋಳದರಾಶಿ ತಿಮ್ಮಪ್ಪ, ಡಾ.ಮಯನಿಯಪ್ಪ, ಸಿದ್ದರಾಮ ಕಲ್ಮಠ, ಬಸವರಾಜ್ ಬಿಸಲಹಳ್ಳಿ, ಶಿವಮೂರ್ತಿ ಹಿರೇಮಠ, ಎನ್.ಬಸವರಾಜ್, ಎನ್.ವೀರಭದ್ರಗೌಡ, ಡಾ.ವಿಷ್ಣು ಎಂ.ಶಿಂದೆ, ಉಮ್ಮತ್ತೂರು ಇಂದು ಶೇಖರ್, ಡಾ.ಎಸ್.ಎಸ್.ಪಾಟೀಲ್ ಹುಬ್ಬಳ್ಳಿ ಮೊದಲಾದವರು ಇದ್ದರು.

# ಟಿಪ್ಪರ್ ಚಾಲಕನ ಡ್ರೈವಿಂಗ್ ಲೈಸೆನ್ಸ್ ರದ್ದು, ಕಡ್ಡಾಯವಾಗಿ ಸಂಚಾರಿ ನಿಯಮ ಪಾಲಿಸಿ: ಪ್ರದೀಪ್ ಗುಂಟಿ

- ಮಲ್ಲಮ್ಮ ನುಡಿ ವಾರ್ತೆ ಬೀದರ



ಮೇ 09: ಅತಿವೇಗ, ನಿಷ್ಕಾಳಜಿಯಿಂದ ಟಿಪ್ಪರ್ ಚಲಾಯಿಸಿ,ಇಬ್ಬರು ವಾಹನ ಸವಾರರ ಸಾವಿಗೆ ಕಾರಣನಾಗಿದ್ದ ಟಿಪ್ಪರ್‌ಚಾಲಕನ ವಾಹನ ಪರವಾನಿಗೆಯನ್ನು ರದ್ದುಪಡಿಸಲಾಗಿದೆ ಎಂದು ಜಿಲ್ಲಾ ಎಸ್ಪಿ ಪ್ರದೀಪ ಗುಂಟಿ ತಿಳಿಸಿದ್ದಾರೆ.

ಮಹಾರಾಷ್ಟದ ರಾಮವಾಡಿ ಗ್ರಾಮದ ವಿಷ್ಣು ಶಿವಾಜಿ ಕೆಂದ್ರೆ ಎಂಬ ಚಾಲಕನ ಪರವಾನಿಗೆ ರದ್ದುಗೊಂಡಿದೆ. ಮಾ.18ರಂದು ಬಸವಕಲ್ಯಾಣದ ಮುಚಳಂಬ ಕ್ರಾಸ್ ಬಳಿಯ ಜೀಜಾಮಾತಾ ಶಾಲೆಯ ಎದುರಿಗೆ ಟಿಪ್ಪರ್ (ಎಂಎಚ್ 46,ಸಿಎಲ್ 4622) ಚಾಲಕ ವಿಷ್ಣು ಅತಿವೇಗ ಹಾಗೂ ನಿಷ್ಕಾಳಜಿಯಿಂದ ಚಲಾಯಿಸಿಕೊಂಡು ಬಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದ. ಘಟನೆಯಲ್ಲಿ ತೀವ್ರ ಗಾಯಗೊಂಡಿದ್ದ ಸೈಯದ್ ದಸ್ತಗೀರ್ ಮತ್ತು ಅವನ ಪತ್ನಿ ಯಾಸ್ಮೀನ್ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದರು. ಬಸವಕಲ್ಯಾಣ ಸಂಚಾರ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ, ಆರೋಪಿಯನ್ನು ಬಂಧಿಸಿ ತನಿಖೆ ಮುಂದುವರೆಸಿದ್ದರು.

ಪ್ರಕರಣದ ತನಿಖಾಧಿಕಾರಿ ಬಸವಕಲ್ಯಾಣದ ಸಿಪಿಐ ಅಲಿಸಾಬ್ ಅವರ ಮನವಿಯಂತೆ ಲಾತೂರಿನ ಆರ್.ಟಿ.ಓ ಚಾಲಕನ ಡ್ರೈವಿಂಗ್ ಲೈಸೆನ್ಸ್ ರದ್ದುಗೊಳಿಸಿ ಆದೇಶಿಸಿದ್ದಾರೆ.

"ಕೋಟ್ "

ಸಂಚಾರ ನಿಯಮ ಪಾಲಿಸಿ ವಾಹನ ಚಾಲಕರು ಜಿಲ್ಲೆಯಲ್ಲಿ ವಾಹನ ಚಾಲನೆ ಮಾಡುವಾಗ ಕಡ್ಡಾಯವಾಗಿ ಸಂಚಾರ ನಿಯಮ ಪಾಲನೆ ಮಾಡಬೇಕು. ಜತೆಗೆ, ಕುಡಿದು ವಾಹನ ಚಲಾಯಿಸಕೂಡದು ಮತ್ತು ಯಾವುದೇ ಚಾಲಕನ ನಿಷ್ಕಾಳಜಿತನದಿಂದ ಅಪಘಾತ ನಡೆದಲ್ಲಿ ಅಂತಹ ಚಾಲಕನನ್ನೇ ನೇರ ಹೊಣೆ ಮಾಡಿ, ಕಾನೂನು ಕ್ರಮ ಜರುಗಿಸಲಾಗುವುದು ಮತ್ತು ವಾಹನ ಚಾಲನಾ ಪರವಾನಿಗೆಯನ್ನು ಕಡ್ಡಾಯವಾಗಿ ರದ್ದುಗೊಳಿಸಲಾಗುವು ಎಂದು ಎಸ್ಪಿ ಪ್ರದೀಪ್ ಗುಂಟಿ ಎಚ್ಚರಿಕೆ ನೀಡಿದ್ದಾರೆ.

# ತುಂಗಭದ್ರ ಹಿನ್ನೀರು ಪ್ರದೇಶದಲ್ಲಿ ಕಪ್ಪುಮಣ್ಣು ಮಾಫಿಯಾ ಅಬ್ಬರ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ತುಂಗಭದ್ರ ಅಣೆಕಟ್ಟಿನ ಹಿನ್ನೀರು ಪ್ರದೇಶಗಳಲ್ಲಿ ಫಲವತ್ತಾದ ಕಪ್ಪುಮಣ್ಣನ್ನು ಅಕ್ರಮವಾಗಿ ಸಾಗಟ ಮಾಡಲಾಗುತ್ತಿದ್ದು, ಇದನ್ನು ತಕ್ಷಣ ತಡೆಹಿಡಿಯಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಅಕ್ರಮ ಮತ್ತು ಲಂಚ ನಿರ್ಮೂಲನೆ ವೇದಿಕೆಯ ರಾಜ್ಯಾಧ್ಯಕ್ಷ ರಮೇಶ ವಿಠಲಾಪುರ ಅವರು ಕೊಪ್ಪಳ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಬೂದಿಹಾಳ, ಬೆಳ್ಳೂರು, ಡಂಬರಳ್ಳಿ, ಗೊಂಡಬಾಳ, ಹಿರೇ ಸಿಂದೋಗಿ, ಮರಿಯಮ್ಮನಹಳ್ಳಿ, ವರದಾಪುರ, ಹೊಸಳ್ಳಿ, ಕಾಸನಕಂಡಿ, ಕಾತರಕಿ, ಗೂಡ್ಲಾನೂರು, ಮಳ್ಳಿಕೇರಿ, ಹ್ಯಾಟಿ ಸೇರಿದಂತೆ ತುಂಗಭದ್ರ ಹಿನ್ನೀರು ಪ್ರದೇಶದ ಗ್ರಾಮಗಳಲ್ಲಿ ನೂರಾರು ಟಿಪ್ಪರ್‌ಗಳ ಮೂಲಕ ಹಗಲು–ರಾತ್ರಿ ಎನ್ನದೆ ಕಪ್ಪುಮಣ್ಣನ್ನು ಕಳ್ಳಸಾಗಣೆ ಮಾಡಲಾಗುತ್ತಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಮಣ್ಣನ್ನು ಕೊಪ್ಪಳ ಹಾಗೂ ಗಂಗಾವತಿ ತಾಲೂಕಿನ ವೆಂಕಟಗಿರಿ ಭಾಗದ ಇಟ್ಟಂಗಿ ಭಟ್ಟಿಗಳಿಗೆ ಯಾವುದೇ ಸರ್ಕಾರದ ಪರವಾನಿಗೆ ಅಥವಾ ಸಂಬಂಧಪಟ್ಟ ಇಲಾಖೆಯ ಅನುಮತಿ ಪಡೆಯದೆ ಸಾಗಿಸಲಾಗುತ್ತಿದೆ ಎಂದು ಆರೋಪಿಸಲಾಗಿದೆ. ಪ್ರತಿ ಟಿಪ್ಪರ್‌ಗೆ ಸುಮಾರು 12 ಸಾವಿರ ವಸೂಲಿ ಮಾಡಲಾಗುತ್ತಿದ್ದು, ಪ್ರತಿದಿನ ಲಕ್ಷಾಂತರ ರೂಪಾಯಿ ಅಕ್ರಮ ವ್ಯವಹಾರ ನಡೆಯುತ್ತಿದೆ ಎಂದು ದೂರಿನಲ್ಲಿ ಹೇಳಲಾಗಿದೆ.




ಹಿಟಾಚಿ ಯಂತ್ರಗಳು ಮತ್ತು ಬೃಹತ್ ಟಿಪ್ಪರ್‌ಗಳ ಮೂಲಕ ಅಣೆಕಟ್ಟಿನ ಹಿನ್ನೀರು ಪ್ರದೇಶದಲ್ಲಿ ಅತಿಯಾಗಿ ಮಣ್ಣು ತೆಗೆಯುತ್ತಿರುವುದರಿಂದ ಭವಿಷ್ಯದಲ್ಲಿ ಅಣೆಕಟ್ಟಿನ ತಳಪಾಯ ಹಾಗೂ ನೈಸರ್ಗಿಕ ಭದ್ರತೆಗೆ ಅಪಾಯ ಉಂಟಾಗುವ ಸಾಧ್ಯತೆ ಇದೆ. ಇದು ನೀರಾವರಿ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಇಷ್ಟೊಂದು ದೊಡ್ಡ ಮಟ್ಟದಲ್ಲಿ ಅಕ್ರಮ ದಂಧೆ ನಡೆಯುತ್ತಿದ್ದರೂ ತುಂಗಭದ್ರ ಡ್ಯಾಂ ಬೋರ್ಡ್, ನೀರಾವರಿ ನಿಗಮ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಮೌನ ವಹಿಸಿರುವುದು ಸಾರ್ವಜನಿಕರಲ್ಲಿ ಅನುಮಾನಕ್ಕೆ ಕಾರಣವಾಗಿದೆ ಎಂದು ಆರೋಪಿಸಲಾಗಿದೆ.

ಈ ಹಿಂದೆ ಕೆರೆಗಳನ್ನೇ ಹಾಳು ಮಾಡಿದ್ದ ದಂದೆಕೋರರು ಈಗ ಸರ್ಕಾರಿ ಸ್ವತ್ತಾದ ಅಣೆಕಟ್ಟಿನ ಹಿನ್ನೀರು ಪ್ರದೇಶದ ಭೂಮಿಯನ್ನೇ ಲೂಟಿ ಮಾಡುತ್ತಿದ್ದಾರೆ. ಕೆಲ ಸರ್ಕಾರಿ ಅಧಿಕಾರಿಗಳ ಬೆಂಬಲವೂ ಈ ಅಕ್ರಮ ದಂಧೆಗೆ ಸಾತ್ ನೀಡುತ್ತಿದ್ದಾರೆ ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿ ನಡೆಯುತ್ತಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಆದ್ದರಿಂದ ಕೊಪ್ಪಳ ಹಾಗೂ ಹೇಮಗುಡ್ಡ ಟೋಲ್‌ಗೇಟ್ ಬಳಿ ಚೆಕ್‌ಪೋಸ್ಟ್ ಸ್ಥಾಪಿಸಿ, ಕಪ್ಪುಮಣ್ಣು ಸಾಗಣೆ ಮಾಡುತ್ತಿರುವ ಟಿಪ್ಪರ್ ಮತ್ತು ಹಿಟಾಚಿ ಯಂತ್ರಗಳನ್ನು ವಶಕ್ಕೆ ಪಡೆದು, ಸಂಬಂಧಪಟ್ಟವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಅಕ್ರಮ ಮತ್ತು ಲಂಚ ನಿರ್ಮೂಲನೆ ವೇದಿಕೆಯ ರಾಜ್ಯಾಧ್ಯಕ್ಷರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸುವುದರ ಮೂಲಕ ಒತ್ತಾಯಿಸಿದ್ದಾರೆ

ಈ ಮನವಿಯ ಪ್ರತಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ತುಂಗಭದ್ರ ಬೋರ್ಡ್ ಹೊಸಪೇಟೆ ಅಧಿಕಾರಿಗಳಿಗೆ ಸಹ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

# ಸತ್ಯನಾರಾಯಣಪೇಟೆಯ ರಾಘವೇಂದ್ರ ಪಾರ್ಕ್ ದುರಸ್ಥಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮೇ.9: ನಗರದ ಸತ್ಯನಾರಾಯಣ ಪೇಟೆಯ ಮೊದಲ ಕ್ರಾಸ್ ನಲ್ಲಿರುವ ರಾಘವೇಂದ್ರಸ್ವಾಮಿ ಪಾರ್ಕ್ ನಲ್ಲಿ ಗೇಟ್, ಬಯಲು ಜಿಮ್ ನ ಹಲವಾರು ಉಪಕರಣಗಳು ಕೆಟದಟು ಹೋಗಿ ಹಲವು ದಿನಗಳಾಗಿದ್ದವು.



ಈ ಬಗ್ಗೆ ಸಾರ್ವಜನಿಕರು ಪಾಲಿಕೆಯ ಅಧಿಕಾರಿಗಳಿಗೆ ಹಲವು ಸಲ ದೂರು ನೀಡಿದ್ದರೂ ದುರಸ್ಥಿ ಆಗಿರಲಿಲ್ಲ. ಆದರೆ ಇದನ್ನು ಮನಗಂಡ ಸ್ಥಳೀಯ ಪಾಲಿಕೆ ಸದಸ್ಯ ಕೆ.ಎಸ್.ಅಶೋಕ ಕುಮಾರ್ ಅವರು ನಿನ್ನೆ ಹಾಳಾಗಿದ್ದ ಗೇಟ್, ಜಿಮ್ ಉಪಕರಣಗಳನ್ನು ದುರಸ್ಥಿ ಮಾಡಿಸಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

# ಅನಧಿಕೃತ ಮನೆ ನಿರ್ಮಾಣಕ್ಕೆ ಬಡಾವಣೆ ನಿವಾಸಿಗಳ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

:ಮೇ.9: ಪಟ್ಟಣದ ಬಾಲಾಜಿ ನಗರ ಬಡಾವಣೆಯ ಸರ್ವೇ ನಂಬರ್ 87ರಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿರಿಸಿದ ಜಾಗದಲ್ಲಿ ಅನಧಿಕೃತವಾಗಿ ಮನೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಬಡಾವಣೆ ನಿವಾಸಿಗಳು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ನಿವೇಶನ ಸಂಖ್ಯೆ 78, 79 ಹಾಗೂ 80ನ್ನು ದೇವಸ್ಥಾನ, ಸಮುದಾಯ ಭವನ, ಶಾಲೆ ಮತ್ತು ಆಟದ ಮೈದಾನ ನಿರ್ಮಾಣಕ್ಕಾಗಿ ಮೀಸಲಿಡಲಾಗಿತ್ತು. ಆದರೆ ಇದೀಗ ಅದೇ ಜಾಗದಲ್ಲಿ ಖಾಸಗಿ ಮನೆ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ಶಿವರಾಜ್ ಸಾಕಾ ತಿಳಿಸಿದ್ದಾರೆ.

ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಾದ ಜಾಗವನ್ನು ಬೇರೆ ಉದ್ದೇಶಕ್ಕೆ ಬಳಸುತ್ತಿರುವುದರಿಂದ ಬಡಾವಣೆಯ ಅಭಿವೃದ್ಧಿಗೆ ಧಕ್ಕೆಯಾಗುತ್ತಿದೆ ಎಂದು ನಿವಾಸಿಗಳು ಆತಂಕ ವ್ಯಕ್ತಪಡಿಸಿದರು.

ತಕ್ಷಣವೇ ನಿರ್ಮಾಣ ಕಾಮಗಾರಿಯನ್ನು ಸ್ಥಗಿ–ತಗೊಳಿಸಿ, ಮೂಲ ಉದ್ದೇಶದಂತೆ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿಗೆ ಜಾಗವನ್ನು ಬಳಸುವಂತೆ ಜಿಲ್ಲಾಧಿಕಾರಿ ಹಾಗೂ ಪುರಸಭೆ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಶರ್ವಾ ಕುಮಾರ್, ಶಿವಕುಮಾರ್ ಜಾಡರ್, ಕೃಷ್ಣಾ, ಬಸವರಾಜ, ಮಹೇಂದ್ರರೆಡ್ಡಿ, ಹರೀಶ್ ಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಶಾಲೆ ವಿಲೀನಕ್ಕೆ ಗ್ರಾಮಸ್ಥರಿಂದ ತೀವ್ರ ವಿರೋಧ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ಜಿಲ್ಲೆಯ ಹೊಸ ಯರಗುಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಕೆಪಿಎಸ್ ಶಾಲೆಗೆ ವಿಲೀನ ಮಾಡುವುದನ್ನು ವಿರೋಧಿಸಿ ಇಂದು ಎಐಡಿಎಸ್‌ಓ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದ ಅಡಿಯಲ್ಲಿ ಗ್ರಾಮಸ್ಥರು ಇಡೀ ಊರೆಲ್ಲಾ ಪ್ರತಿಭಟನಾ ಮೆರವಣಿಗೆ ಮಾಡಿ, ಶಾಲೆ ಮುಂದೆ ಬ್ಯಾನರ್ ಕಟ್ಟಿ, ಶಾಲೆಯ ಮುಖ್ಯ ಶಿಕ್ಷಕರ ಮೂಲಕ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಈ ಶಾಲೆ ಮುಚ್ಚಿದಲ್ಲಿ ನೂರಾರು ತಳ ಸಮುದಾಯದ ಮಕ್ಕಳು ಶಿಕ್ಷಣದಿಂದ ವಂಚಿರಾಗುತ್ತಾರೆ, ಕೆ ಪಿಎಸ್ ಯೋಜನೆ ಶಾಲೆ ಮುಚ್ಚುವ ಹುನ್ನಾರ ಹೊಂದಿರುವ ಯೋಜನೆ ಇದರ ವಿರುದ್ಧ ನಮ್ಮ ಹೋರಾಟವಾಗಿದೆ. ಸರ್ಕಾರ ಜನರ ವಿರೋಧದ ನಡುವೆಯೂ ನಮ್ಮ ಶಾಲೆಯನ್ನು ಮುಚ್ಚಲು ಮುಂದಾದಲ್ಲಿ ನಮ್ಮ ತೀವ್ರ ವಿರೋಧವನ್ನು ಎದುರಿಸಬೇಕಗುತ್ತದೆ ಎಂದು ಎಚ್ಚರಿಕೆ ನೀಡಿದರು ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಜಿಲ್ಲಾ ಉಪಾಧ್ಯಕ್ಷರಾದ ಗುರಳ್ಳಿ ರಾಜ, ಊರಿನ ಮುಖಂಡರಾದ ಘನ ಮಲ್ಲಿ, ಸುಂಕಣ್ಣ, ವೀರೇಶ್, ಶಿವಶಂಕರ್, ಎಂ ವೀರೇಶ್ ಸೇರಿದಂತೆ ಹಲವಾರು ಗ್ರಾಮಸ್ಥರು ಉಪಸ್ಥಿತರಿದ್ದರು

# ಐಪಿಎಲ್ ಟಿಕೇಟ್‌ಗಾಗಿ ಜನಪ್ರತಿನಿಧಿಗಳ ಕಿತ್ತಾಟ ಫೈನಲ್ ಪಂದ್ಯ ಅಹಮದಾಬಾದಗೆ ಶೀಫ್ಟ್, ನಾಚಿಕೆಗೇಡು

ಮೊಹಮ್ಮದ ರಫೀಕ್

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ರಾಜ್ಯದಲ್ಲಿ ಆಯ್ಕೆಯಾದ 224 ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರುಗಳಿಗೆ ಸಾರ್ವಜನಿಕರ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಕಿಂಚಿತ್ತಾದರೂ ಗೊತ್ತಿದ್ದರೆ ಅದನ್ನು ವಿಧಾನಸಭೆಯಲ್ಲಿ ಚರ್ಚಿಸಬಹುದಾಗಿತ್ತು. ಅದನ್ನು ಬಿಟ್ಟು ಐಪಿಎಲ್ ಟಿಕೆಟ್ ಗೋಸ್ಕರ ಹೊಡೆದಾಡುತ್ತಾ ಇವರ ಟಿಕೆಟ್ ಲಾಬಿಯಿಂದ ಬೇಸತ್ತು ಅಹಮದಾಬಾದಿಗೆ ಐಪಿಎಲ್ ಫೈನಲ್ ಶಿಫ್ಟಾಗಿರುವುದು ದುರಾದೃಷ್ಟದ ಸಂಗತಿಯಾಗಿದ್ದು ರಾಜ್ಯದ ಎಲ್ಲಾ 224 ಶಾಸಕರಿಗೂ ಈ ಪ್ರಕರಣ ಛೀಮಾರಿ ಹಾಕಿದಂತಿದೆ.




ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ರವರ ಹೇಳಿಕೆ ಪ್ರಕಾರ ಐಪಿಎಲ್ ಶಿಷ್ಟಾಚಾರದ ಅನ್ವಯ ಕೇವಲ ಶೇಕಡ 15ರಷ್ಟು ಉಚಿತ ಟಿಕೇಟುಗಳನ್ನು ವಿತರಿಸಲು ಮಾತ್ರ ಆತಿಥೇಯ ಸಂಸ್ಥೆಗೆ ಇದ್ದು ಆದರೆ ಇದನ್ನು ಮೀರಿ ರಾಜ್ಯದ 224 ಶಾಸಕರು 70 ವಿಧಾನ ಪರಿಷತ್ ಸದಸ್ಯರು ಹಾಗೂ ರಾಜ್ಯದ ಸಂಸದರುಗಳು ಟಿಕೆಟಿಗೆ ಬೇಡಿಕೆ ಇಟ್ಟಿದ್ದು ವಿಐಪಿ ಒಂದು ಟಿಕೆಟಿಗೆ 25000/– ಗಳಂತೆ ಎರಡು ಟಿಕೆಟ್ಟಳಿಗೆ 50,000ಗಳಂತೆ ರಾಜ್ಯದ ಒಟ್ಟು 700 ರಿಂದ 800 ಟಿಕೆಟ್ಟಳು ಅಂದಾಜು 4 ಕೋಟಿಗೂ ಅಧಿಕ ಹಣ ವ್ಯರ್ಥ ಪೋಲಾಗುತ್ತಿದೆ.

ಇದರ ಗಂಭೀರತೆಯನ್ನು ಅರಿತ ಬಿಸಿಸಿಐ ಐಪಿಎಲ್ ಫೈನಲ್ ಪಂದ್ಯವನ್ನೇ ಅಹ್ಮದಬಾದಿಗೆ ಶಿಫ್ಟ್ ಮಾಡಿರುವುದು ಸರ್ಕಾರವೇ ತಲೆತಗ್ಗಿಸುವಂತ ವಿಷಯವಾಗಿದೆ.

ಜನಪ್ರತಿನಿಧಿಗಳ ಉಚಿತ ಟಿಕೇಟುಗಳ ಲಾಭಿಯನ್ನು ಹೊರತುಪಡಿಸಿ ರಾಜ್ಯದಲ್ಲಿ ಐಪಿಎಲ್ ಪಂದ್ಯಾವಳಿ ನಡೆದಿದ್ದರೆ ಅದೆಷ್ಟೋ ಕೋಟಿಗಳು ಸರ್ಕಾರಕ್ಕೆ ಸಂದಾಯವಾಗುತ್ತಿತ್ತು.

ಸರ್ಕಾರ ಅತಿ ಗಣ್ಯ ವ್ಯಕ್ತಿಗಳನ್ನು, ಪ್ರತಿಭಾವಂತ ವಿದ್ಯಾರ್ಥಿಗಳನ್ನು, ರಾಜ್ಯಕ್ಕೆ ಹೆಮ್ಮೆ ತಂದಂತಹ ಸಾಧಕರನ್ನು ಗುರುತಿಸಿ ಉಚಿತ ಟಿಕೆಟ್ಟಳ ಬೇಡಿಕೆ ಇಟ್ಟಿದ್ದಿದ್ದರೆ ಸರ್ಕಾರದ ಘನತೆ ಹೆಚ್ಚುತ್ತಿತ್ತು ಎಂದರು. ರಾಜ್ಯದ 224 ಶಾಸಕರ ವರ್ತನೆಯಿಂದ ಬೇಸತ್ತ ಕ್ರಿಕೆಟ್ ಮಂಡಳಿ ಬೆಂಗಳೂರಿನಿಂದ ಅಹ್ಮದಾಬಾದಿಗೆ ಶಿಫ್ಟ್, ಇದು ನಾಚಿಕೆಗೇಡಿನ ಸಂಗತಿ* ಸತ್ಯ ಎಂ ಎ ಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ರವರು ತಿಳಿಸಿದ್ದಾರೆ

# ಬಿ.ಎಸ್.ವೈ ಅಭಿಮಾನೋತ್ಸವಕ್ಕೆ ಬೀದರ್‌ನಿಂದ ೩೦೦ಕ್ಕೂ ಹೆಚ್ಚು ಕಾರ್ಯಕರ್ತರ ಪ್ರಯಾಣ




• ಮಲ್ಲಮ್ಮ ನುಡಿ ವಾರ್ತೆ ಬೀದರ

ಮೇ 09: ಮಾಜಿ ಮುಖ್ಯಮಂತ್ರಿ ಹಾಗೂ ಜನನಾಯಕ ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷಗಳ ಸಾರ್ಥಕ ಸಾರ್ವಜನಿಕ ಜೀವನವನ್ನು ಸ್ಮರಿಸುವ ಅಂಗವಾಗಿ "ಬಿ.ಎಸ್.ವೈ ಅಭಿಮಾನೋತ್ಸವ" ಕಾರ್ಯಕ್ರಮವನ್ನು ಚಿತ್ರದುರ್ಗದಲ್ಲಿ ಭವ್ಯವಾಗಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬೀದರ್ ವಿಧಾನಸಭಾ ಕ್ಷೇತ್ರದಿಂದ ಸುಮಾರು 300ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು ನಗರದ ಕೆ.ಇ.ಬಿ ರಸ್ತೆಯಲ್ಲಿರುವ ಹನುಮಾನ ಮಂದಿರದಿಂದ ಪ್ರಯಾಣ ಬೆಳೆಸಿದರು.

ಬಿಜೆಪಿ ಮುಖಂಡ ಈಶ್ವರ್‌ಸಿಂಗ್ ಠಾಕೂರ್ ಅವರ ನೇತೃತ್ವದಲ್ಲಿ ಕಾರ್ಯಕರ್ತರು ವಿಶೇಷ ವಾಹನಗಳ ಮೂಲಕ ಚಿತ್ರದುರ್ಗಕ್ಕೆ ತೆರಳಿದರು. ಕಾರ್ಯಕ್ರಮಕ್ಕೆ ತೆರಳುವ ವಾಹನಗಳಿಗೆ ಧ್ವಜ ತೋರಿಸುವ ಮೂಲಕ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಈಶ್ವರ್‌ಸಿಂಗ್ ಠಾಕೂರ್, ಬಿ.ಎಸ್.ಯಡಿಯೂರಪ್ಪ ಅವರು ರೈತರು, ಕಾರ್ಮಿಕರು ಹಾಗೂ ಸಾಮಾನ್ಯ ಜನರ ಪರ ಹೋರಾಟ ನಡೆಸಿದ ಜನನಾಯಕರು ಎಂದು ಹೇಳಿದರು. ಅವರ ಮಾರ್ಗದರ್ಶನದಲ್ಲಿ ಬಿಜೆಪಿ ರಾಜ್ಯದಲ್ಲಿ ಇನ್ನಷ್ಟು ಬಲಿಷ್ಠವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಭೆಗಳು, ಕಾರ್ಯಕರ್ತರ ಸಮಾವೇಶಗಳು ಹಾಗೂ ಸಂಘಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ. "ಕಾರ್ಯಕರ್ತರ ಬಲವೇ ಪಕ್ಷದ ಶಕ್ತಿ" ಎಂಬ ಸಂದೇಶದೊಂದಿಗೆ ಜನಸಂಪರ್ಕ ಅಭಿಯಾನಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ಪ್ರಯಾಣದಲ್ಲಿ ಮಂಡಲ ಅಧ್ಯಕ್ಷ ದೀಪಕ ಗಾದಗೆ, ಜಿಲ್ಲಾ ಕಾರ್ಯದರ್ಶಿ ರಾಜೇಂದ್ರ ಪೂಜಾರಿ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ನಾಗೇಂದ್ರ ಪಾಟೀಲ್ ಹಾಗೂ ನಿಜಲಿಂಗಪ್ಪ ಪಾಟೀಲ್, ವಿಧಾನಸಭಾ ಉಸ್ತುವಾರಿ ಲುಂಬಿನಿ ಗೌತಮ್, ಮಹಿಳಾ ಮೋರ್ಚಾ ಅಧ್ಯಕ್ಷೆ ಗೀತಾ ಠಾಕೂರ್ ಸೇರಿದಂತೆ ಸಂಜು ಕುಮಾರ್ ದೋಣಿ, ದೇವಪ್ಪ ಸಾಧು, ಭೀಮಣ್ಣ ಚಿಕಪೇಟ್, ನಾಗಶೆಟ್ಟಿ ಬಬಶೆಟ್ಟಿ, ಸತೀಶ್ ಲಧೆ, ಸೀನು ಸಾಲೆ, ವಿಶ್ವನಾಥ್ ರಾಜನಾಳ್, ರವಿ ವಾಲದೊಡ್ಡಿ, ಹನುಮಂತ್ ಮಡಿವಾಳ, ರಮೇಶ್ ರಸೂಲಾಬಾದ್, ಗೋಪಾಲ್ , ದೀಪಕ್ ಚಿದ್ರಿ, ವೀರೇಶ್ ಹಳದಕೇರಿ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದರು.

# 'ಸ್ವಚ್ಛ ಕಲಬುರಗಿ ಶಾಶ್ವತ ಸಮೃದ್ಧಿ' ಮ್ಯಾರಥಾನ್, ಸೈಕ್ಲೋಥಾನ್ ರದ್ದು

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮಹಾನಗರ ಪಾಲಿಕೆಯ ವತಿಯಿಂದ ಮೇ 10ರಂದು ಆಯೋಜಿಸಲಾಗಿದ್ದ 'ಸ್ವಚ್ಛ ಕಲಬುರಗಿ ಶಾಶ್ವತ ಸಮೃದ್ಧಿ' ಹೆಸರಿನ ಮ್ಯಾರಥಾನ್ ಹಾಗೂ ಸೈಕ್ಲೋಥಾನ್ ಕಾರ್ಯಕ್ರಮವನ್ನು ಅನಿವಾರ್ಯ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಸ್ವಚ್ಛ ಭಾರತ ಮಿಷನ್ 2.0ರ ಅಡಿಯಲ್ಲಿ ಸಾರ್ವಜನಿಕರಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಜಗತ್ ವೃತ್ತದಿಂದ ತಿಮ್ಮಾಪುರ ವೃತ್ತದವರೆಗೆ ಜಾಗೃತಿ ಓಟ ಹಾಗೂ ಸೈಕ್ಲೋಥಾನ್ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸುವ ನಿರೀಕ್ಷೆ ಇತ್ತು.

ಆದರೆ ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದ್ದು, ಮುಂದಿನ ದಿನಾಂಕವನ್ನು ಬಳಿಕ ಪ್ರಕಟಿಸಲಾಗುವುದು ಎಂದು ಮಹಾನಗರ ಪಾಲಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

# ಕಾಟಾಚಾರಕ್ಕೆ ಭೇಟಿ ನೀಡಿದ ಅಧಿಕಾರಿ

• ಮಲ್ಲಮ್ಮ ನುಡಿ ವಾರ್ತೆಮುದಗಲ್

ಮಾಹಿತಿ ನೀಡದೆ ಪುರಸಭೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಡೆಸುತ್ತಿರುವ ಕೋಚಿಂಗ್ ಸೆಂಟರ್‌ಗಳಿಗೆ ಶಿಕ್ಷಕ ಇಲಾಖೆ ಅಧಿಕಾರಿಗಳು ಭೇಟಿ ನೀಡಿರುವದು ಸಂಘ ಸಂಸ್ಥೆಗಳ ಮುಖಂಡರ ಆಕ್ರೋಶ ಕಾರಣವಾಗಿದೆ.

ಲಿಂಗಸುಗೂರ ತಾಲ್ಲೂಕಿನಲ್ಲಿ ವಿವಿಧ ಸಂಘಟನೆ ಮತ್ತು ಸಾರ್ವಜನಿಕ ದೂರು ಹಿನ್ನಲೆಯಲ್ಲಿ ವಿವಿಧ ಕನ್ನಡ ಪತ್ರಿಕೆಗಳಲ್ಲಿ ವರದಿ ಪ್ರಕಟವಾದ ಹಿನ್ನೆಲೆಯಲ್ಲಿ ಲಿಂಗಸುಗೂರ ತಾಲ್ಲೂಕಿನ ಶಿಕ್ಷಣ ಇಲಾಖೆ ಅಧಿಕಾರಿಗಳು ಯಾವುದೇ ಸಂಘ ಸಂಸ್ಥೆಗಳ ಮುಖಂಡರಿಗೆ ಯಾವುದೇ ಪತ್ರಕರ್ತರಿಗೆ ಮಾಹಿತಿ ನೀಡಿದೆ ಪಟ್ಟಣದ ಮೂರು ಕೋಚಿಂಗ್ ಸೆಂಟರ್‌ಗಳಿಗೆ ನೋಟಿಸ್ ನೀಡಿರುವದು ಹಲವು ಅನುಮಾನಗಳು ಮೂಡಿವೆ ಎಂದು ಮಾನವ ಬಂಧುತ್ವ ವೇದಿಕೆ ಮುದಗಲ್ ಸಂಚಾಲಕ ಸಜೀವ್ ಚಲುವಾದಿ ಆರೋಪಿಸಿದರು.

ಸರಕಾರದ ಹಾಗೂ ಶಿಕ್ಷಣ ಇಲಾಖೆಯ ನಿಯಮಗಳನ್ನು ಗಾಳಿಗೆ ತೂರಿ ಅನಧಿಕೃತವಾಗಿ ಕೋಚಿಂಗ್ ಸೆಂಟರ್ಗಳು ನಡೆಯುತ್ತಿದ್ದು ಆದರೆ ಲಿಂಗಸುಗೂರು ತಾಲ್ಲೂಕಿನ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಮಾಡದೆ ಕಾಟಾಚಾರಕ್ಕೆ ಭೇಟಿ ನೀಡಿ ಯಾವುದೇ ಕ್ರಮ ಕೈಗೊಳ್ಳದೆ ನೋಟಿಸ್ ನೀಡಿದ್ದಾರೆ ಈ ಕೂಡಲೇ ಮೇಲಾಧಿಕಾರಿಗಳು ಯಾವುದೇ ಒತ್ತಡಕ್ಕೆ ಮಣಿಯದೆ ಅನಧಿಕೃತ ಕೋಚಿಂಗ್ ಸೆಂಟರ್‌ಗಳ ಮೇಲೆ ದಾಳಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮಾನವ ಬಂಧುತ್ವ ವೇದಿಕೆ ಮುದಗಲ್ ಸಂಚಾಲಕ ಸಜೀವ್ ಚಲುವಾದಿ ಒತ್ತಾಯಿಸಿದ್ದಾರೆ.

# ಸೋಂಪೂರಗೊಲ್ಲರಹಟ್ಟಿಯಲ್ಲಿ ಜೋಳದ ಮೇವುತಿಂದ ಕುರಿಗಳ ಸಾವು



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಪಟ್ಟಣ ಸಮೀಪದ ಸೋಂಪುರ ಗೊಲ್ಲರಟ್ಟಿಯಲ್ಲಿ ಹಸಿ ಜೋಳದ ಮೇವು ತಿಂದು 50ಕ್ಕೂ ಹೆಚ್ಚು ಕುರಿಗಳು ಹಸ್ತವ್ಯಸ್ತಗೊಂಡು ಐದು ಕುರಿಗಳು ಸಾವನಪ್ಪಿದ ಘಟನೆ ಜರುಗಿದೆ .

ಗೋಲ್ಲರಹಟ್ಟಿಯಲ್ಲಿಯೇ ಒಂದು ಎಕರೆ ಹೊಲವೊಂದರಲ್ಲಿ ಜೋಳ ಬೆಳೆಯಲಾಗಿತ್ತು, ಜೋಳ ಕಟಾವು ಮಾಡಿದ ಬಳಿಕ ನೀರು ಹಾಯಿಸಿ ಬುಡದಲ್ಲಿ ಮೇವು ಚಿಗಿದಿತ್ತು. 300ಕ್ಕೂ ಹೆಚ್ಚು ಕುರಿಗಳು ಒಂದು ಎಕರೆ ಹಸಿ ಜೋಳದ ನೀವು ತಿನ್ನಲು ಬಿಟ್ಟಾಗ ಅದರಲ್ಲಿ 50ಕ್ಕೂ ಹೆಚ್ಚು ಕುರಿಗಳು ವಾಸ್ತವ್ಯಸ್ತಗೊಂಡು ಐದಾರು ಕುರಿಗಳನ್ನು ಸಾವನಪ್ಪಿದ್ದು ಉಳಿದ ಕುರಿಗಳು ಔಷದೋಪಚಾರದಿಂದ ಗುಣಮುಖರಾಗಿವೆ. ಸ್ಥಳಕ್ಕೆ ಧಾವಿಸಿದ ಪಶುಸಂಗೋಪನ ಇಲಾಖೆಯ ವೈದ್ಯಾಧಿಕಾರಿ ಸತ್ತಕುರಿಗಳ ಸೇವಾ ಪಂಚಿನಾಮೆನಡೆಸಿ ಇದು ವಿಷಪೂರಿತ ಮೇವು ತಿಂದಿರುವುದರಿಂದ ಸಾವನ್ನಪ್ಪಿವೆ ಸರಕಾರದಿಂದ ಬರುವ ಪರಿಹಾರವನ್ನು ಕುರಿಗಾಯಿಗಳಿಗೆ ಕೊಡಿಸುವ ಭರವಸೆ ನೀಡಿದ ಅವರು ಇಂತಹ ಘಟನೆ ಜರುಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು. ಹಸ್ತವ್ಯಸ್ತಗೊಂಡ ಔಷಧೋಪಚಾರ ಮಾಡಿರು.

# ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಭಕ್ತಿ, ತ್ಯಾಗ,ಆದರ್ಶ ಮಹಿಳತ್ವದ ಪ್ರತೀಕ

**604ನೇ ಜಯಂತಿ ವಿಶೇಷ ಲೇಖನ**



ಹುಟ್ಟಿದರೆ ಮಲ್ಲಮ್ಮನಂತಹ ಮಗಳು ಹುಟ್ಟಬೇಕು, ಸಿಕ್ಕರೆ ಮಲ್ಲಮ್ಮನಂತಹ ಸೊಸೆ ಸಿಗಬೇಕು ಎಂಬ ಗಾದೆಯ ಮಾತು ಇಂದಿಗೂ ಉತ್ತರ ಕರ್ನಾಟಕ ಹಾಗೂ ಆಂಧ್ರ ಪ್ರದೇಶದ ಜನಮನಗಳಲ್ಲಿ ಘೋಷವಾಗುತ್ತಿದೆ. ಈ ಮಾತು ಕೇವಲ ಒಂದು ಹೊಗಳಿಕೆಯಲ್ಲ, ಅದು ಮಹಿಳಾ ಶಕ್ತಿ, ಸಹನೆ, ಸಂಸ್ಕಾರ, ಭಕ್ತಿ ಮತ್ತು ತ್ಯಾಗದ ಮಹತ್ವವನ್ನು ಸಾರುವ ಮಹಾನ್ ಆದರ್ಶದ ಪ್ರತಿಬಿಂಬವಾಗಿದೆ. ಅಂತಹ ಶ್ರೇಷ್ಠ ಸತೀ ಶಿರೋಮಣಿ, ಮಹಾಸಾಧ್ವಿ, ಶಿವಭಕ್ತೆ ಹಾಗೂ ಜನಮಾನಸದಲ್ಲಿ ದೇವಿಯಾಗಿ ಪೂಜಿಸಲ್ಪಡುವವರು ಮಾತೆ ಹೇಮರೆಡ್ಡಿ ಮಲ್ಲಮ್ಮ.14ನೇ ಶತಮಾನದಲ್ಲಿ ಜೀವಿಸಿದ ಮಲ್ಲಮ್ಮ ತಾಯಿಯವರು ಕೇವಲ ಒಂದು ಕುಟುಂಬದ ಸೊಸೆ ಮಾತ್ರವಾಗಿರಲಿಲ್ಲ, ಅವರು ಸಂಪೂರ್ಣ ಸಮಾಜಕ್ಕೆ ದಾರಿ ತೋರಿದ ಮಹಾನ್ ವ್ಯಕ್ತಿತ್ವವಾಗಿದ್ದರು. ಭಕ್ತಿಯ ಮೂಲಕ ಸಂಸಾರದಲ್ಲೇ ಮೋಕ್ಷವನ್ನು ಪಡೆಯಬಹುದು ಎಂಬುದನ್ನು ತಮ್ಮ ಬದುಕಿನ ಮೂಲಕ ಜಗತ್ತಿಗೆ ತೋರಿಸಿಕೊಟ್ಟ ಮಹಾಸಾಧ್ವಿಯವರಾಗಿದ್ದಾರೆ. ಶ್ರೀಶೈಲದ ಮಲ್ಲಿಕಾರ್ಜುನನ ಪರಮಭಕ್ತೆಯಾಗಿದ್ದ ಮಲ್ಲಮ್ಮ ತಾಯಿಯವರ ಜೀವನವೇ ಒಂದು ಮಹಾಕಾವ್ಯವಾಗಿದೆ.ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ರಾಮದುರ್ಗ ಸಮೀಪದ ರಾಂಪುರ ಗ್ರಾಮದಲ್ಲಿ ನಾಗರೆಡ್ಡಿ ಮತ್ತು ಗೌರಮ್ಮ ದಂಪತಿಯ ಉದರದಲ್ಲಿ ಜನಿಸಿದ ಮಲ್ಲಮ್ಮ ಬಾಲ್ಯದಿಂದಲೇ ದೈವಭಕ್ತಿ, ವಿನಯ, ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳಿಂದ ಕೂಡಿದ ವ್ಯಕ್ತಿತ್ವವನ್ನು ಹೊಂದಿದ್ದರು. ಮಲ್ಲಿಕಾರ್ಜುನನ ಆರಾಧನೆ ಅವರ ಉಸಿರಾಗಿತ್ತು. ದೇವರ ಮೇಲಿನ ಅಚಲ ನಂಬಿಕೆ ಮತ್ತು ಸೇವಾಭಾವದಿಂದ ಅವರು ಬಾಲ್ಯದಲ್ಲೇ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.ನಂತರ ಆಂಧ್ರ ಪ್ರದೇಶದ ಶ್ರೀಶೈಲ ಸಮೀಪದ ಸಿದ್ದಾಪುರದ ಹೇಮರೆಡ್ಡಿ ಕುಟುಂಬದ ಭರಮರೆಡ್ಡಿಯವರೊಂದಿಗೆ ಮಲ್ಲಮ್ಮರ ವಿವಾಹ ನೆರವೇರಿತು. ಆದರೆ ಅವರ ವೈವಾಹಿಕ ಜೀವನ ಸುಖಕರವಾಗಿರಲಿಲ್ಲ. ಅವಿಭಕ್ತ ಕುಟುಂಬದಲ್ಲಿ ಅತ್ತೆ,ಮಾವ,ನಾದಿನಿ, ಮೈದುನ ಹಾಗೂ ಓರಗಿತ್ತಿಯರಿಂದ ಅನೇಕ ರೀತಿಯ ಅವಮಾನ, ನೋವು ಹಾಗೂ ಹಿಂಸೆ ಅನುಭವಿಸಬೇಕಾಯಿತು. ಆದರೂ ಅವರು ಎಂದಿಗೂ ಕೋಪ, ದ್ವೇಷ ಅಥವಾ ಪ್ರತೀಕಾರದ ಮಾರ್ಗವನ್ನು ಹಿಡಿಯಲಿಲ್ಲ. ತಮ್ಮ ಎಲ್ಲ ನೋವುಗಳನ್ನು ಶ್ರೀಶೈಲ ಮಲ್ಲಿಕಾರ್ಜುನನ ಪಾದಾರವಿಂದಗಳಿಗೆ ಅರ್ಪಿಸಿ ಭಕ್ತಿಯಲ್ಲೇ ಶಾಂತಿ ಕಂಡುಕೊಂಡರು.ಮಲ್ಲಮ್ಮ ತಾಯಿಯವರ ಜೀವನದಲ್ಲಿ ನಡೆದ ಅತ್ಯಂತ ಮಹತ್ವದ ಘಟನೆ ಎಂದರೆ ಅವರ ಪತಿ ಭರಮರೆಡ್ಡಿಯವರ ಪರಿವರ್ತನೆ. ಕುಟುಂಬದವರು ಮಲ್ಲಮ್ಮರ ಬಗ್ಗೆ ಮಾಡಿದ ಅಪವಾದಗಳನ್ನು ನಂಬಿದ ಭರಮರೆಡ್ಡಿ, ಕೋಪದಿಂದ ಅವರನ್ನು ಕೊಲ್ಲುವ ಉದ್ದೇಶದಿಂದ ಕತ್ತಿ ಹಿಡಿದು ಗುಡಿಸಲಿಗೆ ಹೋಗುತ್ತಾರೆ. ಆದರೆ ಅಲ್ಲಿ ಮಲ್ಲಮ್ಮ ತಾಯಿಯವರು ಸಾಕ್ಷಾತ್ ಶ್ರೀಶೈಲ ಮಲ್ಲಿಕಾರ್ಜುನನೊಂದಿಗೆ ಸಂಭಾಷಣೆ ನಡೆಸುತ್ತಿರುವ ದಿವ್ಯ ದೃಶ್ಯವನ್ನು ಕಂಡು ಬೆಚ್ಚಿಬೀಳುತ್ತಾರೆ. ಆ ಕ್ಷಣವೇ ಅವರ ಬದುಕಿನ ತಿರುವಾಗುತ್ತದೆ. ಶಿವದರ್ಶನದಿಂದ ಅವರ ಬುದ್ಧಿವೈಕಲ್ಯ ದೂರವಾಗಿ, ಅವರು ದೈವಭಕ್ತನಾಗಿ ಪರಿವರ್ತನೆಗೊಂಡು ಮಲ್ಲಮ್ಮರ ಮಹತ್ವವನ್ನು ಅರಿಯುತ್ತಾರೆ. ನಂತರ ಅವರು ಆದರ್ಶ ಪತಿಯಾಗಿ ಬದುಕನ್ನು ಸಾಗಿಸುತ್ತಾರೆ. ಮಲ್ಲಮ್ಮ ತಾಯಿಯವರು ಕೇವಲ ತಮ್ಮ ಪತಿಯನ್ನು ಮಾತ್ರವಲ್ಲದೆ ಕುಟುಂಬದ ಇತರರನ್ನೂ ಸನ್ಮಾರ್ಗಕ್ಕೆ ತಂದವರು. ಅವರ ದೈವಭಕ್ತಿ ಮತ್ತು ಸಹನೆಯಿಂದ ಒರಗಿತ್ತಿಯರು, ಮೈದುನ ವೇಮನರೆಡ್ಡಿ ಸೇರಿದಂತೆ ಕುಟುಂಬದ ಅನೇಕರು ಆತ್ಮಸಾಕ್ಷಾತ್ಕಾರ ಹೊಂದಿದರು. ಅವರ ಜೀವನವು ದ್ವೇಷವನ್ನು ಪ್ರೀತಿಯಿಂದ ಗೆಲ್ಲುವ ಶಕ್ತಿಯ ಪ್ರತೀಕವಾಗಿದೆ.ಮಲ್ಲಮ್ಮ ತಾಯಿಯವರು ಜಾತಿ ಮತ್ತು ಧರ್ಮಗಳ ಗಡಿಗಳನ್ನು ಮೀರಿದ ಮಹಾನ್ ಸಾಧ್ವಿಯಾಗಿದ್ದಾರೆ. ಅವರು ಹೆಣ್ಣಿನ ಶಕ್ತಿ, ಆದರ್ಶ ಮಗಳು, ಆದರ್ಶ ಸೊಸೆ, ಆದರ್ಶ ಮಡದಿ ಹೇಗಿರಬೇಕು ಎಂಬುದಕ್ಕೆ ಜೀವಂತ ಮಾದರಿಯಾಗಿದ್ದಾರೆ. ಅವರ ಜೀವನದಲ್ಲಿ ಕಾಣುವ ಸಹನೆ, ಕರ್ತವ್ಯನಿಷ್ಠೆ, ಕುಟುಂಬಪ್ರೀತಿ, ದೈವಭಕ್ತಿ ಮತ್ತು ಸಮಾಜದ ಮೇಲಿನ ಕಳಕಳಿ ಇಂದಿಗೂ ಮಹಿಳಾ ಸಮಾಜಕ್ಕೆ ದಾರಿ ದೀಪವಾಗಿದೆ.ರೆಡ್ಡಿ ಸಮುದಾಯದವರು ತಮ್ಮನ್ನು ಸೂರ್ಯವಂಶಸ್ಥರು ಎಂದು ನಂಬಿಕೊಂಡು ಸೂರ್ಯ ಹಾಗೂ ಸ್ಥಳೀಯ ದೇವತೆಗಳನ್ನು ಆರಾಧಿಸುತ್ತಾರೆ. ಆದರೆ ಪ್ರತಿಯೊಂದು ರೆಡ್ಡಿ ಕುಟುಂಬದ ಮನೆಮನೆಗಳಲ್ಲಿ ಕುಲದೇವತೆಯಾಗಿ ಆರಾಧಿಸಲ್ಪಡುವವರು ಮಾತೆ ಹೇಮರೆಡ್ಡಿ ಮಲ್ಲಮ್ಮ. ಅವರ ಮೇಲಿನ ಭಕ್ತಿ ಅಷ್ಟೊಂದು ಆಳವಾಗಿದೆ. 'ರೆಡ್ಡಿ ಬಂಗಾರ ಕಡ್ಡಿ' ಎಂಬ ಗಾದೆಯೂ ಮಲ್ಲಮ್ಮ ತಾಯಿಯವರ ಆಶೀರ್ವಾದದ ಸಂಕೇತವೆಂದು ಜನರು ನಂಬುತ್ತಾರೆ.ಮಲ್ಲಮ್ಮ ತಾಯಿಯವರ ಜೀವನದ ಕೊನೆಯ ಕ್ಷಣಗಳೂ ಭಕ್ತಿಯ ಪರಾಕಾಷ್ಠೆಯನ್ನು ತೋರಿಸುತ್ತವೆ. ಅವರ ನಿಷ್ಕಳಂಕ ಭಕ್ತಿಗೆ ಮನಸೋತ ಶ್ರೀಶೈಲ ಮಲ್ಲಿಕಾರ್ಜುನನು ಅವರಿಗೆ ದರ್ಶನ ನೀಡಿ, ನಿನಗೆ ಯಾವ ವರ ಬೇಕು ಕೇಳು ಎಂದು ಕೇಳಿದಾಗ, ಮಲ್ಲಮ್ಮ ತಾಯಿ ತಮ್ಮ ವೈಯಕ್ತಿಕ ಸುಖಕ್ಕಾಗಿ ಏನನ್ನೂ ಕೇಳಲಿಲ್ಲ. ಬದಲಾಗಿ ತಮ್ಮ ಸಮುದಾಯದ ಜನರಿಗೆ ಬಡತನ ಬಾರದಿರಲಿ, ಅವರಿಗೆ ಊಟ, ಉಡುಪು, ಬದುಕಿಗೆ ಅಗತ್ಯವಾದ ಯಾವ ಕೊರತೆಯೂ ಇರಬಾರದು ಎಂದು ಪ್ರಾರ್ಥಿಸಿದರು. ತಮ್ಮ ಸಮಾಜದ ಕಲ್ಯಾಣಕ್ಕಾಗಿ ಬೇಡಿದ ಈ ವರವೇ ಅವರ ಮಹತ್ವವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುತ್ತದೆ.ಇಂದು ಸಹ ಉತ್ತರ ಕರ್ನಾಟಕ, ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಅನೇಕ ಮನೆಗಳಲ್ಲಿ ಮಲ್ಲಮ್ಮ ತಾಯಿಯವರ ಹೆಸರನ್ನು ಭಕ್ತಿಯಿಂದ ಸ್ಮರಿಸಲಾಗುತ್ತದೆ. ಅವರ ಜಯಂತಿಯನ್ನು ಭಕ್ತಿ ಮತ್ತು ಗೌರವದಿಂದ ಆಚರಿಸಲಾಗುತ್ತದೆ. ಮಹಿಳಾ ಸಂಕುಲಕ್ಕೆ ಅವರು ಕೇವಲ ದೇವಿಯಲ್ಲ; ಧೈರ್ಯ, ಸಹನೆ ಮತ್ತು ಆದರ್ಶ ಬದುಕಿನ ಸಂಕೇತವಾಗಿದ್ದಾರೆ.ಭಕ್ತಿ ಎಂದರೆ ಕೇವಲ ಪೂಜೆ ಅಲ್ಲ, ಅದು ಸಹನೆ, ಪ್ರೀತಿ, ಕ್ಷಮೆ ಮತ್ತು ಮಾನವೀಯತೆಯ ಸಮನ್ವಯ ಎಂಬುದನ್ನು ಮಲ್ಲಮ್ಮ ತಾಯಿಯವರು ತಮ್ಮ ಬದುಕಿನ ಮೂಲಕ ತೋರಿಸಿಕೊಟ್ಟಿದ್ದಾರೆ. ಆದ್ದರಿಂದಲೇ ಅವರು ಇಂದಿಗೂ ಕೋಟ್ಯಾಂತರ ಭಕ್ತರ ಹೃದಯದಲ್ಲಿ ಜೀವಂತವಾಗಿದ್ದಾರೆ.



ಶ್ರೀಮತಿ, ಶ್ರೀಮತಿಬಾಯಿ ಬಿ ರೆಡ್ಡಿ
ದೈಹಿಕ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ
ಬೇನಚಿಂಚೋಳಿ

# ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿಕೊಳ್ಳಲು ಸುವರ್ಣಾವಕಾಶ: ನ್ಯಾ. ಮಹಾಂತೇಶ ಎಸ್. ದರಗದ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಮೇ.9:ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಕ್ಕೆ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಮತ್ತು ಸರ್ವೋಚ್ಛ ನ್ಯಾಯಾಲಯದಲ್ಲಿನ ಬಾಕಿ ಇರುವ ವ್ಯಾಜ್ಯಗಳನ್ನು ರಾಜಿ ಸಂಧಾನದ ಮೂಲಕ ಪರಿಹರಿಸಿಕೊಳ್ಳಲು ಸಮಾಧಾನ ಸಮಾರೋಹ' ವಿಶೇಷ ಲೋಕ್ ಅದಾಲತ್‌ನಲ್ಲಿ ಸುವರ್ಣಾವಕಾಶವಾಗಿದ್ದು, ಪಕ್ಷಗಾರರು ಸದುಪಯೋಗ ಪಡೆದುಕೊಳ್ಳುವಂತೆ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ ಅವರು ಹೇಳಿದರು.

ಜಿಲ್ಲಾ ನ್ಯಾಯಾಲಯದಲ್ಲಿರುವ ಡಿ.ಎಲ್.ಎಸ್.ಎ ಕಚೇರಿಯಲ್ಲಿ 'ಸಮಾಧಾನ ಸಮಾರೋಹ' ವಿಶೇಷ ಲೋಕ ಅದಾಲತ ಮತ್ತು ಮೆಗಾ ಲೋಕ ಅದಾಲತನ ಮಾಹಿತಿ ನೀಡಲು ಮೇ 08 ರಂದು ಕರೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಚಂದ್ರಶೇಖರ. ಸಿ. ಅವರ ನೇತೃತ್ವದಲ್ಲಿ ಕೊಪ್ಪಳ ಜಿಲ್ಲೆಯಾದ್ಯಂತ 2026ರ ಜುಲೈ 11 ರಂದು ನಡೆಯಲಿರುವ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಪಕ್ಷಗಾರರು ತಮ್ಮ ವ್ಯಾಜ್ಯಗಳನ್ನು ಪರಸ್ಪರ ರಾಜಿ ಸಂಧಾನದ ಮಾಡಿಕೊಳ್ಳುವ ಮೂಲಕ ತಮ್ಮ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿಕೊಳ್ಳಬಹುದು. ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ರಾಜಿ ಸಂಧಾನಕ್ಕಾಗಿ ಸಿವಿಲ್ ದಾವೆಗಳು, ಭೂ-ಸ್ವಾಧೀನ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ಪ್ರಕರಣಗಳು, ವೈವಾಹಿಕ ಪ್ರಕರಣಗಳು ಹಾಗೂ ರಾಜಿ ಆಗಲು ಅರ್ಹವಿರುವ ಕ್ರಿಮಿನಲ್ ಕಂಪೌಂಡೆಬಲ್ ಪ್ರಕರಣಗಳು ಸೇರಿದಂತೆ ಹಲವಾರು ಪ್ರಕರಣಗಳನ್ನು ರಾಜಿ ಸಂಧಾನದಲ್ಲಿ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದರು.



ಇತ್ಯರ್ಥಪಡಿಸಿಕೊಂಡರೆ ಪ್ರಕರಣವು ಇಬ್ಬರಿಗೂ ಒಪ್ಪಿಗೆಯಾಗುವಂತೆ ಕೊನೆಗೊಂಡು ನ್ಯಾಯಾಲಯಕ್ಕೆ ತುಂಬಿದ ನ್ಯಾಯಾಲಯ ಶುಲ್ಕ ಸಂಪೂರ್ಣವಾಗಿ ವಾಪಸ್ ನೀಡಲಾಗುವುದು. ಕಾರಣ ಪಕ್ಷಗಾರರು ಇದೇ ಜುಲೈ 11ರಂದು ಕೊಪ್ಪಳ ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ಜರುಗುವ "ರಾಷ್ಟ್ರೀಯ ಲೋಕ ಅದಾಲತ್"ನ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು.

ಸಮಾಧಾನ ಸಮಾರೋಹ ವಿಶೇಷ ಲೋಕ್ ಅದಾಲತ್: ಭಾರತದ ಸರ್ವೋಚ್ಚ ನ್ಯಾಯಾಲಯವು "ಸಮಾಧಾನ ಸಮಾರೋಹ" ವಿಶೇಷ ಲೋಕ್ ಅದಾಲತ್‌ನ್ನು 2026ರ ಆಗಸ್ಟ್ 21, 22 ಮತ್ತು 23ರಂದು ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದು, ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ವಿಚಾರಣೆಗೆ ಬಾಕಿ ಇರುವ ಒಟ್ಟು 4328 ಪ್ರಕರಣಗಳನ್ನು ಸಂಧಾನಕ್ಕಾಗಿ ಗುರುತಿಸಿ, ಈ ವಿಶೇಷ ಲೋಕ್ ಅದಾಲತ್‌ನ್ನು ಆಯೋಜಿಸಿದೆ ಎಂದರು.

ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಈ ವರೆಗೆ ಸಿವಿಲ್-60 ಮತ್ತು ಕ್ರಿಮಿನಲ್ (ಅ)-1 ಸೇರಿ ಒಟ್ಟು 61 ಪ್ರಕರಣಗಳನ್ನು ಗುರುತಿಸಿದ್ದು, ಆಸಕ್ತಿಯುಳ್ಳವರು ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿ ಇರುವ ತಮ್ಮ ವ್ಯಾಜ್ಯಗಳನ್ನು ರಾಜಿ ಸಂಧಾನದ ಮೂಲಕ ಪರಿಹರಿಸಿಕೊಳ್ಳಲು ನೋಂದಣಿಗೂ ಸಹ ಅವಕಾಶ ಕಲ್ಪಿಸಲಾಗಿದೆ. ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳನ್ನು ಸಂಪರ್ಕಿಸುವ ಮೂಲಕ ಸಾರ್ವಜನಿಕರು ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಇಂದಿನಿಂದಲೇ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಆಯ್ಕೆಯಾದ ವ್ಯಾಜ್ಯಗಳನ್ನು ಮಧ್ಯಸ್ಥಿಕೆಗಾರರ ಮಧ್ಯಸ್ಥಿಕೆಯಲ್ಲಿ ಸಂಬಂಧಪಟ್ಟ ಜಿಲ್ಲಾ ಅಥವಾ ತಾಲ್ಲೂಕು ಮಟ್ಟದಲ್ಲಿಯೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಗೌರವಾನ್ವಿತ ನ್ಯಾಯಾಧೀಶರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯದ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಬೀದಿ ನಾಯಿ ದಾಳಿ: ಐದು ತಿಂಗಳ ಹಸುಳೆ ಸಾವು- ಈಶ್ವರ ಖಂಡ್ರೆ ಕಂಬನಿ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಮೇ 9: ಹುಮನಾಬಾದ್ ತಾಲೂಕಿನ ದಬಲಗುಂಡಿ ಗ್ರಾಮದಲ್ಲಿ ಮನೆಯ ಪಡಸಾಲೆಯಲ್ಲಿ ಮಲಗಿದ್ದ 5 ತಿಂಗಳ ಕಂದಮ್ಮನ ಮೇಲೆ ಬೀದಿ ನಾಯಿ ದಾಳಿ ಮಾಡಿದ್ದು, ಚಿಕಿತ್ಸೆ ಫಲಕಾರಿ ಆಗದೆ ಮೃತಪಟ್ಟಿರುವ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ ಖಂಡ್ರೆ ಕಂಬನಿ ಮಿಡಿದಿದ್ದಾರೆ.

ಮೃತ ಕಂದಮ್ಮನ ಕುಟುಂಬದವರೊಂದಿಗೆ ಈ ನೋವಿನ ಸಂದರ್ಭದಲ್ಲಿ ಸರ್ಕಾರ ನಿಲ್ಲುತ್ತದೆ. ದೇವರು ಮೃತ ಮಗುವಿನ ಆತ್ಮಕ್ಕೆ ಚಿರಶಾಂತಿ ನೀಡಲಿ,ತಂದೆ ತಾಯಿಗಳಿಗೆ ಅಗಲಿಕೆಯ ನೋವನ್ನು ತಡೆದುಕೊಳ್ಳುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿರುವ ಅವರು ಕೂಡಲೇ ನಿಯಮಾನುಸಾರ ಪರಿಹಾರ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಜಿಲ್ಲೆಯಲ್ಲಿ ಬೀದಿ ನಾಯಿಗಳ ಅದರಲ್ಲೂ ಜನರ ಮೇಲೆ ದಾಳಿ ಮಾಡುವ ಬೀದಿ ನಾಯಿಗಳನ್ನು ಗುರುತಿಸಿ, ನಿಯಮಾನುಸಾರ ನಿಯಂತ್ರಣ ಕ್ರಮ ಕೈಗೊಳ್ಳುವಂತೆಯೂ ಅವರು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ.



# ಕಲಬುರಗಿ ಮೃಗಾಲಯ ಲೋಗೋ ಬಿಡುಗಡೆ



• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಮೇ 12ಕ್ಕೆ ಲೋಕಾರ್ಪಣೆ,ತಿಂಗಳೊಳಗೆವ ಮೃಗಾಲಯಕ್ಕೆ ಸಿಂಹ ಆಗಮನ:ಪ್ರಿಯಾಂಕ್ ಖರ್ಗೆ ಕಲಬುರಗಿ,ಮೇ.9:ಜಿಲ್ಲೆಯ ಚಿತ್ತಾಪುರ ತಾಲೂಕಿನ ಮಾಡಬೂಳ ಗ್ರಾಮದಲ್ಲಿ ಸುಮಾರು 43ಎಕರೆ ಪ್ರದೇಶದ ವಿಸ್ತೀರ್ಣದಲ್ಲಿ 35 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಕಲಬುರಗಿ ಮೃಗಾಲಯವನ್ನು ಇದೇ ಮೇ 12ಕ್ಕೆ ಲೋಕಾರ್ಪಣೆ ಮಾಡಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇರಿಯಲ್ಲಿ ಕಲಬುರಗಿ ಮೃಗಾಲಯದ ಲೋಗೊ ಬಿಡುಗಡೆ ಮಾಡಿ ಮಾತನಾಡಿದ ಅವರು, ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರ ಸೆಕ್ಷನ್ 38(1) ಅಡಿಯಲ್ಲಿ ಮೃಗಾಲಯ ಸ್ಥಾಪನೆಗೆ ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಮತ್ತು ದೆಹಲಿಯ ಸೆಂಟ್ರಲ್ ಝೂ ಅಥಾರಿಟಿಯಿಂದ ಅನುಮತಿ ದೊರೆತಿರುವ ಹಿನ್ನೆಲೆಯಿಂದ ವಿವಿಧ ಸ್ಥಳದಿಂದ ಕಲಬುರಗಿ ಮೃಗಾಲಯಕ್ಕೆ ಪ್ರಾಣಿಗಳ ಸ್ಥಳಾಂತರ ಪ್ರಕ್ರಿಯೆ ನಡೆದಿದೆ ಎಂದರು.ಹುಲಿ, ಸಿಂಹ ಸೇರಿದಂತೆ ಅನೇಕ ಪ್ರಾಣಿಗಳ ವೀಕ್ಷಣೆಗೆ ಈ ಭಾಗದಲ್ಲಿ ಅವಕಾಶ ಇರಲಿಲ್ಲ. ಹಿಂದೆ ತಾವು ಪ್ರವಾಸೋದ್ಯಮ ಸಚಿವನಾಗಿದ್ದಾಗ ಮಾಡಬೂಳ ಮೃಗಾಲಯ ಮಂಜೂರು ಮಾಡಿದೆ. ಇದೀಗ ಸದರಿ ಕಾಮಗಾರಿಗೆ ವೇಗ ನೀಡಿದ ಫಲವಾಗಿ ಮೃಗಾಲಯ ಲೋಕಾರ್ಪಣೆ ಹಂತಕ್ಕೆ ಬಂದಿದೆ. ಇದರಿಂದ ಪ್ರದೇಶದ ಮಕ್ಕಳು, ಸಾರ್ವಜನಿಕರು ಪ್ರಾಣಿಗಳ ವೀಕ್ಷಣೆಗೆ ದೂರದ ಊರಿಗೆ ಹೋಗುವುದು ತಪ್ಪಿದಲ್ಲದೆ ಸ್ಥಳೀಯವಾಗಿ ಪ್ರವಾಸೋದ್ಯಮ ಚೇತರಿಕೆಗೂ ಇದು ಕಾರಣವಾಗಲಿದೆ ಎಂದರು.

ಹೊಸ ಮೃಗಾಲಯದಲ್ಲಿ ನಿಶಾಚರ ಪ್ರಾಣಿಗಳಿಗೆ 6, ಭಾರತೀಯ ಪಕ್ಷಿಗಳಿಗೆ 10, ಸಣ್ಣ ಪಕ್ಷಿಗಳಿಗೆ 6, ಫೀಸಂಟ್‌ಗಳಿಗೆ 6, ಸಸ್ತನಿಗಳಿಗೆ 10, ಪ್ರೈಮೇಟ್‌ಗಳಿಗೆ 4 ಶಾಖಾಹಾರಿ ಪ್ರಾಣಿಗಳಿಗೆ 6 ಹಾಗೂ ಉಭಯಚರ/ಸರೀಸೃಪ ಪ್ರಾಣಿಗಳಿಗೆ 8 ಸೇರಿ ಒಟ್ಟು 56 ಜಾತಿಯ ಪ್ರಾಣಿಗಳಿಗೆ ಆವರಣಗಳು ನಿರ್ಮಾಣವಾಗಲಿದ್ದು, ಆಮೆ, ಘರಿಯಾಲ್, ಮೊಸಳೆ, ಚುಕ್ಕೆ ಜಿಂಕೆ, ಗೋಲ್ಡನ್ ಜಾಕಲ್, ಹುಲಿ, ಸಿಂಹ, ಸ್ಲೋತ್ ಕರಡಿ, ಜೀಬ್ರಾ, ಬಬೂನ್, ಲಂಗೂರು ಹಾಗೂ ವಿವಿಧ ಪಕ್ಷಿಗಳಿಗಾಗಿ ಒಟ್ಟು 23 ಆವರಣಗಳು ಈಗಾಗಲೆ ಪೂರ್ಣಗೊಂಡಿವೆ ಎಂದರು. ಮೃಗಾಲಯಕ್ಕೆ ಆಗಮಿಸುವ ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯ, ಶೆಡ್‌ಗಳು, ಬೆಂಚ್‌ಗಳು, ಉದ್ಯಾನ, ಮಕ್ಕಳ ಆಟದ ಪ್ರದೇಶ ಹೀಗೆ ಮೂಲಸೌಲಭ್ಯ ಕಲ್ಪಿಸಲಾಗಿದೆ. ಇದಲ್ಲದೆ ಮೃಗಾಲಯಕ್ಕೆ ಸುತ್ತ ಕಲ್ಲಿನ ಗೋಡೆ ಹಾಗೂ ಮುಳ್ಳು ತಂತಿ ಬೇಲಿ ನಿರ್ಮಾಣ ಮಾಡಿ ರಕ್ಷಿಸಲಾಗಿದೆ. ಟಿಕೆಟ್ ಕೌಂಟರ್ ಸಹಿತ ಪ್ರವೇಶದ್ವಾರ, ಮೃಗಾಲಯವನ್ನು ಮುಖ್ಯ ಹೆದ್ದಾರಿಗೆ ಸಂಪರ್ಕಿಸುವ 20 ಮೀಟರ್ ಅಗಲದ ರಸ್ತೆ, 2.5 ಕಿ.ಮೀ ಸೇವಾ ರಸ್ತೆ ಹಾಗೂ 1.3 ಕಿ.ಮೀ ಪೇಮ್ಸ್ ಪ್ರವಾಸಿಗರ ಮಾರ್ಗ, ವಾಹನ ನಿಲುಗಡೆ ವ್ಯವಸ್ಥೆ, ಭೂಗತ ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ ಪೂರ್ಣಗೊಂಡಿದೆ. ಆಸ್ಪತ್ರೆ ಹಾಗೂ ಅಡುಗೆಮನೆ ಕಟ್ಟಡಗಳು ಅಗತ್ಯ ಔಷಧಿ ಮತ್ತು ಸ್ಟೆಚರ್, ಫ್ರೀಜರ್ ಮುಂತಾದ ಉಪಕರಣಗಳೊಂದಿಗೆ ಸಜ್ಜುಗೊಳಿಸಿದೆ. ಮರಣೋತ್ತರ ಪರೀಕ್ಷಾ ಕೊಠಡಿ, ಪ್ರಾಣಿಗಳ ಅವಶೇಷ ವಿಲೇವಾರಿ ಘಟಕ ಹಾಗೂ ಕ್ಯಾರಂಟೈನ್ ಕೊಠಡಿ, ಆಡಳಿತ ಕಟ್ಟಡ ಹೀಗೆ ಎಲ್ಲಾ ರೀತಿಯಿಂದ ಮೂಲಸೌಕರ್ಯ ಇಲ್ಲಿ ಕಲ್ಪಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.ತಿಂಗಳೊಳಗೆ ಸಿಂಹ ಸೇರ್ಪಡೆ:ಮುಂದಿನ ಒಂದು ತಿಂಗಳೊಳಗೆ ಮಾಡಬೂಳ ಮೃಗಾಲಯಕ್ಕೆ ಕಾಡಿನ ರಾಜ "ಸಿಂಹ" ಸೇರಿದಂತೆ ಸಾಂಬರ್, ರೆಡ್ ಜಂಗಲ್ ಫೌಲ್, ಪೈಥಾನ್ ಸ್ಥಳಾಂತರಿಸಲಾಗುತ್ತಿದೆ. 3 ತಿಂಗಳಲ್ಲಿ ಹುಲಿ, ಬಬೂನ್, ಸ್ಲೋತ್ ಕರಡಿ, ಕಿಂಗ್ ಕೋಬ್ರಾ ಹಾಗೂ 6 ತಿಂಗಳಲ್ಲಿ ಜೀಬ್ರಾ, ಘರಿಯಾಲ್ ಹಾಗೂ ಇತರೆ ಪಕ್ಷಿ ಮತ್ತು ಸರೀಸೃಪ ಪ್ರಭೇಧಗಳು ಮೃಗಾಲಯಕ್ಕೆ ಸೇರಲಿವೆ ಎಂದರು.ಬೆಳಿಗ್ಗೆ 9.30 ರಿಂದ ಸಂಜೆ 5.30 ವೀಕ್ಷಣೆಗೆ ಲಭ್ಯ:ಮೃಗಾಲಯವು ಬೆಳಿಗ್ಗೆ 9.30 ರಿಂದ ಸಂಜೆ 5.30 ವರೆಗೆ ತೆರೆಯಲಿದ್ದು, ಪ್ರಾಣಿ-ಪಕ್ಷಿಗಳ ವೀಕ್ಷಣೆಗೆ ಲಭ್ಯವಾಗಿರಲಿದೆ. ಪ್ರತಿ ಮಂಗಳವಾರ ರಜೆ ಇರಲಿದೆ. 12 ವರ್ಷ ಮೇಲ್ಪಟ್ಟವರಿಗೆ 75 ರೂ., 12 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ 40 ರೂ. ಹಾಗೂ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ25 ರೂ. ಟಿಕೆಟ್ ದರ ನಿಗದಿ ಮಾಡಲಾಗಿದೆ. ಮೃಗಾಲಯದ ಟಿಕೆಟ್ ಕೌಂಟರ್‌ನಲ್ಲಿಯೆ ಟಿಕೆಟ್ ಪಡೆದು ವೀಕ್ಷಣೆ ಮಾಡಬಹುದಾಗಿದೆ ಎಂದರು.ಕಾಫಿ ಟೇಬಲ್ ಪುಸ್ತಕ ಬಿಡುಗಡೆ:ಜಿಲ್ಲೆಯ ಪ್ರವಾಸಿ ತಾಣಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಪಡಿಸುವ ನಿಟ್ಟಿನಲ್ಲಿ ಕಲಬುರಗಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯು ವಿಶೇಷ ಆಸಕ್ತಿ ವಹಿಸಿ ಇದೇ ಮೊದಲ ಬಾರಿಗೆ ಜಿಲ್ಲೆಯ ಕಲೆ, ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸವನ್ನು ಬಿಂಬಿಸುವ ಮತ್ತು ಜಿಲ್ಲೆಯ ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ಹಾಗೂ ಇತರೆ ಪ್ರವಾಸಿ ತಾಣಗಳ ಕುರಿತ ಮಾಹಿತಿ ನೀಡುವ ಕಾಫಿ ಟೇಬಲ್ ಪುಸ್ತಕ ಹೊರತಂದಿದ್ದು, ಇದೇ ಸಂದರ್ಭದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು. ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಬೇಬಿ ಮೊಗೇರಾ ಇದ್ದರು.

# ಕಲಬುರಗಿ ರೊಟ್ಟಿ ವಿದೇಶ ರಫ್ತಿಗೆ ಚಾಲನೆ

## ಸಿರಿಧಾನ್ಯಕ್ಕೆ ಜಾಗತೀಕ ಮಾನ್ಯತೆ ದೊರೆಯುತ್ತಿರುವುದು ಹೆಮ್ಮೆಯ ವಿಷಯ



• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಮೇ.9: ಕಲಬುರಗಿಯ ರೊಟ್ಟಿಗೆ ಜಾಗತೀಕವಾಗಿ ಬೇಡಿಕೆ ಹೆಚ್ಚುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಬುರಗಿ ರೊಟ್ಟಿ ಅಮೆರಿಕಾ, ಕೆನೆಡಾ, ಆಸ್ಟ್ರೇಲಿಯಾ ದೇಶಕ್ಕೆ ರಫ್ತು ಮಾಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು. ಕಲಬುರಗಿ ರೊಟ್ಟಿಯನ್ನು ವಿದೇಶಕ್ಕೆ ರಫ್ತು ಮಾಡಲು ಪುಣೆ ಮೂಲದ ಅಸ್ತಮ್ ಟ್ರೇಡರ್ಸ್ ಕಂಪನಿಯೊಂದಿಗೆ ಇಂದಿಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಸೂಕ್ತ ಪ್ಯಾಕೇಜಿಂಗ್ ಮಾಡಿ ಕಲಬುರಗಿ ರೊಟ್ಟಿ ವಿದೇಶಕ್ಕೆ ಕಳುಹಿಸಲಾಗುತ್ತದೆ.

ಇದರಿಂದ ನಮ್ಮ ಮಹಿಳೆಯರು ಆರ್ಥಿಕ ಚೇತರಿಕೆ ಕಂಡು ಸ್ವಾಭಿಮಾನದ ಬದುಕು ಸಾಗಿಸಲು ಇದು ನೆರವಾಗಲಿದೆ ಎಂದರು. ಎರಡು ವರ್ಷ ಹಿಂದೆ ನಾವು ಕಲಬುರಗಿ ರೊಟ್ಟಿ ಬ್ರ್ಯಾಂಡ್ ಹೆಸರಿನಲ್ಲಿ ಬಿಡುಗಡೆ ಮಾಡಿ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದ್ದೇವು. ಆರಂಭದಲ್ಲಿ ಇದನ್ನು ಈ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತೇವೆಂದರೆ ಯಾರು ಇದನ್ನು ನಂಬಿರಲಿಲ್ಲ. ಇದೀಗ ನಮ್ಮ ಮಹಿಳೆಯರ ಪರಿಶ್ರಮದ ಫಲ ಇಂದಿಲ್ಲಿ ಕಲಬುರಗಿ ರೊಟ್ಟಿ ವಿದೇಶಕ್ಕೆ ಹೋಗುವಂತಾಗಿದೆ ಎಂದರು.ಕಲಬುರಗಿ ರೊಟ್ಟಿ ತಯ್ಯಾರಿಸುವ ಸುಮಾರು 1,000 ಮಹಿಳೆಯರು ಒಳಗೊಂಡ 100 ಸ್ವ-ಸಹಾಯ ಸಂಘಗಳಿಗೆ ನಮ್ಮ ಸರ್ಕಾರ ಸಬ್ಸಿಡಿ ರೂಪದಲ್ಲಿ ರೊಟ್ಟಿ ತಯ್ಯಾರಿಸುವ ಯಂತ್ರ ಖರೀದಿಗೆ ನೆರವಾಗಿದ್ದೇವೆ. ಇದನು ಸದ್ಬಳಕೆ ಮಾಡಿಕೊಂಡ ಮಹಿಳಾ ಗುಂಪುಗಳು ಈಗಾಗಲೆ ದೇಶದಾದ್ಯಂತ ಆನ್‌ಲೈನ್ ಮಾರ್ಕೆಟಿಂಗ್ ಮೂಲಕ ರೊಟ್ಟಿ ಮಾರಾಟ ಮಾಡುತ್ತಿದ್ದಾರೆ.

ಇದೀಗ ವಿದೇಶಕ್ಕೂ ನಮ್ಮ ಕಲಬುರಗಿ ರೊಟ್ಟಿ ಹೋಗುತ್ತಿರುವುದು ಸಂತಸ ತಂದಿದೆ ಎಂದರು.ಇದಕ್ಕು ಮುನ್ನ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಮಾತನಾಡಿ, ಪ್ರಸ್ತುತ ಕಲಬುರಗಿ ರೊಟ್ಟಿಯನ್ನು "ಕಲಬುರಗಿ ರೊಟ್ಟಿ" ಬ್ರ್ಯಾಂಡ್ ಮೂಲಕ ಅಮೇಜಾನ್, ಕಲಬುರಗಿ ರೊಟ್ಟಿ ವೆಬ್‌ಸೈಟ್, ಫ್ರಾಂಚೈಸಿ ಹಾಗೂ ಲೋಕಲ್ ಮಾರ್ಕೆಟ್ ಮೂಲಕ ಮಾರಾಟ ಮಾಡಲಾಗುತ್ತಿದೆ. ಇದೀಗ ಕಲಬುರಗಿ ರೊಟ್ಟಿಯನ್ನು ಆಸ್ಟ್ರೇಲಿಯಾ, ಕೆನಡಾ ಹಾಗೂ ಯು.ಎಸ್.ಎಗೆ ಮುಂದಿನ ಮೂರು ವರ್ಷಕ್ಕೆ ಪ್ರತಿ ವರ್ಷ 1 ಲಕ್ಷ ರೊಟ್ಟಿ ರಫ್ತು ಮಾಡಲು ಪುಣೆ ಮೂಲದ ಅಶ್ತಮ್ ಟ್ರೇಡರ್ಸ್ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದಲ್ಲದೆ ಮುಂದಿನ ದಿನದಲಿ ಇತರೆ ದೇಶಗಳಿಗೂ ರೊಟ್ಟಿ ರವಾನಿಸಲು ಅಧ್ಯಯನ ನಡೆಯುತ್ತಿದೆ. ಇದರಿಂದಾಗಿ ಕಲಬುರಗಿ ರೊಟ್ಟಿ ಉತ್ಪಾದಕರಿಗೆ ಹೆಚ್ಚಿನ ಆದಾಯ ಸಿಗಲಿದೆ.

ಸದ್ಯ ಮಾರುಕಟ್ಟೆಯಲ್ಲಿ ಒಂದು ರೊಟ್ಟಿಗೆ ರೂ. 10 ರಿಂದ 12 ರೂ. ಬೆಲೆ ಇದ್ದು, ವಿದೇಶದಲ್ಲಿ ಇದು 25 ರಿಂದ 30 ರೂ. ವರೆಗೆ ಮಾರಾಟವಾಗಲಿದೆ. ಇದರಿಂದ ಸಹಜವಾಗಿಯೇ ಹೆಚ್ಚಿನ ಆದಾಯ ಕಲಬುರಗಿ ರೊಟ್ಟಿ ಉತ್ಪಾದಕರಿಗೆ ದೊರಕಲಿದೆ ಎಂದರು. ಕಲಬುರಗಿ ರೊಟ್ಟಿ ಉತ್ಪಾದನೆಯ ಜೊತೆಗೆ ಗಾಳಿಯೊಂದಿಗೆ ಬಿಗಿಯಾದ ಪ್ಯಾಕ್ ಮಾಡುವ ಯಂತ್ರವನ್ನು ಖರೀದಿಸಲು ಹೆಚ್.ಡಿ.ಎಫ್.ಸಿ. ಬ್ಯಾಂಕ್ ತನ್ನ ಸಿ.ಎಸ್.ಆರ್ ಅನುದಾನದಲ್ಲಿ 55 ಲಕ್ಷ ರೂ. ಒದಗಿಸಿದೆ. ಘಟಕ ಸ್ಥಾಪನೆಗೆ ಬೇಕಾಗುವ ಮೂಲಭೂತ ಸೌಲಭ್ಯವನ್ನು ಡಿ.ಎಂ.ಎಫ್. ಯೋಜನೆಯಡಿ 32 ಲಕ್ಷ ರೂ. ಬಳಸಲಾಗುತ್ತಿದೆ. ಜಿಲ್ಲಾ ಕೃಷಿ ತರಬೇತಿ ಕೇಂದ್ರ ಕೊಟನೂರ (ಡಿ) ಇಲ್ಲಿ ಘಟಕ ಸಿದ್ಧವಾದಲ್ಲಿ ಕಲಬುರಗಿ ರೊಟ್ಟಿ ರಫ್ತು ಮಾಡಲು ಹೆಚ್ಚು ಪ್ರೋತ್ಸಾಹ ದೊರಕಲಿದೆ, ಅಲ್ಲದೆ ರೊಟ್ಟಿಯ ಗುಣಮಟ್ಟ ಹೆಚ್ಚಾಗಲಿದೆ ಎಂದು ವಿವರಿಸಿದರು.ಕಾರ್ಯಕ್ರಮದಲ್ಲಿ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಡಿ.ಸಿ.ಎಫ್ ಸುಮಿತ್ ಪಾಟೀಲ, ಅಸ್ತಮ್ ಟ್ರೇರ್ಸ್ ಮಾಲೀಕ ರಮೇಶ ಕಡಗಂಚಿ ಇದ್ದರು.

# ಹೆಣ್ಣು ಕುಲದ ಅನರ್ಘ್ಯ ರತ್ನ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ

ಬಹಳ ಜನ ಪ್ರಪಂಚದಲ್ಲಿ ದುಃಖಿತರಾಗಿರಲು, ಅಸಂತೋಷದಿಂದ ನರಳುತ್ತಿರಲು ಕಾರಣ ಕೋಪ. ಕೋಪಕ್ಕೆ ವಿರುದ್ಧವಾದ ಪದ ಸಹನೆ. ಸಹನೆಯಿಲ್ಲದ ವ್ಯಕ್ತಿ ಸದಾ ದುಃಖಿ ಎನ್ನಬಹುದು.

ಸಹನೆಯನ್ನು ರೂಢಿಸಿಕೊಳ್ಳಲು ಬಹಳ ಕಷ್ಟಪಡಬೇಕು. ಸಹನೆಯ ಬೇರು ತುಂಬಾ ಕಹಿ. ಆದರೆ ಸಹನೆಯ ಮರ ಕೊಡುವ ಹಣ್ಣು ಮಾತ್ರ ತುಂಬಾ ಸಿಹಿ. ಕಹಿ ಎಂದಾ-ಕ್ಷಣ ನಾವು ಮುಖ ಮುರಿಯುತ್ತೇವೆ. ಅದೇ ಸಿಹಿಯಾದ ಹಣ್ಣನ್ನು ಕೂಡಲೇ ತಿಂದು ಮುಗಿಸುತ್ತೇವೆ. ಸಿಹಿಯಾದ ಹಣ್ಣನ್ನು ಬೆಳೆಯಲು ತೋಟದ ಮಾಲಿ ಅತ್ಯಂತ ಸಹನೆಯಿಂದ ಬೀಜವನ್ನು ಬಿತ್ತಿ, ಪೋಷಿಸಿ ಕಾವಲು ಕಾದಿದ್ದಾನೆ ಎಂಬುದನ್ನು ನಾವು ಮರೆಯುತ್ತೇವೆ. ಸಾಮಾನ್ಯವಾಗಿ ಬದುಕು ಎಂದರೆ ಸುಖ, ದುಃಖ, ನೋವುಗಳನ್ನು ನಾವು ಕಾಣಲೇಬೇಕು. ಸುಖವನ್ನು ಮರೆತಷ್ಟು ಸುಲಭವಾಗಿ ನಾವು ದುಃಖಗಳನ್ನು ಮರೆಯಲಾರೆವು. ಸಹನೆ ತುಂಬಾ ಪವಿತ್ರ. ಹಾಗೂ ಬದುಕಿಗೆ ಅತೀ ಅವಶ್ಯಕವು ಆಗಿದೆ. ಇಂತಹ ಸನ್ನಿವೇಷಕ್ಕೆ ಅತ್ಯಂತ್ಯ ಸೂಕ್ತ ದೃಷ್ಟಾಂತ ಎಂದರೆ ಶ್ರೀಶೈಲ ಮಲ್ಲಿಕಾರ್ಜುನನ್ನು ತನ್ನ ಆರಾಧ್ಯದೇವ ಎಂದು ಅರಿತು ದೈವ ಶಕ್ತಿಗೆ ಒಳಗಾಗಿ, ಶ್ರೇಷ್ಠ ಶಿವ-ಶರಣೆಯಾಗಿ ಸಮಾಜಕ್ಕೆ ದಾರಿತೋರಿಸಿದವಳು ಹೆಣ್ಣು ಕುಲದ ಅನರ್ಘ್ಯರತ್ನ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ.

ಕುಟುಂಬಸ್ಥೆಯಾಗಿ ಅತ್ಯಂತ ಸಮರ್ಥ ರೀತಿಯಲ್ಲಿ ಬದುಕಿ, ಸಮಾಜಕ್ಕೆ ಮಾದರಿ ಎನಿಸಿದವಳು. ಹಣ, ಆಸ್ತಿ, ಅಂತಸ್ತು ಇರುವವರು ಮಾತ್ರ ತುಂಬಾ ಸಂತೋಷದಿಂದ ಇರುತ್ತಾರೆ ಎಂಬ ನಂಬಿಕೆ ನಮ್ಮೆಲ್ಲರಲ್ಲಿದೆ. ಅದು ಖಂಡಿತ ಸುಳ್ಳು. ಕುಟುಂಬದಲ್ಲಿದ್ದುಕೊಂಡು ಸಹಾಯ, ಸಹಕಾರ, ತಾಳ್ಮೆ, ಪರೋಪಕಾರ ಇವೆಲ್ಲವನ್ನು ಎದುರಿಸಿ ದೊಡ್ಡವರನ್ನು, ನಮ್ಮ ಆಶ್ರೀತರನ್ನು ಕೂಡಿಕೊಂಡು ಬದುಕುವುದು ಮಾತ್ರ ಸಂತೋಷ ನೀಡುತ್ತದೆ ಎಂಬುವುದು 600 ವರ್ಷದ ಹಿಂದೆ ಸಾರಿ ಹೇಳಿದ ಈ ಮಹಾತ್ಮೆಯನ್ನು ನಾವು ಖಂಡಿತವಾಗಿ ಮನಮಂದಿರದಲ್ಲಿ ಪೂಜೆಗೈಯಬೇಕಾಗಿದೆ.

ಮೊಬೈಲ್, ವಾಟ್ಸ್‌ಪ್, ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ, ಗೂಗಲ್ ಹೀಗೆ ಸಾಮಾಜಿಕ ಜಾಲತಾಣ ಅಭಿವೃದ್ಧಿ ಹೊಂದಿದ ಇಂದಿನ ಸಮಾಜ ಮನುಷ್ಯರನ್ನ ಜಗತ್ತಿಗೆ ಅತ್ಯಂತ ಸಮೀಪದಲ್ಲಿ ಪರಿಚಯಿಸಿ ತಕ್ಕ ಮಟ್ಟಿಗೆ ಮೌಲ್ಯವನ್ನು ಮರೆಯುವಂತೆ ಮಾಡಿದೆ. ಅವಿಭಕ್ತ ಕುಟುಂಬ ಯಶಸ್ಸಿಗೆ ಮೂಲ ಎಂಬುದನ್ನು ನಾವು ಮರೆಯುತ್ತಿದ್ದೇವೆ. ಅವಿಭಕ್ತ ಕುಟುಂಬದಲ್ಲಿದ್ದುಕೊಂಡು ನಂಬಿಕೆ, ಸಹನೆ, ಸೌಹಾರ್ದತೆ, ಪ್ರಮಾಣಿಕತನ, ಸಮಯಪ್ರಜ್ಞೆ, ಅದ್ಭುತವ್ಯಕ್ತಿತ್ವ, ಸೇವಾಮನೋಭಾವ ಇವೆಲ್ಲವನ್ನು ಬದಿಗೊತ್ತಿ ಕೋಪ, ಸ್ವತಂತ್ರ, ಕೀಳರಿಮೆ, ದುರಾಸೆ, ಅಹಂಕಾರ, ಹಿರಿಯರ ಬಗ್ಗೆ ತಾತ್ಸಾರ, ದುಷ್ಟಟಗಳು ಮುಂತಾದ ಅನಾವಶ್ಯಕ ಸಂದರ್ಭಗಳಿಗೆ ಸಿಲುಕಿ-ಕೊಂಡು, "ನಾವಾಯಿತು ನಮ್ಮ ಚಿಕ್ಕ ಕುಟುಂಬವಾಯಿತು" ಎಂಬ ಸಹಬಾಳ್ವೆ, ತಾಳ್ಮೆಬದಿಗೊತ್ತಿ ಬದುಕುವ ಇಂದಿನ ಸಂಕುಚಿತ ಮನೋಭಾವದ ಮಹಿಳೆಯರಿಗೆ "ಮಾತೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ" ರವರ ವಿಶಿಷ್ಟ ಬದುಕು ದಾರಿದೀಪವಾಗಲಿದೆ.

ಇಡೀ ಜಗತ್ತಿಗೆ ದಾರಿದೀಪವಾಗಿರುವ ಎಲ್ಲಾ ಶರಣರು, ಸಂತರು ತಮ್ಮ ಕರ್ಮಭೂಮಿಯಿಂದ ಸಮಾಜವನ್ನು ಸುಧಾರಿಸುವ ಘನಕಾರ್ಯ ಮಾಡಿದ್ದಾರೆ. ಆಂಧ್ರಪ್ರದೇಶದ ನೈತಿಕ, ಧಾರ್ಮಿಕ ಇತಿಹಾಸದ ಪುಟ ತಿರುವಿ ನೋಡಿದಾಗ ನಮಗೆ ದೊರೆಯುವುದು ಈ ಶ್ರೇಷ್ಠ ಮಾತೆಯ ಸಹನೆ, ತಾಳ್ಮೆಯಿಂದ ಕೂಡಿದ ಬಾಳ್ವೆ, ಧಾರ್ಮಿಕ ನೈತಿಕ ಕ್ಷೇತ್ರಕ್ಕೆ ಮತ್ತಷ್ಟು ಹೊಳಪು ನೀಡುವ ಕಾರ್ಯ ಈ ಮಾತೆಯಿಂದ ನಡೆದಿತ್ತು.

ಸಾಮಾಜಿಕ, ಧಾರ್ಮಿಕ ಚಿಂತನೆಯಲ್ಲಿ ಮಲ್ಲಮ್ಮಳದ್ದು ಬಹುದೊಡ್ಡ ಪಾತ್ರವಿದೆ. ಮತಿಭ್ರಮಣ ಪತಿಯನ್ನು ವರಸಿದ ಇವಳು ಕುಟುಂಬದಲ್ಲಿಯ ಅತ್ತೆ-ನಾದನೀಯರ ಕಾಟ ಸಹಿಸಿಕೊಂಡು ಬಾಳಿನಲ್ಲಿ ವಿಚಲಿತಗೊಳ್ಳದೇ ಎಷ್ಟೇ ಕಷ್ಟ ಎದುರಾದರೂ ಸಹಿಸಿಕೊಂಡು ಬಾಳಿ ಬದುಕಿ ಇತಿಹಾಸ ಪುಟ ಸೇರಿದವಳು. ಆಂಧ್ರ ಪ್ರದೇಶ ರಾಜ್ಯದ ನಾಡಗೀತೆಯಲ್ಲಿ ಈ ಮಾತೆಯ ನಾಮ ಉಲ್ಲೇಖಿತ. ಇದು ಅವಳ ಶ್ರೇಷ್ಠ ಧಾರ್ಮಿಕ ಹಾಗೂ ನೈತಿಕ ಸಾಧನೆಗೆ ಹಿಡಿದ ಕನ್ನಡಿ ಎಂದು ಹೇಳಬಹುದು.

ಸಂತ ಶಿಶುನಾಳ ಶರೀಫರು ಹೇಮರೆಡ್ಡಿ ಮಲ್ಲಮ್ಮನನ್ನು ಕುರಿತು

"ನಿನ್ನ ಕಷ್ಟ ದುಃಖ ಹೇಳಲಾರೆನಮ್ಮ,
ಗಂಡನ ಮೇಲೆ ಪ್ರೇಮ,
ಹೊತ್ತಿಗಂಬಲಿ ಸಿಗಲಿಲ್ಲವಮ್ಮ,
ಮಣ್ಣು ಪಾತ್ರೆ ಮಜ್ಜಿಗೆ ನೇಮ,
ಮಲ್ಲಯ್ಯನು ಪಾಲುಗಾರನಮ್ಮ
ಉಂಡುಹೋದ,ಉಳಿಯಲಿಲ್ಲವಮ್ಮ"
ಎಂದು ಹಾಡಿ ಹೊಗಳಿದ್ದಾರೆ.

***ಮಲ್ಲಮ್ಮಳ ಜೀವನ ವೃತ್ತಾಂತ ಹಾಗೂ ತಾತ್ವಿಕನೆಲೆ :**

ಭಾರತದ ಪವಿತ್ರ ಜ್ಯೋರ್ತಿಲಿಂಗಗಳಲ್ಲಿ ಒಂದಾಗಿರುವ ಶ್ರೀಶೈಲ ಕ್ಷೇತ್ರದ ಬಡಗಣ ದಿಕ್ಕಿನಲ್ಲಿರುವ ರಾಮಪೂರ ಎಂಬ ಗ್ರಾಮದ ಗೌರಮ್ಮಾತಾಯಿ ರಾಮರೆಡ್ಡಿ ಎಂಬ ದಂಪತಿಗಳ ಉದರದಿಂದ ಜನಿಸಿದಳು. ಬಾಲ್ಯದಿಂದಲು ಶ್ರೀಶೈಲ ಮಲ್ಲಿಕಾರ್ಜುನನ್ನು ಪೂಜಿಸುತ್ತಾ ಬಂದ ಈ ತಾಯಿ ಆ ಮಲ್ಲಿಕಾರ್ಜುನನ್ನು ಸಾಕ್ಷಾತ್ಕರಿಸಿಕೊಂಡಳು ಎಂದು ಇತಿಹಾಸ ತಿಳಿಸುತ್ತದೆ.

ಮಗಳು ಮದುವೆಯ ವಯಸ್ಸಿಗೆ ಬಂದಳೆಂದು ತಿಳಿದ ತಂದೆ-ತಾಯಿಗಳು ಸ್ವಲ್ಪವೇ ದೂರದಲ್ಲಿ ಇರುವ ಸಿದ್ದಾಪೂರ ಎಂಬ ಗ್ರಾಮದ ಭರಮರೆಡ್ಡಿ ಎಂಬುವವರಿಗೆ ಕೊಟ್ಟು ಮದುವೆ ಮಾಡಿದರು. ಮತಿಭ್ರಮಣೆಗೊಂಡಿದ್ದ ಭರಮರೆಡ್ಡಿಗೆ ಗ್ರಾಮ ಸೇರಿದಂತೆ ಸುತ್ತ-ಮುತ್ತಿನ ಗ್ರಾಮದವರು ಹುಚ್ಚನೆಂದು ಬಿಂಬಿಸುತ್ತಿದ್ದರು.

ಜನರ ಮಾತಿಗೆ ಜಗ್ಗದ ಈ ಮಾತೆ "ಪತಿಯೇ ಪರಮೇಶ್ವರ" ಎಂದು ತಿಳಿದು ಪತಿಯಲ್ಲಿ ಮುಗ್ಧತೆ, ಸೌಮ್ಯತೆ, ಸಾಧುಭಾವನೆಗಳು, ಕನಿಕರ ಇವೆಲ್ಲ ಇವೆ ಎಂದು ಸಮಾಧಾನದಿಂದ ಪತಿಯ ಸೇವೆಗೈಯುತ್ತಿದ್ದಳು. ಜೀವನದ ಕೊನೆಯ ದಿನಗಳವರೆಗೂ



ಕಷ್ಟ ಎದುರಾದರೂ ಕೂಡಾ ತನ್ನ ಕಷ್ಟ ಯಾರಲ್ಲೂ ಹೇಳಿಕೊಳ್ಳದೆ, ಇತರರ ನೋವನ್ನು ಮರೆಸುವ ಕೆಲಸದಲ್ಲಿ ತಲ್ಲೀನಳಾಗಿರುತ್ತಿದ್ದಳು.

*** ಆಧ್ಯಾತ್ಮಕ ಶಿಖರ ಏರಿದ ಸಾಧಕಿ:-**

ನೆರೆ ರಾಜ್ಯ ಆಂಧ್ರ ಪ್ರದೇಶದ ಶ್ರೀಶೈಲ ಹಾಗೂ ಸುತ್ತ ಮುತ್ತಲಿನ ಪ್ರದೇಶವನ್ನು ಆಳಿದ ರಾಜವಂಶ "ಕೊಂಡವೀಡು" ಮನೆತನದ ಸೊಸೆಯಾದ ಮಲ್ಲಮ್ಮ ಮಲ್ಲಿಕಾರ್ಜುನ ಸ್ವಾಮಿಯ ಮಾನಸಪುತ್ರಿ. ತನ್ನ ದೈವ ಭಕ್ತಿಯಿಂದ ವರಿಸಿಕೊಂಡು ಅಧ್ಯಾತ್ಮದ ಶಿಖರ ಏರಿದವಳು. ಆರಿಸಿಕೊಂಡ ಕ್ಷೇತ್ರದಲ್ಲಿ ಅತಿಭಕ್ತಿ, ಶ್ರಮ, ನಂಬಿಕೆ ಇದ್ದರೆ ಶ್ರೀಸಾಮಾನ್ಯರೂ ಕೂಡಾ ಸಾಧನೆ ಮಾಡಬಲ್ಲರು ಎಂದು ತೋರಿಸಿದವಳು ಈ ಮಾತೆ. ಹಿಂದಿ ಭಾಷೆಯಲ್ಲಿ ಮಾತೊಂದಿದೆ.

"ಕೋಯಿ ತುಮ್ಹೆ ತಬ್‌ತಕ್ ಹರಾ ನಹೀ ಸಕ್ತಾಜಬ್‌ತಕ್ ತುಮ್ ಖುದ್‌ಸೇ ನ ಹಾರ್ ಜಾಯೋ".

ನಾವು ನಮ್ಮ ಆತ್ಮವಿಶ್ವಾಸ ಕಳೆದುಕೊಂಡರೆ ಬಲಹೀನನು ಕೂಡಾ ನಮ್ಮನ್ನು ಸೋಲಿಸಬಲ್ಲ. ಮಲ್ಲಮ್ಮಳಲ್ಲಿಯ ಬಲವಾದ ಭಕ್ತಿ, ನಂಬಿಕೆ ತತ್ವಾದರ್ಶಗಳೇ ಇಂದು ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ ಸರಕಾರದ ವತಿಯಿಂದ ಜಯಂತಿ ಆಚರಣೆಗೆ ಅವಕಾಶ ನೀಡಿ ಗೌರವಿಸಿವೆ.

ದೊಡ್ಡ ಸಂಖ್ಯೆಯ ಸದಸ್ಯರಿರುವ ಕುಟುಂಬದಲ್ಲಿ ನೆಲೆಸಿರುವ ಮಲ್ಲ ಮ್ಮ ಕುಟುಂಬದಲ್ಲಿ ಎದುರಾಗಿರುವ ಯಾವ ಸಮಸ್ಯೆಗಳಿಗೂ ಎದೆಗುಂದದೇ, ವಿರೋಧ ವ್ಯಕ್ತಪಡಿಸದೆ ಮಲ್ಲಿಕಾರ್ಜುನ ದೇವರ ಮೇಲೆ ಭಕ್ತಿಯಿಟ್ಟು ಕಾಯಕದಲ್ಲಿ ತಲ್ಲೀನಳಾದ ಈ ಮಹಾತಾಯಿ "ಕಾಯಕವೇ ಕೈಲಾಸ" ಎಂಬ ತತ್ವದ ನೆಲೆಯ ಮೇಲೆ ಜೀವನ ಸಾಗಿಸುತ್ತಿದ್ದಳು. ಅವಳು ಭಕ್ತಿ ಭಾವದಿಂದ ದೇವರನ್ನು ಸಾಕ್ಷಾತ್ಕರಿಸಿಕೊಂಡದ್ದು, ಅಸಾಮಾನ್ಯವಾದ ಇತಿಹಾಸ.

ಆಂಧ್ರಪ್ರದೇಶದ ಕೆ.ಜಿ ದಿಂದ ಪಿ.ಜಿ. ವರೆಗಿನ ಶಿಕ್ಷಣದ ಪಠ್ಯವಸ್ತುವಿನಲ್ಲಿ ಮಲ್ಲಮ್ಮಳ ಇತಿಹಾಸ ಸೇರ್ಪಡೆಗೊಂಡಿರುವುದು ಇವಳ ಧಾರ್ಮಿಕ ಹಾಗೂ ನೈತಿಕ ಸಾಧನೆಯ ಅಸಾಮಾನ್ಯ ಮಾತು.

ಶ್ರೀಶೈಲದ "ಸೂರ್ಯಸಿಂಹಾಸನ" ಪೀಠದ ಅಂದಿನ ಜಗದ್ಗುರು ಶ್ರೀ ಚಂದ್ರಗುಂಡ ಶಿವಾಚಾರ್ಯ ಸ್ವಾಮಿಗಳಿಂದ ಮಾರ್ಗದರ್ಶನ ಪಡೆದು ಜಗದ್ಗುರು ಶ್ರೀ ಕರಿಬಸವೇಂದ್ರ ಶಿವಾಚಾರ್ಯರ ಉಪದೇಶದಿಂದ ಪ್ರೇರಣೆಗೊಂಡ ಈ ಮಾತೆ ಈ ಶ್ರೇಷ್ಠ ಸಾಧನೆ ಮಾಡಿದಳು.

***ಲೌಕಿಕ ತುಮುಲಗಳಿಗೆ ಅಂಟಿ-ಕೊಂಡ ಮೈದುನನ ಮನಪರಿವರ್ತನೆ ಮಾಡಿದ ಪ್ರಸಂಗ :-**

ದುಶ್ಚಟಗಳಿಗೆ ದಾಸನಾದ ಮೈದುನ ವೇಮನ ಬೇರೆ ಸ್ತ್ರೀಯೊಬ್ಬಳ ಮನದಾಸೆ ಈಡೇರಿಸಲು ಅತ್ತಿಗೆ-ಯಾಗಿದ್ದ ಮಲ್ಲಮ್ಮಳ ಮೂಗುತಿಯನ್ನು ಬೇಕೆಂದು ಕೇಳುತ್ತಾನೆ. ಮಲ್ಲಮ್ಮ ಕೆಲ ಷರತ್ತುಗಳ ಮೂಲಕ ಆತನಿಗೆ ಮೂಗುತಿ ನೀಡಿ ಆತನ ಮನ ಪರಿವರ್ತಿಸಿ ಸ್ತ್ರೀಸಂಗವನ್ನು ತೋರಿಯುವಂತೆ ಮಾಡಿದಳು.

ಲೌಕಿಕ ದುಶ್ಚಟಗಳಿಗೆ ಅತೀಯಾಗಿ ಹೊಂದಿಕೊಂಡು ದುರ್ಮಾರ್ಗ ಹಿಡಿದಿದ್ದ ಮೈದುನನಿಗೆ ತತ್ವಜ್ಞಾನವ ಹೇಳಿ ಅಧ್ಯಾತ್ಮನ ದಾರಿಯನ್ನು ತೋರಿಸಿದ ಈ ಮಾತೆ ಮೈದುನ ವೇಮನನ ಪಾಲಿಗೆ ಗುರುವಿನ ರೂಪ ಪಡೆದುಕೊಂಡಳು. ತೆಲುಗು ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ ವೇಮನ ಎಂಬ ಈ ಶ್ರೇಷ್ಠ ಸಾಹಿತಿಗೆ ಪ್ರೇರಣಾ ಶಕ್ತಿ ಎಂದರೆ ಅತ್ತಿಗೆ ಹೇಮರೆಡ್ಡಿ ಮಲ್ಲಮ್ಮ ಎಂದೇ ಹೇಳಬಹುದು. ಕೃಷ್ಣದೇವರಾಯ ವಿಶ್ವವಿದ್ಯಾಲಯ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕ ವಿದ್ಯಾಪೀಠ ರಚನೆ ಮಾಡಿರುವುದು ಒಳ್ಳೆಯ ಬೆಳವಣಿಗೆ ಹಾಗೂ ಪ್ರೇರಣಾ ಶಕ್ತಿ ಎಂದರೆ ತಪ್ಪಾಗಲಾರದು.

***ಮಲ್ಲಿಕಾರ್ಜುನ ಸ್ವಾಮಿಯ ಸತ್ವ ಪರೀಕ್ಷೆ ಭಕ್ತಿ ಹಾಗೂ ಆಶೀರ್ವಾದ :-**

ದೊಡ್ಡ ಕುಟುಂಬವೊಂದರಲ್ಲಿ ಜೀವಿಸುತ್ತಿದ್ದ ಮಲ್ಲಮ್ಮ ಅತ್ಯಂತ ಭಕ್ತಿ, ನಿಷ್ಠೆಯಿಂದ ಕಾಯಕ ಮಾಡುತ್ತಾ ಗುರು, ಲಿಂಗ, ಜಂಗಮ ಸೇವೆಯಲ್ಲಿ ತಲ್ಲೀನಳಾಗಿರುತ್ತಿದ್ದಳು. ಆದರೆ ಅವಳ ಭಕ್ತಿ, ಪ್ರಮಾಣಿಕತೆ, ಪಾವಿತ್ರ್ಯತೆ, ಪತಿವೃತೆ ಚೆನ್ನಾಗಿ ಅರಿತುಕೊಳ್ಳದ ಅತ್ತೆ ಹಾಗೂ ಗಂಡನ ಸಹೋದರಿ (ನಾದೀನಿ) ತುಂಬಾ ಉಪಟಳ ನೀಡುತ್ತಿದ್ದರು. ದನ-ಕರು ಮೆಯಿಸಿಕೊಂಡು ಬರಲು ಕಾಡಿಗೆ ಕಳುಹಿಸಿ ಅವಳಿಗೆ ತುಂಬಾ ಚಿತ್ರಹಿಂಸೆ ನೀಡುವ ಕೆಲಸ ಮಾಡುತ್ತಿದ್ದರು. ಹಾಗೂ ಪತಿ ಭರಮರೆಡ್ಡಿಗೆ "ನಿನ್ನ ಪತ್ನಿ ದಾರಿ ತಪ್ಪಿದ್ದಾಳೆ. ಅವಳನ್ನು ಸುಮ್ಮನೆ ಬಿಡಬೇಡ". ಎಂದು ಹೇಳಿ ಅವಳನ್ನು ಹೊಡೆಯಲು ಕೊಡಲಿಯೊಂದಿಗೆ ಅವನನ್ನು ಕಾಡಿಗೆ ಕಳುಹಿಸಿದರು. ಆಗ ಅಲ್ಲಿ ನಡೆ-ಯುತ್ತಿದ್ದ ನೈಜ ಸಂಗತಿಯನ್ನು ಕಂಡ ಭರಮರೆಡ್ಡಿಯ ಕೈಯಿಂದ ಕೊಡಲಿ ತಾನಾಗಿಯೇ ಜಾರಿಬಿತ್ತು. ಇವಳ ಭಕ್ತಿಗೆ ಒಲಿದ ಸಾಕ್ಷಾತ್ ಮಲ್ಲಿಕಾರ್ಜುನ ಪ್ರತ್ಯಕ್ಷನಾಗಿ ಅವಳಿಂದ ಸೇವೆ ಪಡೆದು, ಪ್ರಸಾದ ನೀಡುವ ದೃಶ್ಯ ಭರಮರೆಡ್ಡಿಯನ್ನು ಮಂತ್ರಮುಗ್ಧನನ್ನಾಗಿಸಿತ್ತು.

ಮುಗ್ಧ ಮನಸ್ಸಿನ ಮಾತೆ ಹೇಮರೆಡ್ಡಿ ಮಲ್ಲಮ್ಮ ಯಾವತ್ತು ಕೂಡಾ ತನ್ನ ಮನೆಯಲ್ಲಿ ನಡೆಯುವ ಕಿರುಕುಳವಾಗಲಿ, ಜಂಗಮರಿಗೆ ಮಾಡುವ ಅವಮಾನವಾಗಲಿ ಎಲ್ಲೂ ಹೇಳಿರಲಿಲ್ಲ. ಆದರೆ ಜಗತ್ತಿನ ಒಡೆಯ ಮಲ್ಲಿಕಾರ್ಜುನ ಎಲ್ಲವನ್ನು ಅರಿತು ನೇರವಾಗಿ ಜಂಗಮ ರೂಪದಲ್ಲಿ ಹೇಮರೆಡ್ಡಿಯವರ ಮನೆಗೆ ಭಿಕ್ಷೆ ಬೇಡಲು ಬಂದು ಕುಟುಂಬಸ್ಥರಿಂದ ಅವಮಾನಕ್ಕೆ ಒಳಗಾಗುತ್ತಾನೆ.

ಇದರಿಂದ ಸಿಟ್ಟಿಗೆದ್ದ ಜಗದೊಡೆಯ ಮಲ್ಲಿಕಾರ್ಜುನ ಶಾಪ ನೀಡುತ್ತಾನೆ. ಇಡೀ ಮನೆತನ ನಾಶದ

ಅಂಚು ತಲುಪುವುದಲ್ಲದೆ, ಎಲ್ಲರೂ ಮಹಾರೋಗಕ್ಕೆ ಒಳಗಾಗುತ್ತಾರೆ. ತಮ್ಮ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಟ್ಟು ಎಲ್ಲರೂ ಕಾಡಿಗೆ ತೆರಳಿ ಅಲ್ಲಿರುವ ಮಲ್ಲಮ್ಮನ ಮೂಲಕ ಕ್ಷಮೆ ಕೇಳುವ ಕೆಲಸಕ್ಕೆ ಮುಂದಾಗುತ್ತಾರೆ.

ಆಗ ನಿಷ್ಕಪಟಿ, ನಿಷ್ಕಳಂಕಿತೆ ಈ ಮಲ್ಲಮ್ಮ ತಾಯಿ "ಮತ್ತೆ ನನ್ನ ಗಂಡನ ಮನೆ ಜಗಮಗಿಸಲಿ" ಎಂದು ಮಲ್ಲಿಕಾರ್ಜುನನಲ್ಲಿ ಪರಿ-ಪರಿಯಾಗಿ ಬೇಡಿಕೊಳ್ಳುತ್ತಾಳೆ. ಅಂತೆಯೇ ಎಲ್ಲವೂ ಮೊದಲಿನಂತಾಗುತ್ತದೆ.

***ಮಲ್ಲಿಕಾರ್ಜುನನ ವರಪಡೆದ ಮಾತೆ:-**

ಕಾಲ ಕಳೆದಂತೆ ಮಲ್ಲಮ್ಮ ತನ್ನ ಪತಿಯನ್ನು ಕರೆದುಕೊಂಡು ಶ್ರೀಶೈಲ ಮಲ್ಲಿಕಾರ್ಜುನ ಗುಡ್ಡದಲ್ಲಿ ಒಂದು ಧ್ಯಾನ ಮಂದಿರ ನಿರ್ಮಿಸಿಕೊಂಡು ತನ್ನ ಆರಾಧ್ಯ ದೇವನನ್ನು ನೆನಯುತ್ತಾ ದಿನ ಕಳೆದಳು. ಇವಳ ಭಕ್ತಿಯ ಪರಾಕಾಷ್ಠೆಗೆ ಮತ್ತೆ ಒಲಿದ ಮಲ್ಲಿಕಾರ್ಜುನ ಕೊನೆಯ ದಿನಗಳ ಆಸೆ, ಆಕಾಂಕ್ಷೆಗಳನ್ನು ತಿಳಿಸೆಂದು ಕೇಳಿದಾಗ "ಯಾರೂ ದುಃಖದಿಂದ ಇರಬಾರದು, ತನ್ನ ಬಳಗಕ್ಕೆಂದೂ ಬಡತನ ಬಾರದಿರಲಿ ಅವರಿಗೆಂದು ಉಣ್ಣಲೂ, ಉಡಲು ಯಾವ ಕೊರತೆ-ಯೂ ಆಗದಿರಲಿ. ನಾಡಿನಲ್ಲಿ ಶಾಂತಿ ನೆಲೆಸಲಿ, ಜಾತ್ರೆ ಉತ್ಸವಗಳು ನಡೆ-ಯುತ್ತಿರಲಿ" ಎಂದು ಬೇಡಿಕೊಂಡಳು. ಶ್ರೀಶೈಲ ಮಲ್ಲಿಕಾರ್ಜುನ ಮಲ್ಲಮ್ಮಳ ಮನಸ್ಸಿನ ಭಾವನೆಗಳಿಗೆ ಸ್ಪಂದಿಸಿ ಹಾಗೆಯೇ ಆಗಲಿ ಎಂದು ಆಶೀರ್ವದಿಸಿದ. ಆಗ ಈ ಮಾತೆಯ ಕಣ್ಣು ತುಂಬಿ ಬಂದವು. ಕಂಬನಿಗಳು ಪಟ-ಪಟನೆ ಉದುರಿದವು ಆ ಕಣ್ಣೀರೆ ಇಂದು ಪವಿತ್ರ ನದಿಯಾಗಿ ಸುಮಾರು 580 ವರ್ಷಗಳಿಂದ ಪವಿತ್ರ ಝು-ರಿಯಾಗಿ ಜುಳು-ಜುಳು ಎಂದು ಹರೆಯುತ್ತಿದೆ ಎಂಬುದಾಗಿ ಇತಿಹಾಸ ತಿಳಿಸುತ್ತದೆ.

ಶ್ರೇಷ್ಠ ಶರಣೆಯರಲ್ಲಿ ಹೇಮರೆಡ್ಡಿ ಮಲ್ಲಮ್ಮನವರ ಕೀರ್ತಿ ಅಪಾರ, ಅದಮ್ಯ ಮಹಾ ಪತಿವ್ರತೆ ಮಲ್ಲಮ್ಮನವರ ಜಯಂತಿ ಕೇವಲ ಒಂದು ಸಮಾಜಕ್ಕೆ ಸೀಮಿತವಾಗದೆ, ಎಲ್ಲಾ ಸಮಾಜದವರು ಭಾಗಿಯಾಗುತ್ತಾ ಆಚರಿಸುತ್ತಿರುವುದು ನ್ಯಾಯ, ಸಹನೆ, ತಾಳ್ಮೆ, ಪ್ರಮಾಣಿಕತೆ, ಪತಿವ್ರತೆ ಈ ಎಲ್ಲಾ ಮಹತ್ವದ ಅಂಶಗಳಿಗೆ ಬೆಲೆ ನೀಡುತ್ತಿರುವುದು ತುಂಬಾ ಸಂತೋಷದ ವಿಷಯವಾಗಿದೆ. ಆ ಪತಿವ್ರತೆಯ ಜೀವನ ಇಂದಿನ ಸ್ತ್ರೀಸಮಾಜಕ್ಕೆ ಮಾದರಿಯಾಗಲಿ ಎಂಬುವುದೇ ನನ್ನ ಅಂತರಾಳದ ಮಾತು.






ಲೇಖಕರು:-
ಕೆ.ವೀರಾರೆಡ್ಡಿ ಎಂ.ಎ.,ಎಂ.ಈಡಿ
ಸಹ ಶಿಕ್ಷಕ
ಸರಕಾರಿ ಪ್ರೌಢ ಶಾಲೆ ವಳಖಿಂಡಿ
ತಾ: ಚಿಟಗುಪ್ಪಾ, ಜಿಲ್ಲೆ: ಬೀದರ
ಮೋ.ನಂ.+91 9620940149

# ಐತಿಹಾಸಿಕವಾಗಿ 1.14 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ
# ಕಂದಾಯ ಸೇವೆಯಲ್ಲಿ ಕರ್ನಾಟಕ ದೇಶದಲ್ಲೇ ನಂಬರ್-1:ಪ್ರಿಯಾಂಕ್ ಖರ್ಗೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಂದಾಯ ಸೇವೆಗಳನ್ನು ಪಡೆಯಲು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲೆಂದೆ ಸರ್ಕಾರ ಅನೇಕ ಸೇವೆಗಳನ್ನು ಡಿಜಿಟಲ್ ಮೂಲಕ ಜನರ ಮನೆಗೆ ಆಡಳಿತ ತೆಗೆದುಕೊಂಡು ಹೋಗಿದ್ದು, ಕಂದಾಯ ಸೇವೆ ಮತ್ತು ಪಂಚಾಯತ್ ರಾಜ್ ಸೇವೆ ನೀಡುವಲ್ಲಿ ಕರ್ನಾಟಕ ದೇಶದಲ್ಲೇ ನಂಬರ್ 1 ಸ್ಥಾನದಲ್ಲಿದೆ ಎಂದು ಹೇಳಿದರು.

ಶನಿವಾರ ನಗರದ ಡಾ. ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಕಂದಾಯ ಇಲಾಖೆಯ ಯೋಜನೆ ಫಲಾನುಭವಿಗಳಿಗೆ ಹಕ್ಕುಪತ್ರ. ಪಹಣಿ. ಪಿಂಚಣಿ ಮತ್ತಿತರ ವಿವಿಧ ಸೌಲಭ್ಯ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ನಮ್ಮ ಸರ್ಕಾರ ಈಗಾಗಲೇ ನುಡಿದಂತೆ ಐದು ಗ್ಯಾರಂಟಿಗಳನ್ನು ಜನರಿಗೆ ತಲುಪಿಸಿದ್ದೇವೆ. ಜನಸಾಮಾನ್ಯರಿಗೆ ಅವರ ಆಸ್ತಿಯ ಕಾನೂನಾತ್ಮಕ ಹಕ್ಕುದಾಖಲೆಗಳನ್ನು ಒದಗಿಸುವ ಭೂ ಗ್ಯಾರಂಟಿ ಆರನೇ ಗ್ಯಾರಂಟಿ ಇದ್ದಂತೆ ಎಂದರು.

ಇಂದಿಲ್ಲಿ ವಿತರಿಸಿದ ಹಕ್ಕುಪತ್ರಗಳು, ದರಖಾಸ್ತು ಪೋಡಿ, ಇ-ಫೌತಿ ಕೇವಲ ಕಾಗದವಲ್ಲ, ಇವು ಬಡವರ ಸ್ವಾಭಿಮಾನದ ಬದುಕು ಮತ್ತು ಆರ್ಥಿಕ ಭದ್ರತೆಯ ಅಡಿಪಾಯವಾಗಿವೆ. ಒಬ್ಬ ವ್ಯಕ್ತಿಗೆ ತನ್ನ ಸ್ವಂತ ನೆಲದ ಮೇಲೆ ಅಧಿಕೃತ ಹಕ್ಕು ಸಿಕ್ಕಾಗ ಮಾತ್ರ ಅವನಿಗೆ ಸ್ವಾಭಿಮಾನದ ಬದುಕು ಲಭಿಸುತ್ತದೆ. ಇಂದು ವಿತರಿಸಲಾದ ದಾಖಲೆಗಳು ಕೇವಲ ಕಾಗದದ ತುಂಡುಗಳಲ್ಲ, ಇವು ಬಡವರ ಆರ್ಥಿಕ ಸಬಲೀಕರಣದ ಭರವಸೆಗಳಾಗಿವೆ. ದಾಖಲೆಗಳ ಮೂಲಕ ರೈತರು ಮತ್ತು ಬಡವರು ಬ್ಯಾಂಕ್ ಸಾಲ, ಬೆಳೆ ವಿಮೆ ಹಾಗೂ ಸರ್ಕಾರಿ ಸಬ್ಸಿಡಿಗಳನ್ನು ಸುಲಭವಾಗಿ ಪಡೆಯಬಹುದು. ಕಳೆದ ಮೂರು ವರ್ಷದಲ್ಲಿ ಕಂದಾಯ ಇಲಾಖೆಯು ದಾಖಲೆ ಪ್ರಮಾಣದಲ್ಲಿ ಇಂದಿಲ್ಲಿ 1,14,337 ಫಲಾನುಭವಿಗಳು ಏಕಕಾಲದಲ್ಲಿ ಸೌಲಭ್ಯಗಳನ್ನು



ವಿತರಣೆ ಮಾಡುತ್ತಿರುವುದು ಕಂದಾಯ ಕ್ರಾಂತಿಯಾಗಿದೆ. ಇದಕ್ಕೆ ಹಗಲಿರುಳು ಶ್ರಮಿಸಿದ ಜಿಲ್ಲಾಧಿಕಾರಿ ಬಿ.ಫೌಜಿಯಾ ನೇತೃತ್ವದ ಕಂದಾಯ ಇಲಾಖೆಯ ಇಡೀ ತಂಡದ ಕಾರ್ಯ ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆಯ ಮಾತುಗಳನ್ನಾಡಿದರು.

40 ವರ್ಷದಿಂದ ಬಾಕಿ ಇದ್ದ ದರಖಾಸ್ತು ಪೋಡಿಗಳ ದುರಸ್ತಿಗೆ ಮುಕ್ತಿ ನೀಡಲಾಗಿದೆ. 94ಸಿ, 94 ಸಿ.ಸಿ.ನಲ್ಲಿ ಮನೆ ಹಕ್ಕು ಪತ್ರ ನೀಡಲಾಗಿದೆ. ಆಸ್ತಿ ಕಬಳಿಕೆ ತಡೆಯಲು ಆರ್.ಟಿ.ಸಿ.ಗೆ ಆಧಾರ್ ಸೀಡಿಂಗ್ ಮಾಡಿಸಲಾಗಿದೆ. ಹಿಂದೆಂದೂ ಆಗದ ಕೆಲಸ ಕಳೆದ 3 ವರ್ಷದ ನಮ್ಮ ಸರ್ಕಾರದ ಅವಧಿಯಲ್ಲಿ ಜಿಲ್ಲೆಯಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ. ಹಿಂದಿನ ಬಿ.ಜೆ.ಪಿ. ಸರ್ಕಾರದಲ್ಲಿ ಅತಿವೃಷ್ಠಿಗೆ ಜಿಲ್ಲೆಗೆ ಗರಿಷ್ಠ ಪರಿಹಾರ ನೀಡಿದ್ದು 22 ಕೋಟಿ ರೂ. ಮಾತ್ರ. ನಮ್ಮ ಅವಧಿಯಲ್ಲಿ ಕಳೆದ ಮೂರು ವರ್ಷದಲ್ಲಿ 2,590 ಕೋಟಿ ರೂ. ಪರಿಹಾರ ಜನರಿಗೆ ನೀಡಿದ್ದೇವೆ. ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಯ ಪ್ರಮಾಣಿಕ ಪ್ರಯತ್ನದಿಂದ ರೈತರಿಗೆ ನ್ಯಾಯಯುತ ಬೆಳೆ ವಿಮೆ, ಪರಿಹಾರ ಲಭಿಸಿದೆ. ಬೆಳೆ ವಿಮೆ ಪರಿಹಾರ ನೀಡುವಲ್ಲಿ ಕಲಬುರಗಿ ಜಿಲ್ಲೆ ರಾಷ್ಟ್ರದಲಿಯೆ ನಂಬರ್-2ನೇ ಸ್ಥಾನದಲ್ಲಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ದಕ್ಷಿಣ ಮತಕ್ಷೇತ್ರ ಶಾಸಕ ಅಲ್ಲಮಪ್ರಭು ಪಾಟೀಲ್ ಅವರು ಮಾತನಾಡಿ ಜಿಲ್ಲೆಯಲ್ಲಿ ಕಳೆದ 3 ವರ್ಷದ ಅವಧಿಯಲ್ಲಿ ದಾಖಲೆ ಪ್ರಮಾಣದಲ್ಲಿ 6,060 ಹಕ್ಕು ಪತ್ರಗಳನ್ನು ನೀಡಿಲಾಗಿದೆ. ಇದು ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಸಾಧನೆಯಾಗಿದೆ. ಶೇ.76 ರಷ್ಟು ಪಹಣಿಗಳಿಗೆ ಆಧಾರ್ ಜೋಡಣೆ ಮಾಡುವ ಮೂಲಕ ಭೂ ದಾಖಲೆಗಳ ನಿರ್ವಹಣೆಯಲ್ಲಿ ಸುರಕ್ಷತೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಲಾಗಿದೆ ಎಂದರು.

ಇನ್ನು ಸಚಿವ ಪ್ರಿಯಾಂಕ್ ಖರ್ಗೆ ಅವರು ಪ್ರಗತಿ ಪಥ ಯೋಜನೆಯಡಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಸುಮಾರು 80 ಕಿ.ಮೀ ಗ್ರಾಮೀನ ರಸ್ತೆ ಅಭಿವೃದ್ಧಿ ಪಡಿಸುತ್ತಿದ್ದಾರೆ. ಜನರ ಅನುಕೂಲಕ್ಕಾಗಿ ಪ್ರತಿ ಹೋಬಳಿ ಮಟ್ಟದಲ್ಲಿ ತಲಾ 60 ಲಕ್ಷ ರೂಪಾಯಿ ವೆಚ್ಚದಲ್ಲಿ 'ಪ್ರಜಾ ಸೌಧ' ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ವಿಪತ್ತು ನಿರ್ವಹಣೆ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳನ್ನು ನೇರವಾಗಿ ಬಡವರ ಮನೆಬಾಗಿಲಿಗೆ ತಲುಪಿಸುವಲ್ಲಿ ಜಿಲ್ಲಾಡಳಿತವು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಇಂತಹ ಅನೇಕ ಜನಪರ ಯೋಜನೆಗಳು ಇಡೀ ರಾಜ್ಯಕ್ಕೆ ಮಾದರಿಯಾಗಿವೆ ಎಂದು ಹೇಳಿದರು.

330 ಕಂದಾಯ ಗ್ರಾಮ ಘೋಷಣೆ,23 ಸಾವಿರ ಪಹಣಿ ತಿದ್ದುಪಡಿ:

ಇದಕ್ಕು ಮುನ್ನ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಕಳೆದ ಮೂರು ವರ್ಷದಲ್ಲಿ ಕಂದಾಯ ಗ್ರಾಮ ಯೋಜನೆಯಡಿ 368 ಗ್ರಾಮ ಗುರುತಿಸಿ ಅದರಲ್ಲಿ 330 ಗ್ರಾಮಗಳನ್ನು ಘೋಷಿಸಿ, 6,060 ಡಿಜಿಟಲ್ ಹಕ್ಕುಪತ್ರ ವಿತರಿಸಲಾಗಿದೆ. 23,447 ಪಹಣಿ ತಿದ್ದುಪಡಿ ಮಾಡಿಕೊಡಲಾಗಿದೆ. 542 ಪ್ರಕರಣಗಳಲ್ಲಿ ಅನುಬಂಧ-1 ಸೃಜಿಸಿ 1,660 ಮಂಜೂರುದಾರರ ಒಳಗೊಂಡ 978 ದಾಖಲೆಗಳು ದರಖಾಸ್ತು ಪೋಡಿ ದುರಸ್ತಿ ಮಾಡಿ 965 ಪಹಣಿ ಸೃಜಿಸಿದೆ. ಇದರಿಂದ ಗ್ರಾಮೀಣ ಜನರಿಗೆ ಹಕ್ಕು ಪತ್ರ ನೀಡುವುದರೆ ಜೊತೆಗೆ ಸರ್ಕಾರಿ ಸೌಲಭ್ಯ ಪಡೆಯಲು ಅವಕಾಶ ಮಾಡಿಕೊಡಲಾಗಿದೆ ಎಂದರು.

ಭೂ-ಸುರಕ್ಷಾ ಯೋಜನೆಯಡಿ ಜಿಲ್ಲೆಯ 11 ತಾಲೂಕಿನಲ್ಲಿ 1.41 ಕೋಟಿ ಪುಟಗಳ ದಾಖಲೆಗಳನ್ನು ಡಿಜಿಟಲೀಕರಿಸಲಾಗಿದ್ದು, ಇನ್ಮುಂದೆ ದಾಖಲೆಗಳು ವಿರೂಪಕ್ಕೆ ಅವಕಾಶವಿಲ್ಲ. 33,940 ಇ-ಪೌತಿ ಅರ್ಜಿಗಳು ಪೂರ್ಣಗೊಂಡಿವೆ. 453 ಗ್ರಾಮಗಳಲ್ಲಿ ಪೋಡಿ ಮುಕ್ತ ಅಳತೆ ಕಾರ್ಯ ಮುಗಿದಿದ್ದು, ರೈತರ ಮನೆಬಾಗಿಲಿಗೇ ಏಕಮಾಲಿಕತ್ವದ ಪಹಣಿ ತಲುಪಿಸಲಾಗುತ್ತಿದೆ. ಪಹಣಿಗೆ ಆಧಾರ್ ಸೀಡಿಂಗ್ ಶೇ.85ರಷ್ಟು ಪ್ರಗತಿ ಸಾಧಿಸಲಾಗಿದೆ.

# ವರ್ಷಾಂತ್ಯಕ್ಕೆ ಗ್ರಾಮ ಪಂಚಾಯತ್ ಚುನಾವಣೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಪ್ರಸಕ್ತ ಕ್ಯಾಲೆಂಡರ್ ವರ್ಷದ ಅಂತ್ಯದೊಳಗೆ ಗ್ರಾಮ ಪಂಚಾಯತ್ ಚುನಾವಣೆ ನಡೆಸಿ ಸಂಪೂರ್ಣ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗ್ರಾಮ ಪಂಚಾಯತ್ ಗಡಿ ಗುರುತಿಸುವ ಕಾರ್ಯಕ್ಕೆ ಆಕ್ಷೇಪಣೆ ಸಲ್ಲಿಸಲು ಕೊನೆ ದಿನ ಮುಗಿದಿದ್ದು, ಶೀಘ್ರದಲ್ಲೆ ಚುನಾವಣೆ ನಡೆಸಲಾಗುವುದು. ಇದಾದ ನಂತರ ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆ ಸಹ ನಡೆಸಲಾಗುವುದು ಎಂದರು.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಅವರು, ಕುಡಿಯುವ ನೀರಿಗೆ ಯಾವುದು ಅನುದಾನ ಕೊರತೆ ಇಲ್ಲ. ನೀರಿನ ಸಮಸ್ಯೆ ಇರುವ 21 ಗ್ರಾಮಗಳಲ್ಲಿ ಹೊಸದಾಗಿ ಬೋರವೆಲ್ ಕೊರೆಯಲಾಗಿದೆ. 4 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಪ್ರತಿ ಜಿಲ್ಲೆಗೆ 5 ಕೋಟಿ ರೂ. ಅನುದಾನ ಒದಗಿಸಿದೆ. ಇದು ಖರ್ಚು ಮಾಡಿದರೆ ಹೆಚ್ಚಿನ ಅನುದಾನ ಸಹ ನೀಡಲಾಗುವುದು. ಇನ್ನು ಕೆ.ಕೆ.ಆರ್.ಡಿ.ಬಿ ಮಂಡಳಿಯಿಂದ 17.30 ಕೋಟಿ ರೂ. ಅನುದಾನ ಸಹ ನೀಡಲಾಗಿದೆ. ಶಾಸಕರ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ರಚನೆ ಮಾಡಿದ್ದು, ಶಾಸಕರ ನಿರ್ಧರಿಸಿದಂತೆ ಕುಡಿಯುವ ನೀರು ಕಾಮಗಾರಿಗಳು ನಡೆಯಲಿವೆ ಎಂದರು.

ಬೇಸಿಗೆಯಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಕುರಿತು ಈಗಾಗಲೆ ಎಂ.ವೈ.ಪಾಟೀಲ, ಬಿ.ಆರ್.ಪಾಟೀಲ ಅವರೊಂದಿಗೆ ಸೇರಿ ಉಪ ಮುಖ್ಯಮಂತ್ರಿ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ ಅವರಿಗೆ ಭೇಟಿಯಾಗಿ ಮಹಾರಾಷ್ಟದಿಂದ ಭೀಮಾ ನದಿಯಿಂದ ಕುಡಿಯುವ ನೀರು ಬಿಡುಗಡೆಗೆ ಒತ್ತಾಯ ಮಾಡಲಾಗಿದೆ ಎಂದ ಅವರು, ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ ಕುರಿತು ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪಕ್ಷದ ಹೈಕಮಾಂಡ್ ಸೂಕ್ತ ಸಮಯದಲ್ಲಿ ನಿರ್ಧರಿಸಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಂದ್ರಿಕಾ ಪರಮೇಶ್ವರ, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್ಇದ್ದರು.

# ತವರಿನ ಸ್ಪರ್ಶ ನೀಡುವ ಹಾರಕೂಡ ಶ್ರೀ ಮಠ



**ಬಸವಕಲ್ಯಾಣ:** ಸರ್ವ ಸಮುದಾಯದ ಭಕ್ತರಿಗೆ ಸಮನ್ವಯ ತೊಟ್ಟಿಲಿನಂತಿರುವ ಹಾರಕೂಡ ಶ್ರೀಮಠ ಎಲ್ಲರಿಗೂ ತವರಿನ ಸ್ಪರ್ಶ ನೀಡುವ ಅದ್ಭುತ ವಾತ್ಸಲ್ಯದ ತಾಣವಾಗಿದೆ ಎಂದು ಡಾ. ಸಿದ್ದರಾಮ ಬೆಲ್ದಾಳ ಶರಣರು ನುಡಿದರು.

ಕರ್ನಾಟಕ ಸರಕಾರದಿಂದ ರಾಷ್ಟ್ರೀಯ ಬಸವ ಪುರಸ್ಕಾರ ಪಡೆದ ಡಾ. ಸಿದ್ದರಾಮ ಬೆಲ್ದಾಳ ಶರಣರು ತಾಲೂಕಿನ ಹಾರಕೂಡ ಮಠದೊಡೆಯರಾದ ಡಾ. ಚನ್ನವೀರ ಶಿವಾಚಾರ್ಯರಿಂದ ಗೌರವ ಸತ್ಕಾರ ಸ್ವೀಕರಿಸಿ ಮಾತನಾಡಿದ ಶರಣರು, ನನ್ನ ಆಧ್ಯಾತ್ಮ ಪಯಣದ ಪ್ರಥಮದಲ್ಲಿ ಯೋಗ ಸಾಧನೆಗಾಗಿ ಪ್ರೇರಣೆ ನೀಡಿದವರು ಹಾರಕೂಡದ ಲಿಂಗೈಕ್ಯ ಚೆನ್ನಬಸವ ಶಿವಯೋಗಿಗಳು ಅವರ ಪ್ರಸಾದ ವಾಣಿಯಿಂದ ಅದ್ಭುತ ಪವಾಡಗಳೇ ನಡೆದಿವೆ.

ಅವರ ಸರಳ ಮತ್ತು ನಿರ್ಮೋಹ ಜೀವನ ಪಥ ಇಂದಿನ ಸಂತ ವರ್ಗಕ್ಕೆ ಮಾದರಿಯಾಗಿದೆ. ಇಂದಿನ ಪೀಠಾಧಿಪತಿಗಳಾದ ಡಾ. ಚನ್ನವೀರ ಶಿವಾಚಾರ್ಯರು ಬಸವ ಚಿಂತನೆ ಮತ್ತು ಶರಣ ಸಂಸ್ಕೃತಿಗೆ ನೀಡಿರುವ ಕೊಡುಗೆ ಅನನ್ಯ.

ಹಾರಕೂಡ ಶ್ರೀಗಳಿಂದ ಸತ್ಕಾರ ಪಡೆದಿರುವುದು ನನಗೆ ತುಂಬಾ ಖುಷಿಯಾಗಿದ್ದು ತವರಿನ ಸಂಭ್ರಮ ಅನುಭವಿಸಿದ್ದಂತಾಗಿದೆ ಎಂದು ನುಡಿದರು. ಹಾರಕೂಡ ಶ್ರೀಮಠದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಡಾ ಚನ್ನವೀರ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು.

ಸಂಗಣ್ಣ ಪಾಟೀಲ, ರಾಜಶೇಖರ ಹೊಗತಾಪುರೆ, ವಿಜಯಕುಮಾರ ಸಂಗೋಳಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಮಲ್ಲಿನಾಥ ಹಿರೇಮಠ ಹಾರಕೂಡ ಸ್ವಾಗತಿಸಿದರು. ಕಾರ್ತಿಕ ಸ್ವಾಮಿ ಯಲದಗುಂಡಿ, ಶರಣಪ್ಪ ಜಮಾದಾರ ಸಂಗೀತ ಸೇವೆ ಸಲ್ಲಿಸಿದರು. ಅಂಬಾರಾಯ ಉಗಾಜಿ ನಿರೂಪಿಸಿದರು.

# ಲೋಕಾಯುಕ್ತ ಬಲೆಗೆ ಪಿಐ..!

**ಗುರುಮಠಕಲ್:** ಲಂಚ ಸ್ವೀಕರಿಸುತ್ತಿದ್ದ ಆರೋಪದಲ್ಲಿ ಗುರುಮಠಕಲ್ ಪೊಲೀಸ್ ಠಾಣೆಯ ಪಿಐ ವೀರಣ್ಣ ದೊಡ್ಡಮನಿ ಅವರನ್ನು ಯಾದಗಿರಿ ಲೋಕಾಯುಕ್ತ ಪೊಲೀಸರು ಶುಕ್ರವಾರ ರಾತ್ರಿ ಟ್ರ್ಯಾಪ್ ಕಾರ್ಯಾಚರಣೆ ಮೂಲಕ ಬಂಧಿಸಿದ್ದಾರೆ.



ದೂರುದಾರರಾದ ಆನಂದ್ ಭಜಂತ್ರಿ ಗೋಪಾಲಪುರ ವಿರುದ್ಧ ದಾಖಲಾಗಿದ್ದ ಪ್ರಕರಣಗಳಲ್ಲಿ ಸಹಾಯ ಮಾಡುವುದಾಗಿ ಹೇಳಿ ₹1 ಲಕ್ಷ ಲಂಚ ಬೇಡಿಕೆ ಇಟ್ಟಿದ್ದರೆಂದು ಆರೋಪಿಸಲಾಗಿದೆ. ಅಧಿಕೃತ ವಸತಿಗೃಹದಲ್ಲಿ ಲಂಚದ ಹಣ ಸ್ವೀಕರಿಸುವ ವೇಳೆ ಲೋಕಾಯುಕ್ತ ತಂಡ ದಾಳಿ ನಡೆಸಿ ಬಂಧಿಸಿದೆ.

ಕಾರ್ಯಾಚರಣೆಯನ್ನು ಡಿವೈಎಸ್‌ಪಿ ಜೆ.ಹೆಚ್. ಇನಾಂದಾರ್ ನೇತೃತ್ವದಲ್ಲಿ ಪಿಐ ಸಿದ್ರಾಯ ಬಾಳೂರ್ಗಿ ಹಾಗೂ ಸಿಬ್ಬಂದಿಗಳಾದ ನವೀನ್, ಅಮರ್, ರವಿ ಸೇರಿದಂತೆ ಯಾದಗಿರಿ ತಂಡ ನಡೆಸಿದ್ದು, ಯಾದಗಿರಿ ಲೋಕಾಯುಕ್ತ ಎಸ್‌ಪಿ ಅವರ ಮೇಲ್ವಿಚಾರಣೆಯಲ್ಲಿ ತನಿಖೆ ಮುಂದುವರೆದಿದೆ.

# ಯುಪಿಐ ಐಡಿಗೆ ಅನಧಿಕೃತ ಹಣ ವರ್ಗಾವಣೆ: ಮಹಿಳಾ ಅಧಿಕಾರಿಗೆ ಪಂಗನಾಮ..!

**ಕಲಬುರ್ಗಿ:** ಯುಪಿಐ ಐಡಿಗೆ ಅನಧಿಕೃತವಾಗಿ ಸುಮಾರು 43,594ರೂ.ಗಳನ್ನು ವರ್ಗಾವಣೆ ಮಾಡಿಕೊಂಡ ಪರಿಣಾಮ ಕೃಷಿ ಉತ್ಪನ್ನ ಮಾರುಕಟ್ಟೆ ಸಹಾಯಕ ಮಾರುಕಟ್ಟೆ ಅಧಿಕಾರಿಯೊಬ್ಬರಿಗೆ ವಂಚಿಸಿದ್ದಾರೆ. ಎಪಿಎಂಸಿಯಲ್ಲಿನ ಸಹಾಯಕ ಮಾರುಕಟ್ಟೆ ಅಧಿಕಾರಿ ಶ್ರೀಮತಿ ಲಕ್ಷ್ಮೀ ಗಂಡ ವಿಶಾಲ್ ತಿವಾರಿ ಅವರೇ ಹಣ ಕಳೆದುಕೊಂಡ ದುರ್ದೈವಿ.

8000ರೂ.ಗಳು ಕಳೆದ ಮೇ 2ರಂದು ಯುಪಿಐ ಐಡಿಗೆ ಅನಧಿಕೃತವಾಗಿ ಹಣ ವರ್ಗಾವಣೆಯಾಗಿದ್ದು ಗೊತ್ತಾಗಿ ಮಹಿಳಾ ಅಧಿಕಾರಿಯು ಸೂಪರ್ ಮಾರ್ಕೆಟ್‌ನ ಕರ್ನಾಟಕ ಗ್ರಾಮೀಣ ಬ್ಯಾಂಕ್ ಹಾಗೂ ಎಸ್‌ಬಿಐ ಬ್ಯಾಂಕ್ ಖಾತೆಯಿಂದ ಗೂಗಲ್ ಪೇ ವರ್ಗಾವಣೆಯಾದ ಕುರಿತು ಪರಿಶೀಲಿಸಿದರು. ತಮ್ಮ ಅರಿವಿಗೆ ಬಾರದೇ ಹಾಘೂ ಅನುಮತಿ ಇಲ್ಲದೇ 43,594ರೂ.ಗಳ ಹಣ ವರ್ಗಾವಣೆ ಮಾಡಿಕೊಂಡಿರುವ ಕುರಿತು ದೂರು ಸಲ್ಲಿಸಿದ್ದು, ಈ ಕುರಿತು ಸಿಇಎನ್ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# "ಕೇಲುಕಥೆ" ಸಾಹಿತ್ಯ ಕಾರ್ಯಕ್ರಮ



**ಕಲಬುರಗಿ:** ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಆಕಾಶವಾಣಿ ಕಲಬುರಗಿ ಇವರ ಸಹಯೋಗದಲ್ಲಿ ನಿನ್ನೆ ಶನಿವಾರ ದಿನಾಂಕ 9 ಮೇ 2026 ರ ಬೆಳಿಗ್ಗೆ 11:00 ಗಂಟೆಗೆ ಕಲಬುರಗಿ ಆಕಾಶವಾಣಿಯ ಸ್ಟುಡಿಯೋದಲ್ಲಿ "ಕೇಳುಕಥೆ" ಸಾಹಿತ್ಯ ವೇದಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಹಿರಿಯ ಸಾಹಿತಿಗಳಾದ ಶ್ರೀ ಎಚ್.ಟಿ.ಪೋತೆ ಅವರು "ಮಾದನ ಕರೆಂಟ್ ಕತಂತ್ರ", ಶ್ರೀ ಸಿದ್ದರಾಮ ಹೊನ್ಕಲ್ ರವರು "ಧರೆಹತ್ತಿ ಉರಿದೆಡೆ", ಶ್ರೀಮತಿ ಸಂಧ್ಯಾ ಹೊನಗುಂಟಿಕರ್ ರವರು "ಮತ್ತ ನಕ್ಷತ್ರ ನಕ್ಕವು" ಹಾಗೂ ಮಹಾಂತೇಶ ನವಲಕಲ್ ರವರು "ದೇವಾನಾಂಪ್ರಿಯನಾಗುವತ್ತ" , ಎಂಬ ಕಥೆಗಳನ್ನು ಪ್ರಸ್ತುತ ಪಡಿಸಿದರು. ಕಾರ್ಯಕ್ರಮದಲ್ಲಿ ಕೇಂದ್ರ ಸಾಹಿತ್ರ ಅಕಾಡೆಮಿಯ ಸಾಮಾನ್ಯ ಸಲಹಾ ಸಮೀತಿಯ ಸದಸ್ಯರಾದ ಶ್ರೀ ಬಸವರಾಜ ಸಾದರ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಆಕಾಶವಾಣಿ ಕಲಬುರಗಿಯ ಸಹಯೋಗದೊಂದಿಗೆ ಆಯೋಜಿಸಿದ್ದ ಈ ಸಾಹಿತ್ಯ ವೇದಿಕೆ ಕಾರ್ಯಕ್ರಮ ಭಾರತದಲ್ಲೆ ಮೊದಲ ಪ್ರಯತ್ನವಾಗಿದ್ದು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಆಕಾಶವಾಣಿ ಕೇಂದ್ರ ಕಲಬುರಗಿಯ ಸಿಬ್ಬಂಧಿ ವರ್ಗದವರಿಗೂ ಹಾಗೂ ಉಪಸ್ಥಿತರಿದ್ದ ಎಲ್ಲ ಸಾಹಿತಾಸಕ್ತರಿಗೂ ಧನ್ಯವಾದಗಳನ್ನ ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಕಲಬುರಗಿ ಆಕಾಶವಾಣಿ ಕೇಂದ್ರದ ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ಶ್ರೀ ಗೋಪಾಲ್ ನಾಯಕ್ ರವರು ಸರ್ವರನ್ನೂ ಸ್ವಾಗತಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಆಕಾಶವಾಣಿ ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥರಾದ ಶ್ರೀ ಬಿ.ಸಿದ್ದಣ್ಣ ರವರು ವಂದಿಸಿದರು. ತಾತ್ಕಾಲಿಕ ಉದ್ಘೋಶಕರಾದ ಶ್ರೀಮತಿ ನೀರಜಾ ಕಾರಟಗಿ ರವರು ಕಾರ್ಯಕ್ರಮ ನಿರೂಪಿಸಿದರು.

# ಪವಿತ್ರ ಹಜ್ ಯಾತ್ರಿಕರಿಗೆ ಬೀಳ್ಕೊಡುಗೆ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ



ಪವಿತ್ರ ಸ್ಥಳ ಹಜ್ ಯಾತ್ರೆಗೆ ತೆರಳುವ ಹಾಜಿ ಗಳಿಗೆ ಬಿಳ್ಕೊಡುಗೆ ಕಾರ್ಯಕ್ರಮ ಶನಿವಾರ ನಡೆಯಿತು.ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಾಜಿ ಗಳು ಜಾಮಿಯಾ ಮಸೀದಿ ಮುತುವಲ್ಲಿ ತೆಲಿಗಿ ಕಾಸಿಂಸಾಬ್ ಶ್ರೀಮತಿ ಖಾಜಾ ಬನ್ನಿ ತೆಲಿಗಿ ಕಾಸಿಂಸಾಬ್ ಅಕ್ಕ ಶಾಜಾದ್ ಬೇಗಂ ಶಾಹಿದ್ ಶ್ರೀಮತಿ ಯಾಸ್ಮಿನ್ ಶಾಹಿದ್ ಇವರಿಗೆ ಮುಸ್ಲಿಂ ಸಮಾಜದ ವತಿಯಿಂದ ಅಭಿನಂದಿಸಿ ಬೀಳ್ಕೊಡಲಾಯಿತು.

ಈ ಕಾರ್ಯಕ್ರಮದಲ್ಲಿ ಹಜ್ ಯಾತ್ರೆಗೆ ತೆರಳುವ ಹಾಜಿ ಶಾಹಿದ್ ಶ್ರೀಮತಿ ಯಾಸ್ಮಿನ್ ಹಗರಿಬೊಮ್ಮನಹಳ್ಳಿ 2ನೇ ವಾರ್ಡ್ ಕೆ ಜಿ ನ್ ಶಾದಿ ಮಾಲ್‌ನಲ್ಲಿ ಅನ್ನಸಂತರ್ಪಣೆ ಮಾಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಶ್ಯಾಬುದ್ದೀನ್ ಕಾರ್ಯ ಅಧ್ಯಕ್ಷರು ವಿಜಯನಗರ ಜಿಲ್ಲೆ ಮಾನವ ಹಕ್ಕುಗಳ ಹಜ್ ಯಾತ್ರೆ ಅತ್ಯಂತ ಪವಿತ್ರವಾದದ್ದು ಈ ಯಾತ್ರೆ ವ್ಯಕ್ತಿಯ ಆತ್ಮ ಶುದ್ದಿಗೆ ದಾರಿ ತೋರಿಸುವುದು ಜೊತೆಗೆ ಸಮಾಜದಲ್ಲಿ ಸಹಾನುಭೂತಿ ಸ್ವಹಾರ್ದತೆಯನ್ನು ಬೆಳೆಸುತ್ತದೆ ಎಂದು ಹೇಳಿದರು ಹಗರಿಬೊಮ್ಮನಹಳ್ಳಿ ಮುಸ್ಲಿಂ ಸಮಾಜದ ಮುಖಂಡರು. ಭಾಗವಹಿಸಿದ ನಜೀರ್ ಸಾಬ್ ಮುತುವಲ್ಲಿ ರಾಮನಗರ ಮಸೀದಿ ಮೈಬೂಬ್ ಸಬ್ ವೈಸ್ ಮುತುವಲ್ಲಿ ಊ. ಏ. ದಾದಾಪೀರ್ ಜಾಮಿಯಾ ಮಸೀದಿ ವೈಸ್ ಮುತುಲಿ ಕೆ.ಶ್ಯಾಬುದ್ದೀನ್ ಅಧ್ಯಕ್ಷರು ಮಾನವ ಹಕ್ಕುಗಳ ರಾಮತ್ ಹುಲಾ ಸಾಬ್ ಎಚ್ ಕೆ ಕಾರ್ಪೆಂಟರ್ ಅಬ್ದುಲ್ ಸಾಬ್ ಎನ್ ಆರ್ ಎಸ್ ಸಾವೂಲ್ ಸಾಬ್ ಟೈಲರ್ ಯುನುಸ್ ಸಬ್ ರಿಯಾಜ್ ಟೈಲರ್ ಷರೀಫ್ ಸಾಬ್ ಬ್ರೆಡ್ ನಜೀರ್ ಸಾಬ್ ಅಮಿತ್ ಸಬ್ ಖಾಜಾ ಮಿರ್ ಸಬ್, ಇನ್ನೂ ಅನೇಕ ಮುಸ್ಲಿಂ ಮುಖಂಡರು ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಈಗಲ್‌ಟನ್ ರೆಸಾರ್ಟ್: ಎಂಬ ಸುದ್ದಿ ಸುಳ್ಳು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ತಮಿಳುನಾಡು ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿನ ಈಗಲ್‌ಟನ್ ರಿಸಾರ್ಟ್‌ಗೆ ಸ್ಥಳಾಂತರಿಸಲಾಗಿದೆ ಎಂಬ ರಾಜಕೀಯ ಊಹಾಪೋಹಗಳಿಗೆ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಸ್ಪಷ್ಟನೆ ನೀಡಿದ್ದಾರೆ. ಈ ಕುರಿತ ಎಲ್ಲಾ ವರದಿಗಳನ್ನು ಸಂಪೂರ್ಣ ಸುಳ್ಳು ಎಂದು ತಳ್ಳಿಹಾಕಿದ್ದಾರೆ.

ಬೆಂಗಳೂರುದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಡಿಕೆ ಶಿವಕುಮಾರ್ ಅವರು, "ಯಾವುದೇ ತಮಿಳುನಾಡು ಕಾಂಗ್ರೆಸ್ ಶಾಸಕರು ಈಗಲ್‌ಟನ್ ರಿಸಾರ್ಟ್‌ಗೆ ಬಂದಿಲ್ಲ. ಅವರು ಹೈದರಾಬಾದ್‌ಗೆ ತೆರಳಿದ್ದಾರೆ ಎನ್ನುವುದೂ ಸತ್ಯವಲ್ಲ. ಈ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಹೇಳಿದರು.

ತಮಿಳುನಾಡಿನ ಕಾಂಗ್ರೆಸ್ ಶಾಸಕರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ ಎಂಬ ಚರ್ಚೆಗಳು ಕಳೆದ ಕೆಲವು ದಿನಗಳಿಂದ ಜೋರಾಗಿದ್ದು, ವಿಶೇಷವಾಗಿ ಬೆಂಗಳೂರಿನ ಹೊರವಲಯದಲ್ಲಿರುವ ಈಗಲ್‌ಟನ್ ರಿಸಾರ್ಟ್‌ನಲ್ಲಿ ಶಾಸಕರನ್ನು ತಂಗಿಸಲಾಗಿದೆ ಎಂಬ ಮಾತುಗಳು ಹರಿದಾಡುತ್ತಿದ್ದವು. ಆದರೆ, ಈ ಎಲ್ಲ ವರದಿಗಳಿಗೆ ಡಿಕೆ ಶಿವಕುಮಾರ್ ತೆರೆ ಎಳೆದಿದ್ದಾರೆ.

ಪಕ್ಷದ ಹೈಕಮಾಂಡ್ ಯಾವುದೇ ಸೂಚನೆ ನೀಡಿದರೆ ಅದು ಬೇರೆ ವಿಷಯ. ಆದರೆ, ಈ ವಿಚಾರವಾಗಿ ಹೈಕಮಾಂಡ್ ನನ್ನೊಂದಿಗೆ ಯಾವುದೇ ಮಾತುಕತೆ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದರು.

# ಯುವ ನಾಯಕತ್ವಕ್ಕೆ ಚಾಣಕ್ಯ ನೀತಿಯ ದಿಕ್ಸೂಚಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಇಂದಿನ ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಗ್ರಾಮ ಮಟ್ಟದ ಯುವಕರು ಸಮರ್ಥ ನಾಯಕರಾಗಿ ಹೊರಹೊಮ್ಮಬೇಕು ಎಂಬ ಆಶಯದೊಂದಿಗೆ ಪತ್ರಕರ್ತ ಹಣಮಂತ್ ದೇಶಮುಖ್ ಅವರು ರಚಿಸಿದ 'ಐ ಆಮ್ ಎ ಲೀಡರ್' ಪುಸ್ತಕವು ಇತ್ತೀಚೆಗೆ ಬಿಡುಗಡೆಯಾಯಿತು. ಗುರುಮಿಟ್ಕಲ್ ಮತಕ್ಷೇತ್ರದ ಶಾಸಕ ಶರಣಗೌಡ ಕಂದಕೂರ್ ಅವರು ಈ ಕೃತಿಯನ್ನು ಸಾಂಕೇತಿಕವಾಗಿ ಲೋಕಾರ್ಪಣೆಗೊಳಿಸಿ, ಯುವ ಸಮೂಹಕ್ಕೆ ಇದೊಂದು ಅಮೂಲ್ಯ ಮಾರ್ಗದರ್ಶಿಯಾಗಿದೆ ಎಂದು ಶ್ಲಾಘಿಸಿದರು. ಪ್ರಾಚೀನ ಚಾಣಕ್ಯ ನೀತಿಗಳನ್ನು ಇಂದಿನ ರಾಜ-ಕಾರಣಕ್ಕೆ ಅನ್ವಯಿಸಿಕೊಳ್ಳುವ ವಿಧಾನವನ್ನು ಈ ಪುಸ್ತಕವು ಅತ್ಯಂತ ಆಕರ್ಷಕವಾಗಿ ವಿವರಿಸುತ್ತದೆ.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಶಾಸಕ ಶರಣಗೌಡ ಕಂದಕೂರ್ ಅವರು, ರಾಜಕೀಯ ಕ್ಷೇತ್ರದಲ್ಲಿ ಬೆಳೆಯಲು ಬಯಸುವವರಿಗೆ ಈ ಕೃತಿಯು ಒಂದು ಕೈಪಿಡಿಯಂತೆ ಸಹಕಾರಿಯಾಗಲಿದೆ ಎಂದರು. ಹನಮಂತ್ ಅವರು ಪತ್ರಿಕೋದ್ಯಮದ ಜೊತೆಗೆ ಸಾಮಾಜಿಕ ಕಳಕಳಿಯ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವುದು ಅಭಿನಂದನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ರಾಜಕೀಯ ಆಸಕ್ತಿಯಿರುವ ಗ್ರಾಮೀಣ ಭಾಗದ ಯುವಕರಿಗೆ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಈ ಪುಸ್ತಕವು ಹೊಸ ಚೈತನ್ಯ ನೀಡಲಿದೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಲೇಖಕ ಹಣಮಂತ್ ದೇಶಮುಖ್ ಅವರು ಮಾತನಾಡಿ, ಕಲ್ಯಾಣ ಕರ್ನಾಟಕದ ಉದಯೋನ್ಮುಖ ನಾಯಕರಾಗಿರುವ ಶರಣಗೌಡ ಕಂದಕೂರ್ ಅವರೇ ಈ ಪುಸ್ತಕಕ್ಕೆ ಮುನ್ನುಡಿ ಬರೆದು ಬಿಡುಗಡೆ ಮಾಡಿರುವುದು ಹೆಮ್ಮೆಯ ವಿಷಯ ಎಂದರು. ಶಾಸಕರ ಜನಪರ ಕಾರ್ಯವೈಖರಿಯಿಂದ ಪ್ರೇರಿತನಾಗಿ ಈ ಪುಸ್ತಕಕ್ಕೆ ಅವರಿಂದಲೇ ಮುನ್ನುಡಿ ಬರೆಯಿಸಿದ ಬಗ್ಗೆ ಹರ್ಷ ವ್ಯಕ್ತಪಡಿಸಿದ ಲೇಖಕರು, ಈ ಕೃತಿಯು ನಾಯಕತ್ವದ ಕನಸು ಕಾಣುವ ಪ್ರತಿಯೊಬ್ಬ ಯುವಕನಿಗೂ ಸ್ಫೂರ್ತಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ಸಾರಿಗೆ ನೌಕರರಿಂದ ಮೇ 20ರಿಂದ ಸತ್ಯಾಗ್ರಹ

• ಮಲ್ಲಮ್ಮ ನುಡಿ ವಾರ್ತೆ ಕಲಬುರ್ಗಿ



ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳ ನೌಕರರ 38 ತಿಂಗಳು ಹಿಂಬಾಕಿ ವೇತನ ಮತ್ತು 2024ರ ಜನವರಿ 1ರಿಂದ ವೇತನ ಪರಿಷ್ಕರಣೆ ಹಾಗೂ ಇನ್ನುಳಿದ 8 ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಇದೇ ಮೇ 20ರಿಂದ ಸಾರಿಗೆ ನೌಕರರ ಅನಿರ್ಧಿಷ್ಟ ಮಾಡು ಇಲ್ಲವೇ ಮಡಿ ಹೋರಾಟ ಆರಂಭಿಸಲಿದ್ದು, ಆ ನಿಮಿತ್ಯ ಇದೇ ಮೇ 12ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕೊಠಾರಿ ಭವನದಲ್ಲಿ ಮುಷ್ಕರದ ಸಿದ್ಧತಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಜಿಲ್ಲಾಧ್ಯಕ್ಷ ಡಾ. ಚಂದ್ರಕಾಂತ್ ಗದ್ದಗಿ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೂರ್ವಭಾವಿ ಸಿದ್ಧತಾ ಸಮಾವೇಶದಲ್ಲಿ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳಿ, ಕರ್ನಾಟಕ ರಾಜ್ಯ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು), ಕರ್ನಾ1ಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಕಿರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ರಾಜ್ಯ ಮುಖಂಡರು ಪಾಲ್ಗೊಳ್ಳುವರು ಎಂದರು.

ಶೇಕಡಾ 25ರಷ್ಟು ವೇತನ ಹೆಚ್ಚಳವನ್ನು ಕಳೆದ 2024ರ ಜನವರಿ 1ರಿಂದ ಮಾಡಬೇಕೆಂದು ಮತ್ತು 38 ತಿಂಗಳುಗಳ ವೇತನ ಹಿಂಬಾಕಿ ಪಾವತಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಕಳೆದ ಜನವರಿ 29ರಂದು ಹಮ್ಮಿಕೊಂಡಿದ್ದ ಬೆಂಗಳೂರು ಚಲೋ ಹೋರಾಟವನ್ನು ಕಾಂ. ಅನಂತಸುಬ್ಬರಾವ್ ಅವರ ಹಠಾತ್ ನಿಧನದಿಂದಾಗಿ ಫೆಬ್ರವರಿ 19ಕ್ಕೆ ಮುಂದೂಡಬೇಕಾಯಿತು. ಸರ್ಕಾರವು 2 ತಿಂಗಳುಗಳ ಹಿಂಬಾಕಿ ನೀಡುವುದಾಗಿ ಮತ್ತು 2025ರ ಏಪ್ರಿಲ್‌ನಿಂದ ವೇತನ ಪರಿಷ್ಕರಣೆ ಮಾಡುವುದಾಗಿ ಏಕಪಕ್ಷೀಯವಾಗಿ ಹೊರಡಿಸಿದ ಆದೇಶಕ್ಕೆತಿದ್ದುಪಡಿ ಮಾಡಬೇಕೆಂದು ಆಗ್ರಹಿಸುತ್ತಿದ್ದೇವೆ ಎಂದು ಅವರು ಹೇಳಿದರು.

ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಕ್ರಿಯಾ ಸಮಿತಿಯ ಜೊತೆ ನಾಲ್ಕೂ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ಮಾತುಕತೆಗಳನ್ನು ನಡೆಸಿ, ಆರ್ಥ ಮಾಡಿದ ವೇತನ ಹೆಚ್ಚಳದ ಪ್ರಮಾಣವನ್ನು ನಾವು ಒಪ್ಪಲಿಲ್ಲ. ಸಾರಿಗೆ ಸಚಿವರ ಅಧ್ಯಕ್ಷತೆಯ ನಡೆದ ಸಭೆಯಲ್ಲಿ ಬೇಡಿಕೆಗಳನ್ನು ಮತ್ತೊಮ್ಮೆ ದೃಢವಾಗಿ ತಿಳಿಸಿದೆವು. ಸಾರಿಗೆ ನೌಕರರು ಮಾಡುತ್ತಿರುವ ಶ್ರಮದಾಯಕ ಕೆಲಸದ ಬಗ್ಗೆ, ದಿನನಿತ್ಯ ಏರುತ್ತಿರುವ ಅಗತ್ಯ ವಸ್ತುಗಳ ಬೆಲೆಗಳ ನಡುವೆ ಸಂಸಾರ ತೂಗಿಸಬೇಕಾಗಿರುವುದರಿಂದ ವೇತನ ಹೆಚ್ಚಳದ ಅನಿವಾರ್ಯತೆಯ ಬಗ್ಗೆ, ಸಾರಿಗೆ ಸಂಸ್ಥೆಯಲ್ಲಿ 4 ವರ್ಷಗಳಿಗೊಮ್ಮೆ ನಡೆದುಕೊಂಡು ಬಂದಿರುವ ಪರಿಷ್ಕರಣೆಯ ಸುದೀರ್ಘ ಪರಂಪರೆಯ ಬಗ್ಗೆ, ಕೋವಿಡ್-19 ಸಾಂಕ್ರಾಮಿಕ ಕಾಲದಲ್ಲಿ ಸಾರಿಗೆ ನೌಕರರು ಸಮಾಜಕ್ಕೆ ಒದಗಿಸಿರುವ ಸೇವೆ – ಅದಕ್ಕೆ ಸರ್ಕಾರ ನೀಡಬೇಕಾಗಿರುವ ಸೂಕ್ತ ಪ್ರತಿಫಲದ ಬಗ್ಗೆ ಹಾಗೂ ಸರ್ಕಾರದ ಮಹತ್ವದ ಯೋಜನೆಯಲ್ಲಿ ಸಾರಿಗೆ ನೌಕರರ ಪರಿಶ್ರಮದ ಬಗ್ಗೆ, ಬಾಟಾ ಮತ್ತಿತರ ಭತ್ಯೆಗಳನ್ನು ಹೆಚ್ಚಿಸುವ ಬಗ್ಗೆ. ಹೀಗೆ ನಮ್ಮ ಬೇಡಿಕೆಯಲ್ಲಿರುವಂತೆ ಕಳೆದ 2024ರ ಜನವರಿ 1ರಿಂದಲೇ ನೌಕರರಿಗೆ ಸಮರ್ಪಕವಾಗಿ ವೇತನ ಹೆಚ್ಚಳ ಮಾಡಬೇಕೆಂದು ವಾದ ಮಂಡಿಸಿದೆವು ಎಂದು ಅವರು ವಿವರಿಸಿದರು.

ನಾವು ಹೇಳಿದ್ದನ್ನೆಲ್ಲ ಒಪ್ಪಿದರೂ ಸಹ ನಾವು ವೇತನ ಹೆಚ್ಚಳಕ್ಕೆ ನಿಗಮಗಳಲ್ಲಿ ಹಣವಿಲ್ಲದ ಕಾರಣ, ರಾಜ್ಯದ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿಯ ಚರ್ಚಿಸಿ ತಿಳಿಸುವುದಾಗಿ ನಮಗೆ ಸಚಿವರು ಹೇಳಿದರು. ಇದು ನಮ್ಮಲ್ಲಿ ಅಸಮಾಧಾನ ತಂದಿತು. ಆ ಸಂಜೆಯೇ ಜಂಟಿ ಕ್ರಿಯಾ ಸಮಿತಿ ಸಭೆ ಸೇರಿದೆವು. ಸರ್ಕಾರ ಮತ್ತು ಆಡಳಿತ ವರ್ಗದ ಜೊತೆ ಸಂಪ ಮಾತುಕತೆಗಳ ಮೂಲಕವೇ ನೌಕರರ ವೇತನ ಹೆಚ್ಚಳ ಮಾಡಿಸಲು ಯತ್ನಿಸಿದ್ದೆವು. ಆದರೆ ಅದಕ್ಕೆ ಮನಸ್ಸು ಮಾಡದೇ ವಿಳಂಬ ಧೋರಣೆ ಅನುಸರಿಸಿ ನೌಕರರ ತಾಳ್ಮೆಯನ್ನು ಪರೀಕ್ಷಿಸುತ್ತಿದೆ. ಆದ್ದರಿಂದ ಇನ್ನು ಹೆಚ್ಚು ಸಮಯ ಕಾಯಲು ಸಾಧ್ಯವಿಲ್ಲವೆಂದು ಮತ್ತು ಮೇ 20ರಿಂದ ರಾಜ್ಯದ ಎಲ್ಲ ಸಾರಿಗೆ ನಿಗಮಗಳ ನೌಕರರ ಅನಿರ್ದಿಷ್ಟಾವ? ನೀಡಲು ನಾವು ತೀರ್ಮಾನಿಸಿ, ಕಳೆದ ಏಪ್ರಿಲ್ 29ರಂದು ಸಂಜೆಯೇ ಸರ್ಕಾರಕ್ಕೆ, ಎಲ್ಲ ಸಾರಿಗೆ ನಿಗಮಗಳ ಮಾನ್ಯ ನಿರ್ದೇಶಕರುಗಳಿಗೆ ಮತ್ತು ಕಾರ್ಮಿಕ ಇಲಾಖೆಗೆ ನೋಟೀಸ್ ನೀಡಿದೆವು ಎಂದು ಅವರು ತಿಳಿಸಿದರು.

ವೇತನ ಹೆಚ್ಚಳ ಮತ್ತಿತರ ನ್ಯಾಯಸಮ್ಮತ ಹಕ್ಕುಗಳನ್ನು ಪಡೆದುಕೊಳ್ಳಲು ಮುಷ್ಕರದ ಅಂತಿಮ ಹಾದಿಯನ್ನು ಈಗ ನಾವು ಹಿಡಿಯಲೇಬೇಕಾಗಿದೆ. ಸಾರಿಗೆ ನೌಕರರ ಶ್ರಮಶಕ್ತಿಯನ್ನು ಪ್ರದರ್ಶಿಸಬೇಕಿದೆ. ಆದ್ದರಿಂದ ಎಲ್ಲರೂ ಒಗ್ಗಟ್ಟಿನಿಂದ ಮೇ 20ರಂದು ಬೆಳಿಗ್ಗೆ 6 ಗಂಟೆಯಿಂದ ರಾಜ್ಯಾದ್ಯಂತ ಎಲ್ಲ ನಿಗಮಗಳಲ್ಲಿ ತಮ್ಮ ಕೆಲಸಗಳಿಗೆ ಹಾಜರಾಗದೆ, ನಮ್ಮ ಬೇಡಿಕೆಗಳು ಇತ್ಯರ್ಥವಾಗುವವರೆಗೂ ಶಾಂತಿಯುತವಾಗಿ ಮುಷ್ಕರ ನಡೆಸಬೇಕು ಎಂದು ಅವರು ಮನವಿ ಮಾಡಿದರು.

ಮುಷ್ಕರದ ಕುರಿತು ಹುಬ್ಬಳ್ಳಿಯಲ್ಲಿ ಇಂದು, ಬೆಂಗಳೂರಿನಲ್ಲಿ ಮೇ 15ರಂದು ಸಹ ಪೂರ್ವಭಾವಿ ಸಿದ್ಧತಾ ಸಮಾವೇಶ ಜರುಗಲಿದೆ ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬಸವರಾಜ್ ಕಣ್ಣಿ, ಸಿದ್ದಪ್ಪ ಪಾಲ್ಕಿ, ನಾಗೇಂದ್ರಪ್ಪ ಚವ್ಹಾಣ್, ರಾಮಚಂದ್ರ ಹಯ್ಯಾಳಕರ್, ಮಾರುತಿ, ಗಣಪತಿ ಗೋಳಾ, ಸಿದ್ದಲಿಂಗ ನ್ಯಾಮನ್, ಸೂರ್ಯಕಾಂತ್ ಟೈಗರ್, ಪ್ರಕಾಶ್ ಸುಲೇಪೇಟಕರ್ ಮುಂತಾದವರು ಉಪಸ್ಥಿತರಿದ್ದರು.




















Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)